## ಮಂಗಳವಾರ, ೨೧ನೇ ಜನವರಿ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೧ ಘಂಟೆಗೆ ಸಮಾವೇಶಗೊಂಡಿತು. [ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್] ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಂಚಾಲಕ ಸಮಿತಿಯ ಚುನಾವಣೆ:

**ಮಾನ್ಯ ಅಧ್ಯಕ್ಷರು** : ಸಂಚಾಲಕ ಸಮಿತಿಯ ಚುನಾವಣೆಗಾಗಿ ಕೆಳಕಂಡ ಹದಿಮೂರು ಸದಸ್ಯರ ಹೆಸರುಗಳನ್ನು ಮಾನ್ಯಮಾಡಿ ಪ್ರಸ್ತಾವಿಸಲಾಗಿದೆ ಎಂದು, ಗೌರವಾನ್ವಿತ ಸದಸ್ಯರಿಗೆ ನಾನು ತಿಳಿಸಬೇಕಿದೆ:

೧. ಗೌರವಾನ್ವಿತ ಮೌಲಾನಾ ಅಬುಲ್ ಕಲಾಂ ಆಜ಼ಾದ್

೨. ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್

೩. ಸರ್ದಾರ್ ಉಜ್ವಲ್ ಸಿಂಗ್

೪. ಶ್ರೀಮತಿ ಜಿ. ದುರ್ಗಾಬಾಯಿ

೫. ಶ್ರೀ ಸತ್ಯನಾರಾಯಣ ಸಿನ್ಹ

೬. ಶ್ರೀ ಎಂ.ಅನಂತಶಯನಂ ಅಯ್ಯಂಗಾರ್

೭. ಶ್ರೀ ಎಸ್.ಎನ್. ಮಾನೆ

೮. ಶ್ರೀ ಕೆ.ಎಂ. ಮುನ್ಷಿ

೯. ದಿವಾನ್ ಚಮನಲಾಲ್

೧೦. ಮಿ. ಸೋಮನಾಥ ಲಾಹಿರಿ

೧೧. ಶ್ರೀ ಲಕ್ಷ್ಮೀನಾರಾಯಣ ಸಾಹು

ಕೇವಲ ಹನ್ನೊಂದು ಸದಸ್ಯರನ್ನು ಚುನಾಯಿಸಬೇಕು. ಯಾರೂ ಚುನಾವಣೆಯಿಂದ ಹಿಂಸರಿಯದಿದ್ದಲ್ಲಿ ದಾಮಾಷಾ ಪ್ರಾತಿನಿಧ್ಯದ ತತ್ತ್ವಕ್ಕೆ ಅನುಗುಣವಾಗಿ, ಏಕೈಕ ವರ್ಗಾವಣೆಯಾಗುವ ಮತವಿಧಾನದಿಂದ ಅಧೀನ ಕಾರ್ಯದರ್ಶಿಯ ಕೋಣೆಯಲ್ಲಿ (ಕೋಣೆ ನಂ. ೨೪, ನೆಲ ಅಂತಸ್ತು, ಮಂಡಳಿಯ ಸದನ) ಇಂದು ಮಧ್ಯಾಹ್ನ ೩ ಘಂಟೆಯಿಂದ ೫ ಘಂಟೆಯವರೆಗೆ ಚುನಾವಣೆ ನಡೆಯಲಿದೆ.

ಮುಂದಿನ ಬಾಬು ಪಂಡಿತ್ ಜವಾಹರ್‌ಲಾಲ್ ನೆಹರು ಅವರಿಂದ ನಿಲುವಳಿಯ ಪ್ರಸ್ತಾವ. ಅವರು ಇಲ್ಲಿ ನನಗೆ ಕಾಣುತ್ತಿಲ್ಲ. ಆದುದರಿಂದ ನಾವು ಚರ್ಚೆಯನ್ನು ಮುಂದುವರೆಸೋಣ. ಈ ಪ್ರಸ್ತಾಪವನ್ನು ಮುಂದೆ ಚರ್ಚೆಗೆ ತೆಗೆದುಕೊಳ್ಳುವವರೆಗೆ ಕಾಯೋಣ.

**ಶ್ರೀ ರಾಜ್‌ಕುಮಾರ್ ಚಕ್ರವರ್ತಿ** (ಬಂಗಾಳ : ಸಾಮಾನ್ಯ) : ನಾಮಪತ್ರವನ್ನು ಹಿಂತೆಗೆದುಕೊಳ್ಳಲು ನಿಗದಿತ ವೇಳೆ ಯಾವುದೆಂದು ವಿಚಾರಿಸಬಹುದೆ?

**ಮಾನ್ಯ ಅಧ್ಯಕ್ಷರು** : ಇಂದು ಮಧ್ಯಾಹ್ನ ೩ ಘಂಟೆಗೆ ಚುನಾವಣೆ ಪ್ರಾರಂಭವಾಗುವ ಮುನ್ನ ಯಾವಾಗಲಾದರೂ (ಹಿಂಸರಿಯಬಹುದು).

ಶ್ರೀ ಮಾಧವ ಮೆನನ್, ನಾವು ನಿರ್ಣಯದ ಬಗ್ಗೆ ಚರ್ಚೆಗೆ ಪ್ರಾರಂಭಿಸೋಣ.

ನಿರ್ಣಯ : ಧ್ಯೇಯೋದ್ದೇಶಗಳನ್ನು ಕುರಿತಂತೆ (ಮುಂದುವರೆದುದು)

**ಶ್ರೀ ಕೆ. ಮಾಧವ ಮೆನನ್** (ಮದರಾಸ್ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಿದ ನಿಲುವಳಿಯನ್ನು ಬೆಂಬಲಿಸಲು ನಾನಿಲ್ಲಿ ಬಂದಿದ್ದೇನೆ. ಪ್ರಸ್ತಾವಕ್ಕೆ ಅತ್ಯಲ್ಪ ವಿರೋಧ ವ್ಯಕ್ತಪಡಿಸಲಾಗಿದೆ. ಹೀಗಾಗಿ, ಯಾರಿಂದಲೂ ಹೆಚ್ಚೇನೂ ಬೆಂಬಲದ ಅಗತ್ಯವಿಲ್ಲವೆಂಬುದನ್ನು ಬಲ್ಲೆ. ಹೆಚ್ಚು ವಿಳಂಬಕ್ಕೆ ಆಸ್ಪದ ಕೊಡದಂತೆ, ಈ ನಿಲುವಳಿಯನ್ನು ಅಂಗೀಕರಿಸುವುದು ಅತ್ಯಗತ್ಯ. ಸರ್, ಅಲ್ಲಾದಿಯವರು ತಮ್ಮ ಭಾಷಣದಲ್ಲಿ ಹೇಳಿದಂತೆ ನೀವು ಬೇರಾವುದೇ ಸಂವಿಧಾನ ರಚನಾಸಭೆಯ ನಡವಳಿಗಳನ್ನು ಶೋಧಿಸಬಹುದು. ಅದೊಂದು ವ್ಯರ್ಥ ಕಾಲಕ್ಷೇಪ. ಸಭೆಯ ಇತರ ವ್ಯವಹಾರಗಳೂ ಪ್ರಾರಂಭವಾಗುವ ಮುನ್ನ ಅಂತಹ ಯಾವ ನಿಲುವಳಿಯೂ ಪ್ರಸ್ತಾವಕ್ಕೆ ಬರಲಿಲ್ಲ. ಅಂಗೀಕರಿಸಲ್ಪಡಲೂ ಇಲ್ಲ. ನಾವೀಗಾಗಲೆ ಬಹಳಷ್ಟು ಕಾದಿದ್ದೇವೆ. ನನ್ನ ಅಭಿಪ್ರಾಯದಲ್ಲಿ, ಇನ್ನು ತಡವಾದರೆ ನಮ್ಮ ಕರ್ತವ್ಯದಲ್ಲಿ ವಿಫಲರಾದಂತೆ. ನಾವು ಇದೇ ರಾಷ್ಟ್ರದ ಜನತೆಗಾಗಿ ಮಾಡುವುದೇನೆಂಬ ಉತ್ಸುಕತೆ, ಭರವಸೆಯಿಂದ ಜನರು ನಮ್ಮನ್ನು ನೋಡುತ್ತಿದ್ದಾರೆ. ಒಂದೇ ಒಂದು ಆಕ್ಷೇಪಣೆ ಎಂದರೆ, ಅದು ಆಕ್ಷೇಪಣೆ ಎನ್ನುವುದಾದರೆ, ಡಾ. ಜಯಕರ್ ಅವರು ಪ್ರಸ್ತಾವಿಸಿದ ತಿದ್ದುಪಡಿ. ಡಾ. ಜಯಕರ್, ನಮ್ಮನ್ನು ಕಾಯಬೇಕೆಂದು ಕೋರುತ್ತಾರೆ. ಅದು ಬಿಟ್ಟರೆ, ತಾತ್ವಿಕವಾಗಿ, ಈಗಾಗಲೆ ಪ್ರಸ್ತಾವಿಸಲಾದ ನಿಲುವಳಿಗಿಂತ ಅವರ ಪ್ರಸ್ತಾವ ಭಿನ್ನವಾಗಿಲ್ಲ; ಅಥವಾ ಈ ಸಭೆಯ ವ್ಯವಹಾರಗಳಲ್ಲಿ ಭಾಗವಹಿಸದೆ, ಗೈರುಹಾಜರಾದವರಿಗೊಂದು ಅವಕಾಶವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಇರಬಹುದು. ಈರ್ವರು ಸಹಭಾಗಿಗಳು ಇಲ್ಲಿ ಗೈರುಹಾಜರಾಗಿದ್ದಾರೆ; ಅವರಲ್ಲಿ ಒಬ್ಬರ ಅನುಪಸ್ಥಿತಿಗೆ ಕಾರಣ ತಿಳಿಯದು. ಇನ್ನೊಬ್ಬರಿಗೆ, ಇಲ್ಲಿಗೆ ಬರಲು ಸಾಧ್ಯವಾಗಿಲ್ಲವೆಂಬುದು ಡಾ. ಜಯಕರ್ ಅವರ ಹೇಳಿಕೆ. ಅವರಿಗಾಗಿ ಕಾಯವುದು ನ್ಯಾಯವೆ. ೨೦ನೇ ಜನವರಿಯಂದು ಹೇಗೂ ನಾವು ಮತ್ತೆ ಸೇರುತ್ತಿದ್ದೇವೆ. ಅಲ್ಲಿಯವರೆಗೆ ಕಾಯಬಾರದೇಕೆ ಎಂಬುದು ಅವರ ಪ್ರಶ್ನೆ. ಮಾನ್ಯರೆ, ನಾವು ಅವರ ಅಪೇಕ್ಷೆಯಂತೆ ಕಾದಿದ್ದೇವೆ. ಅವರ ಕೋರಿಕೆಯನ್ನು ನಾವು ತಳ್ಳಿಹಾಕಿದ್ದೇವೆಂದು ಅವರಿಗೆ ಇನ್ನಾವ ಕಾರಣವೂ ಇರಲಾರದೆಂದು ನಾವು ಭಾವಿಸುತ್ತೇವೆ.

ಡಾ. ಜಯಕರ್ ಅವರ ಆಕ್ಷೇಪಣೆಯೆಂದರೆ, ಮೇ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯ ನಿಬಂಧನೆಗಳಂತೆ, ಪ್ರಾರಂಭಿಕ ಸಭೆಯಲ್ಲಿ ಈ ತೆರನಾದ ನಿಲುವಳಿಯನ್ನು ಅಂಗೀಕರಿಸಲು ನಮಗೆ ತಡೆಯೊಡ್ಡಲಾಗಿದೆ. ಅದು, ಅದರದೇ ನಿಲುವಳಿಗೆ ವ್ಯತಿರಿಕ್ತವಾದ ಆಕ್ಷೇಪಣೆ ಈ ಸಭೆಯು ಧ್ಯೇಯೋದ್ದೇಶಗಳೇನೆಂಬುದನ್ನು ಆ ನಿಲುವಳಿಯೆ ವಿಶದಪಡಿಸುತ್ತದೆ. ಸಂವಿಧಾನದ ಮೂಲತತ್ತ್ವಗಳನ್ನು ಇಲ್ಲಿ ತಿಳಿಯ ಪಡಿಸಬೇಕಾದ ಅಗತ್ಯವಿಲ್ಲವೆಂಬುದು ಡಾ. ಜಯಕರ್ ಅವರ ವಾದ. ನಾವಿಲ್ಲಿ ಸಂವಿಧಾನದ ಮೂಲಭೂತ ಅಂಶಗಳನ್ನು ಉಲ್ಲೇಖಿಸಿದ್ದೇವೆಂದು ನನಗೆ ಅನಿಸುವುದಿಲ್ಲ. ನಾವು ಕೇವಲ ನಮ್ಮ ಧ್ಯೇಯ ಧೋರಣೆಗಳನ್ನು ಮಾತ್ರ ತಿಳಿಸಿದ್ದೇವೆ. ಮುಸ್ಲಿಮ್ ಲೀಗ್ ಪಕ್ಷದ ಪ್ರತಿನಿಧಿಗಳು ಈ ಸಭೆಗೆ ಬಾರದಿದ್ದಲ್ಲಿ, ಅವರು ಪ್ರತಿನಿಧಿಸುವ ರಾಜ್ಯಗಳೂ ಜೊತೆಗೂಡಲಾರವು ಎಂದು ಅವರು ಹೇಳಿದ್ದು ನನ್ನನ್ನು ಅಚ್ಚರಿಗೊಳಿಸಿತು. ಮುಸ್ಲಿಮ್ ಲೀಗ್ ಬಾರದೆ ನಿರ್ಣಯವನ್ನು ಅಂಗೀಕರಿಸಿದರೆ, ಮುಂದೆ ಹಿಂದುಸ್ತಾನ್, ಪಾಕಿಸ್ತಾನ್, ರಾಜಸ್ತಾನ್ ಎಂದು ರಾಜ್ಯಗಳು ಒಡೆದು ಹೋಳಾಗುತ್ತವೆ ಎಂದರು. (ಅಥವಾ ಪ್ರಾಯಶಃ ಕಲ್ಪಿಸಿಕೊಂಡರು). ನನಗೆ ಭರವಸೆ ಇದೆ, ಅಂತಹ ಅನಿರೀಕ್ಷಿತ ಪರಿಸ್ಥಿತಿ ಒದಗಿಬರಲಾರದು ಮತ್ತು ಅಂತಹ ಆಕಸ್ಮಿಕಗಳು ನಮ್ಮನ್ನು ಧೃತಿಗೆಡಿಸಲಾರವು; ನಿಲುವಳಿ ಜಾರಿ ಮಾಡಲಾಗದಂತಹ ಭೀತಿ ತರಲಾರವು. ಮಿಕ್ಕವರು ಗೈರುಹಾಜರೆಂಬ ಕಾರಣಕ್ಕೆ ಇನ್ನೂ ತಡಮಾಡಿದರೆ ಮೊಂಡುತನಕ್ಕೆ ಮಾನ್ಯತೆ ಕೊಟ್ಟಂತಾಗುತ್ತದೆ. ನಾವು ಅದಕ್ಕೆ ಅವಕಾಶ ಕೊಡದಂತೆ, ತಡಮಾಡದೆ ಕಾರ್ಯಪ್ರವೃತ್ತರಾಗಿ ನಿಲುವಳಿಯನ್ನು ಅಂಗೀಕರಿಸಬೇಕು.

**ಶ್ರೀ ಬಿ.ದಾಸ್** (ಒರಿಸ್ಸ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ಕಳೆದ ಅಧಿವೇಶನದಲ್ಲಿ, ನಮ್ಮಲ್ಲಿ ಕೆಲವರಿಗೆ ಅಳುಕಿತ್ತು. ಸಭೆಗೆ ಗೈರುಹಾಜರಾದವರು, ಬರಲೆಂಬ ಕಾರಣವನ್ನು ಮುಂದಿಟ್ಟು ನಿಲುವಳಿಯನ್ನು ಮುಂದೊಂದು ದಿನಕ್ಕೆ ದೂಡಲಾಗುವುದೆಂಬ ಅಳುಕು; ಈ ನಿಲುವಳಿಗೆ ನಾನು ಹೃತ್ಪೂರ್ವಕ ಬೆಂಬಲ ನೀಡುತ್ತಿಲ್ಲವೆಂದಲ್ಲ. ಕಾಂಗ್ರೆಸ್ಸಿಗನಾಗಿ, ಭಾರತೀಯನಾಗಿ, ಪಂಡಿತ್ ಜವಾಹರ್‌ಲಾಲ್ ನೆಹರು ಅವರು ತಮ್ಮ ನಿಲುವಳಿಯಲ್ಲಿ ಪ್ರತಿಪಾದಿಸಿದ ತತ್ತ್ವಗಳನ್ನು ನಾನು ಹೃತ್ಪೂರ್ವಕವಾಗಿ, ನನ್ನ ಸಹಮತ ವ್ಯಕ್ತ ಪಡಿಸುತ್ತಿದ್ದೇನೆ. ಈ ಹಿಂದೆ ನಮ್ಮ ಗುರಿ ಹಾಗೂ ಧ್ಯೇಯೋದ್ದೇಶಗಳು, ನಿಷ್ಕೃಷ್ಟವಾಗಿ ನಿರೂಪಿಸಲ್ಪಡಲಿಲ್ಲವೆಂದಲ್ಲ. ಸಂವಿಧಾನ ರಚನಾಪ್ರಕ್ರಿಯೆಯ ಪ್ರಾರಂಭದಲ್ಲಿ ಈ ಸದನದಲ್ಲಿ ಅವುಗಳನ್ನು ಖಚಿತ ಪಡಿಸಬೇಕೆಂಬುದು ನಮ್ಮ ಬೇಡಿಕೆಯಾಗಿತ್ತು. ಇದರಲ್ಲಿ ಸಭೆಯ ಎಲ್ಲ ಸದಸ್ಯರೂ ಪಾಲ್ಗೊಳ್ಳಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ಮುಸ್ಲಿಮ್‌ಲೀಗ್ ಪಕ್ಷದ ಅನುಪಸ್ಥಿತಿ ನನಗೆ ಖೇದ ತಂದಿದೆ. ಅವರಲ್ಲಿ ಕೆಲವರು, ಸಾರ್ವಜನಿಕ ಜೀವನದಲ್ಲಿ ನಮ್ಮೊಡನೆ ಸಹಕಾರ್ಯಕರ್ತರಾಗಿದ್ದವರು. ಆ ಸಂದರ್ಭದಲ್ಲಿ, ಅವರೆಲ್ಲ ಇಂದು ಇಲ್ಲಿಗೆ ಆಗಮಿಸಿ, ನಮ್ಮ ರಾಷ್ಟ್ರೀಯ ಧ್ಯೇಯಗಳ ಮತ್ತು ಹಕ್ಕುಗಳ ಘೋಷಣೆಯಲ್ಲಿ ಭಾಗವಹಿಸುವರೆಂದೂ, ಮನಃಪೂರ್ವಕವಾಗಿ ಸ್ವಾತಂತ್ರ್ಯೋದಯದ ಸಂತಸದ ಕ್ಷಣಗಳಲ್ಲಿ ಸಹಭಾಗಿಗಳಾಗುವರೆಂದು ನಮ್ಮಲ್ಲಿ ಕೆಲವರು ಭಾವಿಸಿದ್ದು ಮೂರ್ಖತನ. ಅದು ಕೈಗೂಡಲಿಲ್ಲ. ನಮ್ಮ ನಿಕಟ ಸ್ನೇಹಿತರೂ ನಿಕಟ ಸಹಚರರೂ ಇಪ್ಪತ್ತು ಮೂವತ್ತು ವರುಷಗಳಿಂದ ಜೀವನದ ಸಂಗಾತಿಗಳಾಗಿ ಕೈಜೋಡಿಸಿದ ಮುಸ್ಲಿಮ್ ಸದಸ್ಯರು, ಈ ಹಂತದಲ್ಲಿ ಇಲ್ಲಿಗೆ ಬಾರದೆ ಹೋದುದು ಹೇಗೆಂಬುದು ಯಾರಿಗೂ ತಿಳಿಯದು.

ಅವರ ಬೇಡಿಕೆ ಏನೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಎರಡು ರಾಷ್ಟ್ರಗಳಾಗಬೇಕೆಂಬುದು ಅವರ ಬಯಕೆಯೆಂದು ಹೇಳಲಾಗುತ್ತಿದೆ. ಪಾಕಿಸ್ತಾನ್ ಪ್ರಾಂತ್ಯಗಳನ್ನು ಅಥವಾ ಪಾಕಿಸ್ತಾನ್ ರಾಜ್ಯವನ್ನು ಅವರು ಪಡೆಯಲೆಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಅದರಿಂದ ಮುಸ್ಲಿಮ್ ರಾಷ್ಟ್ರದ ಆದರ್ಶಪಾರಮ್ಯವೇನೆಂಬುದು ನಮಗೆ ತಿಳಿಯುತ್ತದೆ. ಪಾಕಿಸ್ತಾನ್ ರಾಜ್ಯದಲ್ಲಿ ಆಳ್ವಿಕೆ, ಹಿಂದೂಸ್ತಾನಕ್ಕಿಂತಲೂ, ಸಿಖ್ಖರು ಬಯಸುವ ಪಂಥಿಸ್ಥಾನದ ಆಳ್ವಿಕೆಗಿಂತಲೂ ಹೇಗೆ ಉತ್ತಮವಾದುದು ಎಂಬುದನ್ನು ತೋರಿಸಬಲ್ಲರೆ ಎಂಬುದು ನಮಗೆ ತಿಳಿಯುತ್ತದೆ. ನಮ್ಮ ಮುಸ್ಲಿಮ್ ಗೆಳೆಯರಿಗೆ ಏತರ ಭಯ? ಅವರು ಇಲ್ಲೇಕೆ ಹಾಜರಿಲ್ಲ? ಮಾನ್ಯರೆ, ಇಲ್ಲಿ ಮೂರು ಪಕ್ಷಗಳಿವೆ – ಬ್ರಿಟಿಷರು, ಮುಸ್ಲಿಮ್‌ಲೀಗ್ ಮತ್ತು ಕಾಂಗ್ರೆಸ್. ಬ್ರಿಟಿಷ್ ಸರ್ಕಾರ ನಮ್ಮ ಹಾದಿಯಲ್ಲಿ ಅಡ್ಡಗಾಲಿಕ್ಕುತ್ತಿದೆ. ಮಹಾಪ್ರಭುಗಳು ಡಿಸೆಂಬರ್ ೬ರಂದು ಪ್ರಕಟಿಸಿದ ಘೋಷಣೆಯಲ್ಲೂ ಸಹ, ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಸಹಕರಿಸುತ್ತಿಲ್ಲವೆಂದು ಸ್ಪಷ್ಟ ಪಡಿಸಲಾಗಿದೆ. ಮುಸ್ಲಿಮ್ ಗೆಳೆಯರನ್ನು ತಡೆಯುತ್ತಿರುವುದಾದರೂ ಯಾವುದು? ಇಂಡಿಯನ್‌ಲೀಗ್ ಸಭೆಯಲ್ಲಿ, ನನ್ನ ರಾಜಕೀಯ ವೃತ್ತಿ ಪ್ರಾರಂಭಗೊಂಡಾಗ ಕೈದ್-ಎ-ಆಜ಼ಮ್ ನನ್ನ ರಾಜಕೀಯ ಗುರುವಾಗಿದ್ದರು. ಇಂದಿಗೂ ನಾನವರನ್ನು ಪ್ರಶಂಸಿಸುತ್ತೇನೆ. ಆದರೆ ಪಕ್ಷದ ನಾಯಕನನ್ನಾಗಿ ನಾನು ಅವರನ್ನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಅವರಿಗೇನು ಬೇಕೆಂಬುದೇ ನನಗೆ ತಿಳಿಯುತ್ತಿಲ್ಲ. ಮುಸ್ಲಿಮ್‌ಲೀಗ್‌ನ ಕಾರ್ಯಕಾರಿ ಸಮಿತಿಯಲ್ಲಿ ನನ್ನ ವೈಯಕ್ತಿಕ ಗೆಳೆಯರು ಹಲವರಿದ್ದಾರೆ. ಇಲ್ಲಿರುವವರಲ್ಲಿ ಅನೇಕ ಗೆಳೆಯರಿದ್ದಾರೆ. ಅಬ್ದುಲ್ ಮತೀನ್ ಚೌಧುರಿ ಅಥವಾ ನವಾಬ್ ಇಸ್ಮಾಯಿಲ್ ಖಾನ್ ಅಥವಾ ರಾಜಾ ಘಸನ್‌ಫರ್ ಆಲಿ ಖಾನ್ ಅಥವಾ ಹುಸೇನ್ ಇಮಾಮ್ ಮತ್ತಿತರರು ಹಿಂದೂಸ್ತಾನದಲ್ಲಿ ಹಿಂದೂಗಳೊಡನೆ ಅಥವಾ ಭಾರತ ಒಕ್ಕೂಟದಲ್ಲಿ ಸಹೋದರರಂತೆ ಇರಲಾರರೆಂದರೆ ಹೇಗೆಂಬುದು ನನಗೆ ತಿಳಿಯುತ್ತಿಲ್ಲ. ಮುಸ್ಲಿಮ್‌ಲೀಗ್‌ನ ಬಹುತೇಕ ಮುಖಂಡರು ಹಿಂದೂಸ್ತಾನ್ ಎಂಬ ಹೆಸರಿನಲ್ಲಿರುವ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದು ದುರದೃಷ್ಟಕರ ಸಂಗತಿ, ನನಗೆ ಇದು ಖೇದ ತರುತ್ತಿದೆ. ಈ ರಾಷ್ಟ್ರವನ್ನು ಹಾಗೂ ಈ ವಿಶ್ವವನ್ನು ಮುನ್ನಡೆಸುವ ಅತಿ ದೊಡ್ಡ ರಾಜಕೀಯ ತತ್ತ್ವವನ್ನು

ಹೊಂದಿರುವ, ಪಾಕಿಸ್ತಾನ್ ಪ್ರಾಂತ್ಯದ ಮುಸ್ಲಿಮ್‌ಲೀಗ್ ಪ್ರತಿನಿಧಿಯಾಗಲಿ, ಬಂಗಾಳ ಪ್ರಾಂತ್ಯದ ಅಥವಾ ಪಂಜಾಬ್ ಪ್ರಾಂತ್ಯದ ಪ್ರತಿನಿಧಿಯಾಗಲಿ ಯಾರನ್ನೂ ನಾನಿನ್ನೂ ಕಂಡರಿಯೆ ಅಥವಾ ಅವರ ತತ್ತ್ವಗಳು ಏನೆಂಬುದನ್ನೂ ಅರಿಯೆ. ಕಾಂಗ್ರೆಸ್ ಮತ್ತು ಮುಸ್ಲಿಮ್‌ಲೀಗ್ ಪಕ್ಷಗಳ ನಡುವಣ ಅಂತರದತ್ತ ಬೆಟ್ಟು ತೋರುವುದು ನನ್ನ ಇರಾದೆಯಲ್ಲ. ನಾನಿಲ್ಲಿ ನಿಂತಿರುವುದು, ಸದನದ ಹೊರಗಣ ಮುಸ್ಲಿಮ್ ಲೀಗ್‌ನ ನಮ್ಮ ಗೆಳೆಯರು, ಒಳಗೂ ಗೆಳೆಯರಾಗಿರಲು ವಿನಂತಿಸುವುದಕ್ಕಾಗಿ ಪಾಕಿಸ್ತಾನ್ ಬಗ್ಗೆ ಅವರಿಗಿರುವ ಅಭಿಪ್ರಾಯಗಳು ನಮ್ಮ ನಿಲುವಿಗಿಂತ ಭಿನ್ನವಾಗಿದ್ದರೆ, ಅದನ್ನಾದರೂ ವ್ಯಕ್ತ ಪಡಿಸಲಿ. ಅವರು ಬಯಸುವುದು ಸ್ವತಂತ್ರ ಪಾಕಿಸ್ತಾನ್ ರಾಜ್ಯವನ್ನೋ ಅಥವಾ ಪಾಕಿಸ್ತಾನ್ ಆಧಿಪತ್ಯವನ್ನೋ ಅದನ್ನು ಸ್ಪಷ್ಟ ಪಡಿಸಲಿ. ಅವರಿಗೇನು ಬೇಕಿದೆ? ಮುಸ್ಲಿಮ್‌ಲೀಗ್ ಪಕ್ಷದ ನನ್ನ ಗೆಳೆಯರು, ನಮ್ಮೊಡನೆ ಅವರಿಗಿರುವ ಪ್ರಾಚೀನ ಸಖ್ಯ, ಸಾಹಚರ್ಯ, ನೆರೆಯವರೆಂಬ ಭಾವನೆಯನ್ನು ಚಿಂತಿಸಿ, ಆದಷ್ಟೂ ಬೇಗನೆ ಇಲ್ಲಿಗೆ ಆಗಮಿಸಿ, ನಮಗೆ ಆಪ್ತವೆನಿಸಿದ ಭಾರತ ಸ್ವಾತಂತ್ರ್ಯ ಸಂಪಾದನೆಯಲ್ಲಿ ಪಾಲ್ಗೊಳ್ಳಲೆಂದು ಪ್ರಾರ್ಥಿಸುತ್ತೇನೆ.

ಪ್ರಧಾನ ನಿಲುವಳಿಯ ಬಗ್ಗೆ ನಾನೇನೂ ಹೇಳಿಲ್ಲ. ಕಾರಣ ಎಲ್ಲವೂ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿವೆ. ಅದು ನಮ್ಮೆಲ್ಲರ ಹಲವಾರು ವರುಷಗಳ ಹೊಂಗನಸು. ಶ್ರೀ ಜಿನ್ನಾ ಮತ್ತು ಅವರ ಗೆಳೆಯರು ಇಲ್ಲಿಗೆ ಆಗಮಿಸಿ ನಾವೆಲ್ಲಿ ಎಡವುತ್ತಿದ್ದೇವೆ ತಿಳಿಸಲಿ; ಹಿಂದೂಗಳು ಎಸಗುತ್ತಿರುವ ಯಾವ ಪ್ರಮಾದದಿಂದ, ಜಿನ್ನಾ ಅವರಿಗೆ ಒಂದು ಸ್ವತಂತ್ರ ರಾಷ್ಟ್ರ ನಿರ್ಮಾಣ ಸಾಧ್ಯವಾಗುತ್ತಿಲ್ಲವೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಲೆಂದು, ಅವರಲ್ಲಿ ಪ್ರಾರ್ಥಿಸಿ ನಾನು ವಿರಮಿಸುತ್ತೇನೆ.

**ಶ್ರೀ ದೇವೇಂದ್ರನಾಥ ಸಾಮಂತ** (ಬಿಹಾರ್ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ನಮ್ಮ ಗೌರವಾನ್ವಿತ ನಾಯಕರಾದ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಿದ ಸ್ಮರಣೀಯ ನಿಲುವಳಿಯನ್ನು ಕುರಿತು ನನ್ನ ಅಭಿಪ್ರಾಯಗಳನ್ನು ನಿವೇದಿಸಲು, ತಾವು ಕೃಪೆ ತೋರಿ ಅವಕಾಶ ನೀಡಿದುದಕ್ಕಾಗಿ ತಮಗೆ ಧನ್ಯವಾದಗಳು.

ಮಾನ್ಯರೆ, ಈ ನಿಲುವಳಿಗೆ ನನ್ನ ಹೃತ್ಪೂರ್ವಕ ಬೆಂಬಲ ನೀಡಲು ನಾನು ಸಿದ್ಧನಿದ್ದೇನೆ. ನನಗಿಂತ ಮುಂಚೆ ಮಾತನಾಡಿದ ಭಾಷಣಕಾರರು, ಈ ನಿಲುವಳಿಗೆ ತಮ್ಮ ಎದೆತುಂಬಿದ ಬೆಂಬಲ ನೀಡಿದ್ದಾರೆ. ಈ ನಿಲುವಳಿಯ ಅಗತ್ಯ, ಪ್ರಯೋಜನ ಮತ್ತು ಔಚಿತ್ಯ ಕುರಿತು ಅವರು ಚರ್ಚಿಸಿದ್ದಾರೆ. ಈ ನಿಲುವಳಿಯನ್ನು ವಿವಿಧ ದೃಷ್ಟಿಕೋನಗಳಿಂದ ಪರ್ಯಾಲೋಚಿಸಿದ್ದಾರೆ. ಅದೇ ವಾದಗಳನ್ನು ಮುಂದಿಟ್ಟು ಚರ್ವಿತಚರ್ವಣದಿಂದ ಈ ಸಭೆಯ ಅಮೂಲ್ಯ ವೇಳೆಯನ್ನು ವ್ಯಯಗೊಳಿಸಲು ನಾನು ಇಚ್ಛಿಸುವುದಿಲ್ಲ. ನಿಲುವಳಿಗೆ ಬೆಂಬಲ ನೀಡುವ ಸಂದರ್ಭದಲ್ಲಿ, ತಮ್ಮ ಅನುಮತಿ ಪಡೆದು ನನ್ನ ಕೆಲವೊಂದು ಅನುಮಾನಗಳನ್ನು ತಿಳಿಸಲು ಬಯಸುತ್ತೇನೆ.

ಈ ರಾಷ್ಟ್ರದ ಜನತೆಯ ಅಗಾಧ ಕಷ್ಟನಿಷ್ಠುರಗಳು ಅಪಾರ ತ್ಯಾಗದ ಫಲಶ್ರುತಿಯಾಗಿ, ಸ್ವತಂತ್ರ ಭಾರತದ ಸಂವಿಧಾನದ ರಚನೆಯ ಹೊಣೆ ಹೊತ್ತು, ಈ ಸಂವಿಧಾನ ರಚನಾಸಭೆ ರೂಪುಗೊಂಡಿದೆ ಎಂಬುದನ್ನು ಎಲ್ಲ ಕಡೆಯಿಂದಲೂ, ಸ್ಪಷ್ಟ ಪಡಿಸಲಾಗಿದೆ. ಆದುದರಿಂದ, ಅಂತಹ ಸಂವಿಧಾನ, ಜನಪದರ ಆಶೋತ್ತರಗಳನ್ನು ಪೂರೈಸಿ, ರಾಷ್ಟ್ರದ ಸಮಗ್ರ ಹಿತವನ್ನು ಕಾಯ್ದುಕೊಳ್ಳುವಂತೆ ರಚಿತವಾಗಬೇಕು.

ಸಂವಿಧಾನದ ರಚನಕಾರರು, ಜನತಾ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟವರು, ಅತ್ಯಂತ ಜವಾಬ್ದಾರಿಯುಳ್ಳವರು. ತಮ್ಮ ಜವಾಬ್ದಾರಿಯ ಯುಕ್ತ ನಿರ್ವಹಣೆಯಿಂದ, ಸಂವಿಧಾನವನ್ನು ಎಚ್ಚರಿಕೆಯಿಂದಲೂ ಜಾಣತನದಿಂದಲೂ ಸಂಬಂಧಪಟ್ಟವರೆಲ್ಲರ ಹಿತಾಸಕ್ತಿಯ ದೃಷ್ಟಿಯಿಂದ ರಚಿಸುವರೆಂದು ನಂಬುತ್ತೇವೆ.

ಸಂವಿಧಾನದ ಸಿದ್ಧತೆಯಲ್ಲಿ ಜವಾಬ್ದಾರಿ ವಹಿಸಿರುವ ಸದಸ್ಯರ ನಿಷ್ಠೆ, ಪ್ರಾಮಾಣಿಕತೆ ಮತ್ತು ಘನತೆಯಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿರಬೇಕು.

ಸಂವಿಧಾನ ರಚನೆಯಲ್ಲಿ ಅಳವಡಿಸಲಾದ ನೀತಿ ನಿಯಮಗಳು, ಸೌಲಭ್ಯಗಳನ್ನು, ಈ ನಿಲುವಳಿ ಪ್ರತಿಪಾದಿಸಿದೆ.

ಭಾರತದ ಸಮಸ್ತ ಪ್ರಜಾಕೋಟಿಗೆ ಖಾತರಿ ನೀಡುವ ಅವರ ಭದ್ರತೆಯನ್ನು ಕಾಯ್ದುಕೊಳ್ಳುವ ಸಂವಿಧಾನದ ಬಗ್ಗೆ ನಿಲುವಳಿ ಸ್ಪಷ್ಟವಾಗಿ ನಿರೂಪಿಸಿರುವುದು ನಮ್ಮ ಸುದೈವ; ಆ ನಿರೂಪಣೆ ಔಚಿತ್ಯಪೂರ್ಣವೂ ಆದುದು. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ನ್ಯಾಯಬದ್ಧ ಅವಕಾಶ ಕಲ್ಪನೆ ಇತ್ಯಾದಿ, ಎಲ್ಲವೂ ನಮ್ಮ ಜನತೆಯ ಅಭಿವೃದ್ಧಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವ ಸೂಚನೆಗಳನ್ನು ನೀಡಿವೆ.

ಅಲ್ಪಸಂಖ್ಯಾತರು, ಹಿಂದುಳಿದವರು, ಬುಡಕಟ್ಟು ಪ್ರದೇಶಗಳು ಮತ್ತು ತಳಸಮುದಾಯದವರೆಲ್ಲರ ಭದ್ರತೆಯನ್ನು ಕಾಯ್ದುಕೊಳ್ಳಲು ಸಂವಿಧಾನದಲ್ಲಿ, ಸೂಕ್ತ ಕ್ರಮಗಳನ್ನೂ ಸಹ ನಿರೂಪಿಸಲಾಗಿದೆ. ಅಲ್ಪಸಂಖ್ಯಾತರು ಮತ್ತಿತರರ ಸುಭದ್ರತೆಗೂ ಖಾತರಿ ನೀಡಲಾಗಿದೆ. ಈ ಬಗ್ಗೆ ಯಾವುದೇ ಸಂದೇಹಕ್ಕೆ ಆಸ್ಪದವಿದ್ದರೆ, ಅವುಗಳ ನಿವಾರಣೆಗೆ ಈ ಪ್ರಸ್ತಾವಗಳು ಸಾಕು.

ಸಂವಿಧಾನ ರಚನಾಸಭೆಯಲ್ಲಿ ಸಮರ್ಪಕ ಪ್ರಾತಿನಿಧ್ಯದ ಕೊರತೆಯ ಬಗ್ಗೆ ಕೆಲ ಮೂಲಗಳಿಂದ ಆಕ್ಷೇಪಣೆಗಳು ಕೇಳಿಬಂದಿವೆ. ನನ್ನ ಸವಿನಯ ಅಭಿಪ್ರಾಯದಂತೆ, ಸಂವಿಧಾನ ರಚನೆಯಲ್ಲಿ ಸಮರ್ಪಕವಾಗಿ ಅಥವಾ ಅಸಮರ್ಪಕವಾಗಿ ಒಂದು ನಿರ್ದಿಷ್ಟ ಅಲ್ಪಸಂಖ್ಯಾತ ವರ್ಗದ ಪ್ರಾತಿನಿಧ್ಯವಿರುವುದು ಮುಖ್ಯವಲ್ಲ. ಸಂವಿಧಾನದ ರಚನೆಯಲ್ಲಿ ಮಾರ್ಗದರ್ಶನ ಮತ್ತು ನಿಯಂತ್ರಣ ಮಾಡುವ ಅಖಂಡ ಜನಸ್ತೋಮದ ಸದ್ಭಾವನೆ ಇಲ್ಲಿ ಮುಖ್ಯವಾಗುತ್ತದೆ. ಸಂವಿಧಾನ ಅಂತಹ ಸದ್ಭಾವನೆಯ ತಳಹದಿಯ ಮೇಲೆ ರಚಿತವಾಗುತ್ತದೆ. ನನ್ನ ವಿನಯಪೂರ್ವಕ ಅಭಿಪ್ರಾಯದಂತೆ, ಜನಪದರ ಸದ್ಭಾವನೆ ಗಣ್ಯವಾಗುತ್ತದೆ; ಅಷ್ಟೇ ಹೊರತು, ಸಂವಿಧಾನ ರಚನಾಮಂಡಳಿಯಲ್ಲಿ ಒಂದು ನಿರ್ದಿಷ್ಟ ಸಮುದಾಯದ ಪ್ರಾತಿನಿಧ್ಯವಲ್ಲ. ತಮ್ಮ ಸಮುದಾಯಕ್ಕೆ ಸಮರ್ಪಕ ಪ್ರಾತಿನಿಧ್ಯ ಸಿಕ್ಕಿಲ್ಲವೆಂದು ಯಾವುದೇ ಸಮುದಾಯದ ಆಕ್ಷೇಪಣೆ ಸರಿಯಲ್ಲ. ತಮಗೆ ಪ್ರಾತಿನಿಧ್ಯ ಸಿಕ್ಕಿಲ್ಲವೆಂಬ ಒಂದೇ ಆಧಾರದ ಮೇಲೆ ಈ ಬಗೆಯ ಆಕ್ಷೇಪಣೆ ಎತ್ತುವಂತಿಲ್ಲ. ಒಂದು ವಿಷಯ ಇತ್ಯರ್ಥಗೊಳ್ಳುವುದು ಬಹುತೇಕ ಇತರ ಸಮುದಾಯಗಳ ಮೇಲೆ ಅವಲಂಬಿಸಿರುವಾಗ, ಸಮರ್ಪಕ ಪ್ರಾತಿನಿಧ್ಯವೋ ಅಸಮರ್ಪಕವೋ, ಒಟ್ಟಿನಲ್ಲಿ ಇತರ ಸಮುದಾಯಗಳ ಸಹಾನುಭೂತಿ ಕಳೆದುಕೊಂಡು ದೂರ ಉಳಿದರೇನು ಫಲ?

ಪರಿಶಿಷ್ಟ ಜಾತಿಯವರು, ಆದಿವಾಸಿಗಳು, ಸಿಖ್ಖರು, ಭಾರತೀಯ ಕ್ರೈಸ್ತರು, ಆಂಗ್ಲೋ ಇಂಡಿಯನ್‌ರು ಮತ್ತು ಪಾರಸಿಕರು, ಸಂವಿಧಾನ ರಚನಾಕಾರರ ಘನತೆ ಮತ್ತು ಪ್ರಾಮಾಣಿಕತೆಯ ಮೇಲೆ ನಂಬಿಕೆ ಇಟ್ಟು ಸಂವಿಧಾನ ರಚನೆಗೆ ಸೂಕ್ತವಾದ ಸಹಕಾರ ನೀಡುತ್ತಿದ್ದಾರೆ. ಈ ಹಂತದಲ್ಲಿ ಜನತೆಯ ಆಶೋತ್ತರಗಳು ಮತ್ತು ಅವರ ಶಕ್ತಿಯೇ ಸಂವಿಧಾನ ರಚನೆಗೆ ಮಾರ್ಗಸೂಚಿಯಾಗಿರುತ್ತವೆ. ಭಾರತದ ಸಜೀವಚ್ಛೇದನವಾಗಿ ಪಾಕಿಸ್ತಾನದ ರಚನೆಯಾದರೆ ಅತ್ಯುತ್ತಮ ರೀತಿಯಲ್ಲಿ ತಮ್ಮ ಹಿತರಕ್ಷಣೆಯಾಗುವುದೆಂಬ ಭಾವನೆ ಬೆಳೆಯಗೊಡದೆ, ಒಂದು ವರ್ಗ, ಎಂದರೆ ಮುಸ್ಲಿಮ್‌ಲೀಗ್ ಪಕ್ಷ ನಮ್ಮೊಡನೆ ಸಂವಿಧಾನ ರಚನಾಸಭೆಯಲ್ಲಿ ಸೇರಿ, ಸಂವಿಧಾನದ ರಚನೆಯಲ್ಲಿ ಭಾಗವಹಿಸಬಹುದಿತ್ತು. ಮುಸ್ಲಿಮ್‌ಲೀಗ್ ಬಿಟ್ಟರೆ ಭಾರತದ ಸಜೀವಚ್ಛೇದನಕ್ಕೆ, ಈ ರಾಷ್ಟ್ರದಲ್ಲಿ ಯಾರೊಬ್ಬರೂ ಒಪ್ಪುವುದಿಲ್ಲ. ಸಂಯುಕ್ತ ಭಾರತದ ಅಗತ್ಯವನ್ನು ಪ್ರತಿಯೊಂದು ವರ್ಗದ ಜನರೂ ವಿವೇಚಿಸುವರೆಂದು ನಂಬಬಹುದಾಗಿದೆ.

ಸ್ವಾಮಿ, ರೈಟ್ ಆನರಬಲ್ ಡಾ. ಜಯಕರ್ ಅವರು ಪ್ರಸ್ತಾವಿಸಿದ ತಿದ್ದುಪಡಿಗೆ ಈ ಹಂತದಲ್ಲಿ ಒತ್ತಾಯ ಪಡಿಸುವುದು ಅಗತ್ಯವಿಲ್ಲ. ಈ ತಿದ್ದುಪಡಿಯ ಪ್ರಸ್ತಾವಕರು ತಮ್ಮ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವರೆಂದು ನಿರೀಕ್ಷಿಸಬಹುದಾಗಿದೆ.

ನಮ್ಮ ರಾಷ್ಟ್ರ ದುರದೃಷ್ಟವಶಾತ್ ವಿದೇಶಿ ಆಧಿಪತ್ಯಕ್ಕೆ ಸಿಕ್ಕು ಎಲ್ಲ ರೀತಿಯಿಂದಲೂ ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತದಿಂದ ಸಾಕಷ್ಟು ಶೋಷಣೆಗೆ ಒಳಗಾಗಿದೆ.

ಆದಿವಾಸಿಗಳು ಮತ್ತು ಇತರರು ಬ್ರಿಟಿಷರ ಮತ್ತು ಅವರ ಏಜೆಂಟರುಗಳ ಆಳ್ವಿಕೆಯಲ್ಲಿ ಅಪರಿಮಿತ ಶೋಷಣೆಯನ್ನು ಅನುಭವಿಸಿದ್ದಾರೆ. ಇನ್ನು ಮುಂದೆ ಶೋಷಣೆ ತಪ್ಪಿ ಮುಕ್ತವಾಗಿ ಬಾಳ್ವೆ ನಡೆಸಲು ಅವಕಾಶ ಸಿಗುತ್ತದೆ. ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಯಲು ಇದು ಸುಸಂದರ್ಭ.

ಮಾನ್ಯರೆ, ಈಗಾಗಲೆ ಸಭೆಯಲ್ಲಿ ಅನೇಕರ ಬೆಂಬಲವನ್ನು ನಿಲುವಳಿ ಪಡೆದುಕೊಂಡಿದೆ. ಆದುದರಿಂದ ಸಭೆಯ ಅಮೂಲ್ಯ ವೇಳೆಯನ್ನು ಬಳಸಿಕೊಳ್ಳಲು ನಾನು ಬಯಸುವುದಿಲ್ಲ. ಈ ಕೆಲವು ಆಲೋಚನೆಗಳೊಡನೆ, ನಾನು ಈ ನಿಲುವಳಿಯನ್ನು ಬೆಂಬಲಿಸುತ್ತೇನೆ. ಇದು ಸರ್ವಾನುಮತದಿಂದ ಅಂಗೀಕೃತವಾಗಿ ಜಾರಿಗೊಳ್ಳುವುದೆಂದು ಆಶಿಸುತ್ತೇನೆ.

**ಸಂಚಾಲಕ ಸಮಿತಿಯ ಚುನಾವಣೆ**

ಮಾನ್ಯ ಅಧ್ಯಕ್ಷರು :

ಈ ಸದನವನ್ನು ಉದ್ದೇಶಿಸಿ ಮಾತನಾಡಲು, ಮುಂದಿನ ಭಾಷಣಕಾರರನ್ನು ಆಹ್ವಾನಿಸುವ ಮುನ್ನ ಶ್ರೀಯುತ ಸೋಮನಾಥ ಲಾಹಿರಿ ಮತ್ತು ಶ್ರೀ ಲಕ್ಷ್ಮೀನಾರಾಯಣ ಸಾಹು ಅವರು ತಮ್ಮ ಅಭ್ಯರ್ಥಿ ಸ್ಥಾನದಿಂದ/(ಚುನಾವಣಾ ಕಣದಿಂದ) ಹಿಂಸರಿದಿದ್ದಾರೆಂದು ನಾನು ಉದ್ಘೋಷಿಸಬೇಕಿದೆ. (ಕರಘೋಷ) ಹಾಗಾಗಿ, ಕೆಳಕಂಡ ಅಭ್ಯರ್ಥಿಗಳು ಆಯ್ಕೆಗೊಂಡಿರುವುದಾಗಿ ತೀರ್ಮಾನಿಸಲಾಗಿದೆ.

೧. ಗೌರವಾನ್ವಿತ ಮೌಲಾನಾ ಅಬುಲ್ ಕಲಾಂ ಆಜಾದ್
೨. ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್
೩. ಸರ್ದಾರ್ ಉಜ್ಜಲ್ ಸಿಂಗ್
೪. ಶ್ರೀ ಎಸ್.ಎಚ್. ಪ್ರೇಟರ್
೫. ಶ್ರೀಮತಿ ಜಿ. ದುರ್ಗಾಬಾಯಿ
೬. ಶ್ರೀ ಕಿರಣ್ ಶಂಕರ್ ರಾಯ್
೭. ಶ್ರೀ ಸತ್ಯನಾರಾಯಣ ಸಿನ್ಹ
೮. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್
೯. ಶ್ರೀ ಎಸ್.ಎನ್. ಮಾನೆ
೧೦. ಶ್ರೀ ಕೆ.ಎಂ. ಮುನ್ಷಿ
೧೧. ದಿವಾನ್ ಚಮನಲಾಲ್

ಅವರು ಚುನಾಯಿತರೆಂದು ಘೋಷಿಸಲಾಗಿದೆ. ಮಧ್ಯಾಹ್ನ ಮತದಾನ ಇರುವುದಿಲ್ಲ.

ಧ್ಯೇಯೋದ್ದೇಶಗಳನ್ನು ಕುರಿತು ನಿರ್ಣಯ ಮುಂದುವರೆದಿದೆ.

**ರೆವರೆಂಡ್ ಜೆರೋಮ್ ಡಿ'ಸೋಜ಼ಾ ಎಸ್.ಜೆ.** (ಮದರಾಸು : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ಪಂಡಿತ್ ಜವಾಹರ್‌ಲಾಲ್ ನೆಹರು ಅವರ ಈ ಮಹತ್ವಪೂರ್ಣ ನಿಲುವಳಿಗೆ ಸಂಚಲನ ತಂದುಕೊಟ್ಟಿರುವ ಭಾವನೆಗಳಿಗೆ ನನ್ನ ಆತ್ಮೀಯ ಮತ್ತು ಪ್ರಾಮಾಣಿಕ ಅಭಿನಂದನೆಯನ್ನು ಸಲ್ಲಿಸಲು ಇಚ್ಛಿಸುತ್ತೇನೆ. ಪ್ರಜಾಪ್ರಭುತ್ವ ಸಿದ್ಧಾಂತ ಎಲ್ಲರಿಗೂ ಸಾರ್ವತ್ರಿಕವಾಗಿ ಅನ್ವಯವಾಗುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವ ಪರಿಪಾಠವನ್ನು ನಮ್ಮ ಜನತೆಯಲ್ಲಿ ಎಲ್ಲ ವರ್ಗದವರೂ ರೂಢಿಸಿಕೊಂಡಿದ್ದಾರೆ. ಆದರೆ, ಇಂತಹ ಮೌಖಿಕ ಸ್ಪಷ್ಟೋಕ್ತಿಯಲ್ಲಿ ತೊಡಗುವ ಮಂದಿ, ಅದರ ಪರಿಣಾಮವನ್ನು ಅರಿತಿದ್ದಾರೆಯೇ ಮತ್ತು ಅದು ಕಾರ್ಯಸಾಧ್ಯಗೊಳಿಸಲು, ನಿಜಜೀವನದಲ್ಲಿ ಸಿದ್ಧರೆ, ಮತ್ತು ಅಂತಹ ಸ್ಪಷ್ಟೋಕ್ತಿಯನ್ನು ಸಾಕಾರಗೊಳಿಸುವರೆಂಬುದು ನನಗೆ ತಿಳಿಯದು.

ಈ ನಿಲುವಳಿಯ ಒಂದೆರಡು ಭಾಗಗಳ ಬಗ್ಗೆ ಏನೇ ಆಕ್ಷೇಪಣೆಗಳು ವ್ಯಕ್ತವಾಗಲಿ, ಇದೊಂದು ಸಮರ್ಪಕವಾದ, ಎಚ್ಚರಿಕೆಯಿಂದ ರೂಪಿಸಲ್ಪಟ್ಟ ಸಂಪೂರ್ಣ ಸಮ್ಮತವಾಗುವ ಪ್ರಜಾಪ್ರಭುತ್ವ ಸಿದ್ಧಾಂತದ ಸ್ಪಷ್ಟೋಕ್ತಿಯೆಂದು ನಾನು ಭಾವಿಸುತ್ತೇನೆ. ಈ ಸಿದ್ಧಾಂತ ಜನತಾ ಸರ್ಕಾರದ ಸಿದ್ಧಾಂತ, ಜನತೆಗಾಗಿ ಜನರಿಂದ ಸೃಷ್ಟಿಗೊಂಡ ಸಿದ್ಧಾಂತ; ನಿರ್ಣಯಕ್ಕೆ ಸಂಚಲನ ತಂದುಕೊಟ್ಟ ಚೈತನ್ಯವು, ಈ ಬೃಹತ್ ಸಭೆ ರಚಿಸುವ ಸಂವಿಧಾನದವರೆಗೂ ವ್ಯಾಪಿಸಿದರೆ, ಮತ್ತು ಅದನ್ನೆ ಪ್ರಾಂತ್ಯಗಳ ದೈನಂದಿನ ಆಡಳಿತಕ್ಕೂ ಅನ್ವಯಿಸಿದರೆ, ಅಂತೆಯೇ ಸರ್ಕಾರದ ಆಡಳಿತಕ್ಕೂ ಅನ್ವಯಿಸುವಂತಾದರೆ ನಮ್ಮ ಜನತೆಯಲ್ಲಿ ಯಾವೊಂದು ವರ್ಗವೂ ಆಕ್ಷೇಪಣೆ ಎತ್ತುವ ಸಾಧ್ಯತೆಯೇ ಇಲ್ಲ. ಸಂತೃಪ್ತಿ ದೊರೆತೇ ದೊರೆಯುತ್ತದೆ.

ಈ ನಿಲುವಳಿಯ ಬಗ್ಗೆ ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಒಂದು ಮಾತು ಹೇಳಿದರು. ಇದರ ತಾತ್ವಿಕ ಮತ್ತು ಸೈದ್ಧಾಂತಿಕ ಭಾಗದಲ್ಲೊಂದು ಪದಸಮುಚ್ಚಯ ಇದೆ. ಅದು ಎಲ್ಲರ ಒಪ್ಪಿಗೆಯನ್ನೂ ಪಡೆದಿದೆ. ರಾಜಕೀಯ ಮತ್ತು ಪತ್ರಿಕೋದ್ಯಮ ವಲಯದಲ್ಲಿ ಇದೊಂದು ಮಾಮೂಲಿ ಚಿಂತನೆ ಎಂಬ ಅರ್ಥ ಸೂಚ್ಯವಾಗಿದೆ. ಇದು ವಿಶ್ವದ ಇತರೆಡೆಯಲ್ಲಿ ನಿಜವೋ ಅಲ್ಲವೋ ನನಗೆ ಖಾತರಿ ಇಲ್ಲ. ಅದು ಸತ್ಯವಾದರೂ ಕೆಲವು ಸಂದರ್ಭಗಳಲ್ಲಿ ಇಂತಹ ಸರ್ವಸಾಧಾರಣ ಪದಗುಚ್ಛವನ್ನು ಪುನರುಚ್ಚರಿಸುವ ಅಗತ್ಯವಿದೆ. ಶ್ರದ್ಧಾಪೂರ್ವಕವಾಗಿ ಅಂತೆಯೇ ಅಗ್ರಹಪೂರ್ವಕವಾಗಿ ದೃಢೀಕರಿಸುವುದು ಅವಶ್ಯಕ. ಯೂರೋಪ್‌ನ ಓರ್ವ ಮಹಾನ್ ರಾಜನೈತಿಕ ನಿಪುಣ ಟ್ಯಾಲಿರಾಂಡ್ ಬಗ್ಗೆ ಹೇಳುವ ಮಾತೊಂದಿದೆ. ಒಂದು ನಿರ್ದಿಷ್ಟ ಭಾವನೆಯನ್ನು ಪುನರುಚ್ಚರಿಸುವ ಅಗತ್ಯವಿಲ್ಲದಾಗ "ಅದು ಹೇಳದೆಯೇ ತಿಳಿಯಬಲ್ಲ ಮಾತೆಂದು" ತೀರ್ಮಾನಿಸಿದಾಗ, ಆತ ಪ್ರತಿಕ್ರಿಯಿಸುತ್ತಿದ್ದುದು ಹೀಗೆ – "ಅದನ್ನು ಮತ್ತೆ ಮತ್ತೆ ಉಚ್ಚರಿಸುವುದು ಉಚಿತ" ಮಾನ್ಯರೆ, ನಾನು ಅಂದುಕೊಂಡಂತೆ, ಪ್ರಜಾಪ್ರಭುತ್ವದಲ್ಲಿ ನಮಗಿರುವ ನಂಬಿಕೆಯನ್ನು ಶ್ರದ್ಧಾಪೂರ್ವಕವಾಗಿ, ಸಾರ್ವಜನಿಕವಾಗಿ, ಮಾರ್ಪಡಿಸಲಾಗದ ರೀತಿಯಲ್ಲಿ ಘೋಷಿಸಬೇಕು. ಈ ನಿಶ್ಚಿತಾಭಿಪ್ರಾಯಗಳನ್ನು ಸಮನಾಗಿ ತೂಗಿ ಅಳೆದು ಎಚ್ಚರಿಕೆಯಿಂದ ವ್ಯಕ್ತಪಡಿಸಲಾಗಿದೆ. ಆ ದೃಷ್ಟಿಯಿಂದ, ನಮ್ಮ ಜನರ ಪ್ರತಿಯೊಂದು ವರ್ಗವೂ ಅದನ್ನು ಸ್ವಾಗತಿಸುತ್ತದೆ ಎಂದು ನಂಬುತ್ತೇನೆ. ಇವೆಲ್ಲವನ್ನೂ ವಿಸ್ತೃತವಾಗಿ ವಿವರಿಸಿ ವಿಶದ ಪಡಿಸಬೇಕು. ಈ ಸಂದರ್ಭದಲ್ಲಿ, ಎರಡು ಬಗೆಯ ಅಪಾಯಗಳ ವಿರುದ್ಧ, ಸಿದ್ಧಗೊಳ್ಳುವ ಅಗತ್ಯವನ್ನು ಇಲ್ಲಿ ಪ್ರಸ್ತಾಪಿಸಲು ಸದನದ ಅನುಮತಿ ಬೇಡುತ್ತೇನೆ. ವೈಯಕ್ತಿಕ ಸ್ವಾತಂತ್ರ್ಯಕ್ಕೆ ಈ ಪ್ರಾಸ್ತಾವಿಕ ನಿರ್ಣಯದಲ್ಲಿ ಬಹಳಷ್ಟೆ ಅವಕಾಶಗಳನ್ನು ಒದಗಿಸಲಾಗಿದೆ. ಆದರೆ, ಒಂದೆಡೆ ರಾಷ್ಟ್ರಪ್ರೇಮದ ಸಲುವಾಗಿ, ತ್ವರಿತಗತಿಯ ಸುಧಾರಣೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ, ಪರಸ್ಪರ ಸಮ್ಮತ, ಪರಸ್ಪರ ಪ್ರೇರಣೆಗಿಂತ, ಕೇಂದ್ರ ಸರ್ಕಾರದ ಅಧಿಕಾರಕ್ಕೂ, ಬಲವಂತಕ್ಕೂ ಮಣಿದು ಕೆಲ ಆಲೋಚನೆಗಳನ್ನು ಅನುಷ್ಠಿಸುವ ಅಭಿಲಾಷೆ ಬಲವತ್ತರವಾಗಬಹುದೆಂಬ ಮಾತನ್ನು ನಾನು ಒತ್ತಿ ಒತ್ತಿ ಹೇಳಬಯಸುತ್ತೇನೆ. ಆ ಆಮಿಷಕ್ಕೆ, ಹಲವಾರು ಗಣ್ಯರು, ದೇಶಪ್ರೇಮಿಗಳು ಪಕ್ಕಾಗಿದ್ದಾರೆ. ಆದರೆ ವೈಯಕ್ತಿಕ ಸ್ವಾತಂತ್ರ್ಯವನ್ನು ಅದುಮಿಡದಂತೆ ತಡೆಯಲು, ಕಲ್ಪಿಸಿರುವ ಅವಕಾಶಗಳ ಹಿನ್ನೆಲೆಯಲ್ಲಿ, ಸರ್ವಾನುಮತ ತತ್ತ್ವಗಳಿಗೆ ಅಂಟಿಕೊಂಡು, ನಮ್ಮ ಮಹಾನ್ ದೇಶ ಇತರರಿಗೆ ಮಾದರಿಯಾಗುತ್ತದೆ ಎಂಬ ನಂಬಿಕೆ ಮತ್ತು ವಿಶ್ವಾಸ ನನಗಿದೆ. ನನ್ನ ಹಿಂದಿನ ಭಾಷಣಕಾರರು ಹೇಳಿದಂತೆ, ಅಧಿಕಾರದ ಒತ್ತಡಕ್ಕೆ ತಲೆಬಾಗಿದರೆ, ವ್ಯಕ್ತಿ ವ್ಯಕ್ತಿಯಾಗಿ ಉಳಿಯುವುದಿಲ್ಲ. ಯಂತ್ರಮಾನವನಾಗುತ್ತಾನೆ. ಇದೊಂದು ಅಪಾಯ.

ಇನ್ನೊಂದು ಅಪಾಯ ಎದುರುಗೊಳ್ಳುವುದು ನಿಸ್ಸಂದೇಹ. ಅದು, ಈಗ ಅಲ್ಪಸಂಖ್ಯಾತರಾಗಿರುವ ನಮ್ಮನ್ನು ಬಾಧಿಸುತ್ತದೆ. ಅಲ್ಪಸಂಖ್ಯಾತರ ಹಕ್ಕು ಮತ್ತು ರಕ್ಷಣೆಯ ಮೇಲೆ ಕೆಲವರ ಅಸೂಯೆ, ವಿರೋಧ ಅಥವಾ ನ್ಯಾಯಬದ್ಧತೆಯ ಅಭಾವ ಸವಾರಿ ಮಾಡುವುದೆಂಬ ಅಪಾಯವಲ್ಲ. ಭಾರತದ ಬಹುಸಂಖ್ಯಾತರು ಅಥವಾ ಅವರ ಪ್ರತಿನಿಧಿಗಳಲ್ಲಿ ಯಾರೊಬ್ಬರಾದರೂ, ನಮ್ಮ ಹಕ್ಕು ರಕ್ಷಣೆಗಳ ಮೇಲೆ ಅನುಚಿತವಾಗಿ ತಮ್ಮ

ಪ್ರಭಾವ ಬೀರಿ, ಅವು ದೊರೆಯದಂತೆ ತಪ್ಪಿಸುವರೆಂದು ನಾನು ಅಂದುಕೊಂಡಿಲ್ಲ. ಆದರೆ ಪ್ರಾಮಾಣಿಕ ದೇಶಪ್ರೇಮದ ಭರದಲ್ಲಿ, ಒಮ್ಮತ ಮತ್ತು ಸಾಮರಸ್ಯ ನೆಲೆಗೊಳಿಸುವ ಸಂಭ್ರಮದಲ್ಲಿ (ಅದು ಅಸಾಧ್ಯವೂ ಅನಗತ್ಯವೂ ಆದ ಅತಿ ಭಾವುಕತೆ) ಅವರು ಕೈಗೊಳ್ಳುವ ಕೆಲವು ಅನುಚಿತ ಕ್ರಮಗಳೂ ಅಲ್ಪಸಂಖ್ಯಾತರನ್ನೂ, ವಿಶೇಷ ವರ್ಗದವರನ್ನೂ, ತೀವ್ರವಾಗಿ ಬಾಧಿಸಿ, ಘಾಸಿಗೊಳಿಸುತ್ತವೆ.

ಕಳೆದ ಅಧಿವೇಶನದಲ್ಲಿ ಭಾಷಣಕಾರರೊಬ್ಬರು ಆಡಿದ ಕೆಲವೊಂದು ಮಾತುಗಳು, ಸದನದ ಪ್ರತಿಯೊಂದು ವರ್ಗಕ್ಕೂ ಒಪ್ಪಿಗೆ ಆಯಿತೆಂಬುದೇನೋ ನಿಜ. ಆದರೆ ಅಲ್ಪಸಂಖ್ಯಾತರ ಬಗ್ಗೆ ಅವರು ಬಳಸಿದ ಒಂದು ಪದ, ನಮಗೆ ಒಪ್ಪಿಗೆ ಆಗಲಿಲ್ಲವೆಂಬುದನ್ನು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ. ಯಾವ ದೇಶವೂ, ಯಾವ ಜನಾಂಗವೂ ಅಲ್ಪಸಂಖ್ಯಾತರನ್ನು ಶಾಶ್ವತವಾಗಿ ಉಳಿಸಿಕೊಂಡು, ಬೆಳೆಯಲಾರದು, ಉಳಿಯಲಾರದು. ಅವರೆಲ್ಲರನ್ನೂ ಮುಖ್ಯ ವಾಹಿನಿಯಲ್ಲಿ ಲೀನಗೊಳಿಸಬೇಕೆಂದು ಹೇಳಲಾಯಿತು. ಆ ಭಾಷಣಕಾರರು ಅಮೆರಿಕದ ಸಂಯುಕ್ತ ರಾಷ್ಟ್ರಗಳನ್ನು ನಿದರ್ಶನವಾಗಿ ಉದ್ಧರಿಸಿದರು. ಆ ರಾಷ್ಟ್ರದಲ್ಲಿ ವಿಲೀನೀಕರಣ ನಡೆಯುತ್ತಿದೆ ಎಂದು ತಿಳಿಸಿದರು. ಈ ಮಾತಿನ ಹಿಂದಣ ಯಥಾರ್ಥತೆಯನ್ನು ನಾನು ಗ್ರಹಿಸಬಲ್ಲೆ. ಒಂದಿಷ್ಟು ಸಾಮರಸ್ಯವಿರಬೇಕು. ಹಕ್ಕು ಹಿತಾಸಕ್ತಿ ಇವೆಲ್ಲವೂ ಎಲ್ಲರಿಗೂ ಸಮಾನವಾಗಿರಬೇಕು. ಆ ಸಮಾನತೆಯನ್ನು ಮಾನ್ಯ ಮಾಡಬೇಕು, ಹಕ್ಕು ಹಿತಾಸಕ್ತಿಯ ಮಾನ್ಯತೆಯ ಬುನಾದಿಯ ಮೇಲೆ ರಾಷ್ಟ್ರ ನಿರ್ಮಾಣವಾಗಬೇಕೆಂಬುದು ಅದರ ಭಾವ; ಹೌದು, ಅದು ಅಗತ್ಯ. ಆದರೆ, ಸಾಂಸ್ಕೃತಿಕ ಧಾರ್ಮಿಕ ಅಥವಾ ಅಂತಹ ಇತರ ಯಾವುದೇ ರೀತಿಯ ವಿಲೀನೀಕರಣದ ವಿರುದ್ಧ ನಾವು ಎಚ್ಚರ ವಹಿಸಬೇಕಿದೆ. ಅಂತಹ ವಿಲೀನೀಕರಣವನ್ನು ಅಲ್ಪಸಂಖ್ಯಾತರ ಮೇಲೆ ಹೇರುವುದು ಈ ಸದನದ ಬಹುಸಂಖ್ಯಾತರು ಮತ್ತು ಗಂಭೀರ ಚಿಂತಕರ ಆಲೋಚನೆ ಅಲ್ಲವೆಂದು ನಾನು ಭಾವಿಸುತ್ತೇನೆ. ಸ್ವಾಮಿ, ಸ್ವಿಟ್ಜರ್‌ಲೆಂಡ್‌ನಂತಹ ದೇಶದ ನಿದರ್ಶನವನ್ನು ನೆನಪಿನಲ್ಲಿಡಬೇಕು. ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ, ಎಲ್ಲರಿಗೂ ಸಾಮಾನ್ಯವಾದ ಭಾಷೆಯೊಂದು ಬಳಕೆಯಾಗುತ್ತಿದೆ. ಎಲ್ಲರೂ ಒಂದೇ ಸಂವಿಧಾನವನ್ನು ಒಪ್ಪಿಕೊಂಡಿದ್ದಾರೆ. ಹಾಗಿದ್ದೂ ಭಾಷೆ ಅಲ್ಪಸಂಖ್ಯಾತರು ತಮ್ಮ ತಾಯ್ನಾಡಿನ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದಕ್ಕೆ ಅಲ್ಲಿ ಅನುಮತಿ ನೀಡಲಾಗಿದೆ. ಅಂತೆಯೇ, ಜರ್ಮನಿ ಅಥವಾ ಇಟಲಿ ಅಥವಾ ಫ್ರಾನ್ಸ್‌ನಲ್ಲಿ ಕೂಡ ಇಂತಹುದೇ ವ್ಯವಸ್ಥೆ ಇದೆ. ಕೆನಡದ ಬೃಹತ್ ಕಾಮನ್‌ವೆಲ್ತ್ ರಾಷ್ಟ್ರದಲ್ಲಿ ಇಂದಿಗೂ ಎರಡು ವರ್ಗದ ಪ್ರಜೆಗಳು ವಾಸಿಸುತ್ತಿದ್ದಾರೆ. ಒಂದೆಡೆ ಸ್ಕಾಟ್, ಇಂಗ್ಲಿಷ್ ಪ್ರಜೆಗಳು, ಮತ್ತೊಂದೆಡೆ, ಪ್ರಾಚೀನ ಫ್ರೆಂಚ್ ಸಮುದಾಯ. ಇವರೆಲ್ಲರೂ ಪರಸ್ಪರ ಸೌಹಾರ್ದದಿಂದ ಬಾಳ್ವೆ ನಡೆಸುತ್ತಿದ್ದಾರೆ. ತಮ್ಮ ತಮ್ಮ ದೇಶಗಳ ಪದ್ಧತಿಗಳನ್ನೂ, ಆಚಾರ ವಿಚಾರಗಳನ್ನೂ, ಭಾವನೆಗಳನ್ನೂ ಅವರು ಬಿಟ್ಟಿಲ್ಲ, ಬದಲಿಗೆ ಬೆಳೆಸುತ್ತಿದ್ದಾರೆ. ಕೆನಡ ಕಾಮನ್‌ವೆಲ್ತ್‌ನ ಒಂದು ವರ್ಗಕ್ಕೆ ಮತ್ತೊಂದು ವರ್ಗದೊಡನೆ ಸಹಬಾಳ್ವೆ ನಡೆಸುವುದು ಸುಲಭ. ಏಕೈಕ ರಾಷ್ಟ್ರವೊಂದರ ಯಶಸ್ಸಿಗೆ ಅದರ ಪುರೋಭಿವೃದ್ಧಿಗೆ ಒಮ್ಮನಸ್ಸಿನಿಂದ ಕೈಜೋಡಿಸುತ್ತಾರೆ. ಸ್ವಿಟ್ಜರ್‌ಲೆಂಡ್‌ನಲ್ಲಿ ಮೂರು ಪಂಗಡಗಳಿವೆ; ಆ ಮೂರು ಪಂಗಡಗಳಿಗೂ ಮೂರು ಭಾಷೆಗಳು; ಅಲ್ಲದೆ ಅವರ ಮತಗಳು ಬೇರೆ. ಅವುಗಳಲ್ಲಿ ಪರಸ್ಪರ ತೀವ್ರವಾದ ಭಿನ್ನತೆ ಇದ್ದೂ ಸಹ, ಅವರೆಲ್ಲ ಒಂದು ಮಹಾಸಂಘದ ಸದಸ್ಯರಂತೆ ವರ್ತಿಸುತ್ತಿದ್ದಾರೆ. ಆ ಮಹಾಸಂಘಕ್ಕೆ ಅಸೂಯಾಪರರ ಆಕ್ರಮಣದ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳುವುದು ಗೊತ್ತಿದೆ. ಶತಮಾನಗಳಿಂದ ಗೊಂದಲಕ್ಕೆ ಎಡೆ ಇಲ್ಲದಂತೆ ರಕ್ಷಿಸಿಕೊಂಡು ಬರುತ್ತದೆ. ಮಾನ್ಯರೆ, ಈ ರಾಷ್ಟ್ರದ ಬಲ, ವಿಭಿನ್ನ ಸಮುದಾಯದ ಪ್ರತ್ಯೇಕ ಸದಸ್ಯರ ಬಲವನ್ನು ಆಧರಿಸಿದೆ ಎಂಬುದು ನನ್ನ ನಂಬಿಕೆ, ಅವರವರ ಭಾವನೆಗಳು ಆದರ್ಶಗಳು ಅವರವರದೆ ಆಗಿರುತ್ತವೆ. ಅದರ ತಳಹದಿ ಇಲ್ಲದೆ, ಅವರು ಸಶಕ್ತರಾಗಲಾರರು. ರಾಷ್ಟ್ರಶಕ್ತಿಗೆ ಹೊಂದಿಕೊಂಡ ಸಾಂಸ್ಕೃತಿಕ ಸ್ವಾಯತ್ತತೆಯ ಪರ ನಾನು ವಾದಿಸುತ್ತ ಬಂದಿದ್ದೇನೆ ಮತ್ತು ಅದರ ಮಂಜೂರಾತಿಗೆ ಆಶ್ವಾಸನೆ ನೀಡಲಾಗಿದೆ. ಈ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಯಥೋಚಿತವಾಗಿ ಉತ್ತೇಕ್ಷಿಸಿದಾಗ, ಮೇಲ್ನೋಟಕ್ಕೆ ರಾಷ್ಟ್ರದ ಏಕತೆಗೆ ಅದು ಹೊಂದಿಕೊಂಡೇ ಇರುತ್ತದೆ.

ವಿಭಿನ್ನ ಶ್ರದ್ಧೆಗಳನ್ನೂ, ನಂಬಿಕೆಗಳನ್ನೂ ಇಟ್ಟುಕೊಳ್ಳುವುದು ಪ್ರತ್ಯೇಕ ವಿಷಯ. ಅದು ಬಿಟ್ಟರೆ, ಹಿಂದೂ, ಮುಸ್ಲಿಮ್, ಕ್ರೈಸ್ತ, ಪಾರಸಿಕ ಎಲ್ಲ ಸಮುದಾಯಗಳು ಎಲ್ಲರಿಗೂ ಈ ಮಹಾನ್ ರಾಷ್ಟ್ರದ ಪಾರಂಪರಿಕ ಹಿರಿಮೆಯನ್ನು ಒಪ್ಪಿಕೊಳ್ಳಲು ಸಾಧ್ಯವಿದೆ. ಆ ಸಾಮಾನ್ಯ ಸಾಮರಸ್ಯವನ್ನು ಆಧರಿಸಿ, ರಾಷ್ಟ್ರೀಯ ಭಾವೈಕ್ಯ ನಿರ್ಮಾಣದಲ್ಲಿ ಸಾಧಿಸಬಹುದು.

ಮಾನ್ಯರೆ, ನನ್ನದೇ ಸಮುದಾಯದ ಬಗ್ಗೆ ಮಾತನಾಡುವಾಗ, ಭಾರತಿಯೇತರ ಸಂಸ್ಕೃತಿಯೊಂದನ್ನು ಈ ಸಮುದಾಯ ರೂಢಿಸಿಕೊಂಡಿದೆ ಎಂಬ ಭಾವನೆಯನ್ನು, ಬಹುಕಾಲದಿಂದಲೂ ನಮ್ಮ ದೇಶವಾಸಿಗಳು ಬೆಳೆಸುತ್ತ ಬಂದಿದ್ದಾರೆ. ಆ ಭಾವನೆಯನ್ನು ತಾಳುವ ಅಗತ್ಯವಿಲ್ಲವೆಂದು ನಾನು ಈ ಬೃಹತ್ ಸಭೆಗೆ ಭರವಸೆ ಕೊಡುತ್ತೇನೆ. ಅದು ಎಲ್ಲ ಸಂದರ್ಭಗಳಲ್ಲೂ ವಾಸ್ತವವಲ್ಲ. ನನ್ನ ಮತಾವಲಂಬಿಗಳು ಹೊರಗಿಂದ ಬಂದವರಾಗಲಿ, ಈ ನಾಡಿನವರೇ ಆಗಲಿ. ಈ ದೇಶದ ಅತ್ಯಮೋಘ ಪದ್ಧತಿಗಳೊಡನೆ ಹೊಂದಿಕೊಂಡಿದ್ದಾರೆ. ಮೊದಲ ದಿನದ ಅಧಿವೇಶನದಲ್ಲಿ ಬನಾರಸು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಸರ್.ಎಸ್. ರಾಧಾಕೃಷ್ಣನ್. ಈ ದೇಶಕ್ಕೆ ಬಂದ ಮೊಟ್ಟಮೊದಲನೆ ಇಂಗ್ಲಿಷ್ ಪ್ರಜೆಯ ಹೆಸರನ್ನು ಪ್ರಸ್ತಾಪಿಸಿದರು – ಜೆಸ್ಯೂಟ್ ಥಾಮಸ್ ಸ್ಟೀವನ್ಸ್ ನಂತರ ಬಂದವರು ವರ್ತಕರು, ಗೆಲ್ಲಾಳುಗಳು; ಈಗ ಅಂತಹ ಆಕ್ರಮಣ ಪ್ರವೃತ್ತಿ ಕೊನೆಗೊಳ್ಳುತ್ತಿದೆ ಎಂದು ಅವರು ಹೇಳಿದರು. ಮಾನ್ಯರೆ, ನಾನು ಸಭೆಗೆ ಆಶ್ವಾಸನೆ ಕೊಡುತ್ತಿದ್ದೇನೆ–ಮತ್ತು ಈ ವಿಷಯವನ್ನು ಸರ್.ಎಸ್. ರಾಧಾಕೃಷ್ಣನ್ ಅವರೂ ಬಲ್ಲರು–ಆ ವರ್ತಕರು, ಮಾರಾಟಗಾರರು, ಗೆಲ್ಲಾಳುಗಳಿಗೂ, ಅವರ ಮುಂಚೆ ಬಂದ ಜೆಸ್ಯೂಟನಿಗೂ ಏತರ ಸಂಬಂಧವೂ ಇಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಆತ ಈ ರಾಷ್ಟ್ರಕ್ಕೆ ಬಂದ ಸಂದರ್ಭದಲ್ಲಿ, ಅವನಿಗೆ ತನ್ನ ರಾಷ್ಟ್ರದಲ್ಲೆ, ಆತಿಥ್ಯ ದೊರೆತಿರಲಿಲ್ಲ. ಕಿರುಕುಳ ಕೊಟ್ಟು ಅವನನ್ನು ಆ ನಾಡಿನಿಂದ ಹೊರದೂಡಲಾಯಿತು. ಈ ಮಹಾನ್ ರಾಷ್ಟ್ರ ಆತನಿಗೆ ಆಸರೆ ನೀಡಿತು. ನಂತರ, ಈ ರಾಷ್ಟ್ರವನ್ನು ಆತ ತನ್ನ ತಾಯ್ನಾಡೆಂದು ಭಾವಿಸಿ ಇಲ್ಲಿಯ ಭಾಷೆಯನ್ನು ಕಲಿತ. ಒಂದು ಗ್ರಂಥವನ್ನು ರಚಿಸಿದ. ಮರಾಠ ವಿದ್ವಾಂಸರು ಅದನ್ನು "ಸ್ಟೀವನ್ಸ್ ಪುರಾಣ"ವೆಂಬ ಹೆಸರಿನ ಪ್ರಾಚೀನ ಗ್ರಂಥವೆಂದುಕೊಂಡುದಾಗಿ ಕೇಳಿಬಲ್ಲೆ. ಅಂತಹ ಭಾವನೆಯಿಂದಲೆ, ಆ ಮತಾನುಯಾಯಿಗಳು ಇಲ್ಲಿಗೆ ಬರಲು ಬಯಸುತ್ತಾರೆ. ಅದೇ ಭಾವನೆಯಿಂದಲೆ, ಈ ರಾಷ್ಟ್ರದ ಹಿರಿಮೆಯನ್ನು ಎತ್ತಿಹಿಡಿದು, ಅದರ, ಸಮೃದ್ಧಿಗಾಗಿ ಅಗತ್ಯವಿರುವ ರಾಷ್ಟ್ರದ ಪುನರಾರಚನೆಯ ಕರ್ತವ್ಯದಲ್ಲಿ ಯೋಗದಾನ ನೀಡಬಯಸುತ್ತೇನೆ.

ನಾನೀ ಸದನದ ವೇಳೆಯನ್ನು ಇನ್ನು ಹೆಚ್ಚು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಈಗಾಗಲೆ ಪ್ರಸ್ತಾವಿಸಲಾಗಿರುವ ಇನ್ನೊಂದು ಅಂಶದ ಬಗ್ಗೆ ನಾನು ಮಾತನಾಡದೆ ಇರಲಾಗದು. ಅದೊಂದು ಹೊಸ ಆಲೋಚನೆ; ಅದರ ಬಗ್ಗೆ ಸಭೆಯ ಮುಂದೆ ಪ್ರಸ್ತುತ ಪಡಿಸಲು ನನಗೆ ಸಾಧ್ಯವೆಂದುಕೊಳ್ಳುತ್ತೇನೆ. ಜನತಾ ಸಾರ್ವಭೌಮತ್ವದ ಬಗ್ಗೆ ಬಹಳಷ್ಟೆ ಮಾತನಾಡಿಯಾಗಿದೆ. ಅದು ರಾಜಪ್ರಭುತ್ವದೊಡನೆ ಹೊಂದಿಕೊಳ್ಳುವ ಸಾಧ್ಯತೆ ಇಲ್ಲವೆಂದು ತಿಳಿಸಲಾಗಿದೆ. ಮತ್ತು ಅದರಿಂದ ಉದ್ಭವಿಸುವ ಅಪಾಯಗಳು ಮತ್ತು ತೊಂದರೆಗಳನ್ನು ವಿವರಿಸಲಾಗಿದೆ. ಪ್ರಜಾಸಾರ್ವಭೌಮತ್ವ ಸಿದ್ಧಾಂತ ಹೊಸದೇನೂ ಅಲ್ಲ. ಅದು ಹತ್ತೊಂಬತ್ತನೆಯ ಶತಮಾನದ ಸಿದ್ಧಾಂತವಲ್ಲ. ಐರೋಪ್ಯ ರಾಜಕೀಯ ಚಿಂತನೆಯ ಇತಿಹಾಸದಿಂದ ತಿಳಿದುಬರುವುದೇನೆಂದರೆ, ಈ ತತ್ತ್ವ ೧೬ನೇ ಶತಮಾನದಷ್ಟು ಹಳೆಯದು. ಅದರ ಬಗ್ಗೆ ಆ ಶತಮಾನದಲ್ಲಿ ಸಂಘರ್ಷವೇರ್ಪಟ್ಟಿತ್ತು. ಕೆಲವು ದೊರೆಗಳು, ಅದೊಂದು ದೈವದತ್ತ ಹಕ್ಕು ಎಂದು ವಾದಿಸಿದರು. ಸ್ವಾರಸ್ಯವೆಂದರೆ, ಸಂಪ್ರದಾಯವಾದಿ ಚಿಂತಕರು, ರಾಜಪ್ರಭುತ್ವ ಪಕ್ಷಪಾತಿ ಚಿಂತಕರು ಕೂಡ. ಪ್ರಜಾಸಾರ್ವಭೌಮತ್ವದ ಪರವಾಗಿಯೂ, ಆ (ದೈವದತ್ತ ಹಕ್ಕೆಂಬ) ಸಿದ್ಧಾಂತದ ವಿರುದ್ಧವಾಗಿಯೂ ವಾಲಿದ್ದರು. ರೂಸೋಗಿಂತ ಭಿನ್ನವಾಗಿ, ಸೇಂಟ್ ರಾಬರ್ಟ್ ಬಿಲ್ಲರ್‌ಮೈನ್ ಮತ್ತು ಸುಯರೆಜ್ ಅವರು ವ್ಯಾಖ್ಯಾನಿಸಿದರೂ ಸಹ, ಇಂಗ್ಲೆಂಡ್‌ನ ಒಂದನೇ ಜೇಮ್ಸ್‌ನ ವಿರುದ್ಧ ಸಮರ್ಥಿಸಿದರು. ತದನಂತರದ ದಿನಗಳಲ್ಲಿ, ಆತನೇ ಜನತೆಯ ಸಹಾನುಮತದಿಂದಲೇ ಸರ್ಕಾರದ

ಅಧಿಕಾರ ಚಲಾವಣೆ ಸಾಧ್ಯವೆಂದು ಅನುಮೋದಿಸಿದನು. ಜನತೆಯ ಎಲ್ಲ ಅಧಿಕಾರಗಳೂ, ಹಕ್ಕುಗಳೂ ಕ್ರೋಡೀಕೃತಗೊಂಡು, ಸರ್ಕಾರಕ್ಕೆ ಸಲ್ಲಿಸಲ್ಪಟ್ಟಿದೆಯಾದುದರಿಂದ ಪ್ರಭುತ್ವದ ಸರ್ಕಾರ, ವಾಸ್ತವವಾಗಿ ಜನತಾ ಸರ್ಕಾರವೆಂದು ಸಮರ್ಥಿಸಿದನು. ಆದರೆ, ವೈಯಕ್ತಿಕ ಹಕ್ಕುಗಳನ್ನು ಸರ್ಕಾರದವರಿಗೆ ಮುಡಿಪಿಟ್ಟರೆ, ಅಂತಹ ಸರ್ಕಾರ ತ್ವಚೆಯ ಮೇಲಣ ಅನಪೇಕ್ಷಿತ ದುರ್ಮಾಂಸದಂತೆ ಬೆಳೆಯುತ್ತದೆ. ಸಹಜ ಸ್ವರೂಪದ ಮಾನವನ ಸಹಜ ಉತ್ಪನ್ನವಾಗಿ ಸರ್ಕಾರ ಚಿಗುರೊಡೆಯಬೇಕು. ಸಾಮಾಜಿಕ ಮತ್ತು ಸಾಮುದಾಯಿಕ ಜೀವನದಲ್ಲಿ ಮನಷ್ಯನಾದವನು ಪರಿಪೂರ್ಣತೆಯನ್ನು ಸಾಧಿಸಬೇಕು. ಕೇಂದ್ರದ ಅಧಿಕಾರ, ಅವನ ಜೊತೆಗಿರಬೇಕಾದುದು ಅಗತ್ಯ. ಸರ್. ಎಸ್.ರಾಧಾಕೃಷ್ಣನ್ ಅವರು ಹೇಳಿದಂತೆ ಆ ಅಧಿಕಾರ ನೈತಿಕ ಕಾನೂನಿನ ಮೇಲೆ ನಿಲ್ಲಬೇಕು. ಅದರ ಮೇಲೆ ಜನರ ವೈಯಕ್ತಿಕ ಹಕ್ಕುಗಳು ನಿಲ್ಲಬೇಕು. ಸರ್ಕಾರಕ್ಕೆ ಅದುವೆ ಊರುಗೋಲಾಗಬೇಕು. ಭಗವಂತ ಪ್ರಕೃತಿಯ ಸೃಷ್ಟಿಕರ್ತ. ನಮ್ಮಲ್ಲಿ ಕೆಲವರು ವ್ಯಕ್ತಪಡಿಸುವಂತೆ, ಭಗವದನುಗ್ರಹದಿಂದ ಅಧಿಕಾರ ಪ್ರಾಪ್ತಿಯಾಗಬೇಕು. ನೈತಿಕ ಕಾನೂನು ಕೂಡ ಆತನ ಸಮಗ್ರ ಸೃಷ್ಟಿಯೆ. ಒಂದು ವಿಷಾದನೀಯ ಸಂಗತಿಯನ್ನು ನಾನಿಲ್ಲಿ ವ್ಯಕ್ತಪಡಿಸಲೇಬೇಕಿದೆ. ಅದು ಈ ಮಹತ್ ನಿಲುವಳಿಯಲ್ಲಿ ದೈವದ ಪ್ರಸ್ತಾವವಿಲ್ಲದಿರುವುದು. ದೈವದ ಹೆಸರೆತ್ತದಿರಲು ಕಾರಣ, ಈ ನಿರ್ಣಯಕ್ಕೆ ಮತೀಯ ಲೇಪವಿರಬಾರದೆಂಬುದು ನನಗೆ ಅರ್ಥವಾಗುತ್ತದೆ. ಮತೀಯ ಭಾವನೆಗಳ ಘೋಷಣೆಗೆ ಇದರಲ್ಲಿ ಆಸ್ಪದವಿರಬಾರದೆಂಬುದು ನಿಲುವಳಿಯ ಪ್ರಸ್ತಾವಕರ ಆಶಯವಿರಬಹುದು. ಆದರೆ, ಮಾನ್ಯರೆ ನನ್ನ ಅಭಿಪ್ರಾಯಗಳನ್ನು ಪ್ರಸ್ತುತ ಪಡಿಸಿ ಮುಗಿಸುವ ಮುನ್ನ ತಮ್ಮ ಅನುಮತಿ ಬೇಡಿ ಒಂದು ಅಂಶವನ್ನು ಸಭೆಯ ಮುಂದಿಡಲು ಬಯಸುತ್ತೇನೆ. ಭಗವಂತನ ಹೆಸರನ್ನು ಒಂದು ವೇಳೆ ಈ ಮಹತ್ವಪೂರ್ಣ ಪ್ರಾಸ್ತಾವಿಕ ನಿಲುವಳಿಯಲಿ ಉಲ್ಲೇಖಿಸಿದ್ದಲ್ಲಿ ಅದು ನಮ್ಮ ಬೃಹತ್ ರಾಷ್ಟ್ರದ ಪಂಥಕ್ಕೆ ಭಾವನೆಗಳಿಗೆ ಚೈತನ್ಯಕ್ಕೆ ಹೊಂದಿಕೊಂಡಂತಿರುತ್ತಿತ್ತು ಮತ್ತು ಅದರ ಪ್ರಾಚೀನ ಸಂಸ್ಕೃತಿಯನ್ನು ಅಭಿವ್ಯಕ್ತ ಪಡಿಸುತ್ತಿತ್ತು. ಆ ಭಾವನೆ ಇಲ್ಲಿ ಕಾಣಬರದಿದ್ದರೂ, ನಮ್ಮ ಸರ್ಕಾರಕ್ಕೊಂದು ಪಾವಿತ್ರ್ಯ ಪ್ರಾಪ್ತವಾಗಲು, ಅಂತಿಮವಾಗಿ ಜಗನ್ನಿಯಾಮಕನ ಅನುಜ್ಞೆ ಹಾಗೂ ಶ್ಲಾಘನೆ ದೊರೆತೇ ದೊರೆಯುತ್ತದೆ ಎಂಬುದು ನನ್ನ ನಿಚ್ಚಳ ನಂಬುಗೆ. ಸರ್ಕಾರವೆಂಬುದು ದೈವ ಸನ್ನಿಧಿ ಎಂಬ ಸಿದ್ಧಾಂತವನ್ನು ನಾನು ಪ್ರತಿಪಾದಿಸುತ್ತಿಲ್ಲ. ಆದರೆ, ಸರ್ಕಾರವನ್ನು ಒಪ್ಪಿ ಅದರ ಪ್ರಜೆಗಳಂತೆ ವರ್ತಿಸುವಾಗ ಅವರ ಆತ್ಮಸಾಕ್ಷಿಗೆ ಒಪ್ಪಿಗೆಯಾಗುವಂತೆ ನಡೆದುಕೊಳ್ಳಬೇಕು. ತಮ್ಮ ರಾಜ್ಯದ ಸರ್ಕಾರಕ್ಕೆ ಬದ್ಧರಾಗಿರುವುದು, ಅವರ ಕರ್ತವ್ಯವೆಂದು ತಿಳಿದು ನಡೆಯಬೇಕು. ಮಾನ್ಯರೆ ನಾವು ವಿಧಿನಿಯಾಮಕದಲ್ಲಿ ನಂಬಿಕೆಯುಳ್ಳವರು. ಚರಿತ್ರೆ ತನ್ನೆಲ್ಲ ವಿಪರ್ಯಯದೊಡನೆ ಮೈ ತೆರದುಕೊಂಡಂತೆ, ಈಗಲೂ ವಿಧಿಯೆಂಬ ಕಾಣದ ಕೈಯೊಂದರ ಚಳಕವನ್ನು ಕಂಡರಿಸುತ್ತದೆ. ಆತನ ಪವಿತ್ರನಾಮ ಇಲ್ಲಿ ಉಲ್ಲೇಖಿಸಲ್ಪಟ್ಟಿಲ್ಲವಾದರೂ ನಾವಿಲ್ಲಿ ಆತನ ಅನುಗ್ರಹದಿಂದಲೆ, ಆತನ ಸಂಕಲ್ಪದಿಂದಲೆ ನೆರೆದಿದ್ದೇವೆ. ಅದುವೆ ನಮ್ಮೆಲ್ಲರ ಹೃದಯಗಳನ್ನು ಬೆಸೆದು ಒಂದಾಗಿಸುವುದು. ಈ ಪ್ರಾಸ್ತಾವಿಕ ನಿರ್ಣಯದ ಪ್ರಾರಂಭವನ್ನು ನಾವು ಮಾಡಿದ್ದೇವೆ. ಭವಗದನುಗ್ರಹದಿಂದಲೆ ನೂತನ ಚೇತನ, ನೂತನ ಸಂವೃದ್ಧಿಯತ್ತ ಸಾಗಿ ಗುರಿ ತಲುಪುತ್ತೇವೆಂಬ ನಂಬುಗೆ ನನಗಿದೆ. ತಲುಪಲು ನಮಗೆ ದೈವಾನುಗ್ರಹ ಒದಗಲೆಂದು ಪ್ರಾರ್ಥಿಸುತ್ತೇನೆ.

**ಶ್ರೀ ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಿದ ನಿಲುವಳಿಗಾಗಿ ನಾನಿಲ್ಲಿ ನಿಂತಿದ್ದೇನೆ. ಇಂದು ನಾವು ಭಾರತದ ಸಂವಿಧಾನವನ್ನು ರಚಿಸಲಿದ್ದೇವೆ. ಇದನ್ನು ನಾವೇ ರಚಿಸಲು ಒಂದು ಅವಕಾಶವನ್ನು ಭಾರತದ ಜನತೆ ಮತ್ತು ನಾವು ಅರಸುತ್ತಿದ್ದೆವು. ಆ ಸಂದರ್ಭ ಒದಗಿ ಬಂದುದಕ್ಕಾಗಿ ನನಗೆ ಸಂತಸವಾಗುತ್ತಿದೆ. ಸಂವಿಧಾನವನ್ನು ನಾವು ರಚಿಸುತ್ತಿರುವ ಸಂದರ್ಭದಲ್ಲಿ, ಅದನ್ನು ನಮ್ಮ ರಾಷ್ಟ್ರಭಾಷೆಯಲ್ಲೆ ರಚಿಸುವುದು ಉಚಿತ. ಅದು ನಮ್ಮ ಕರ್ತವ್ಯ. ಆ ಕಾರಣವನ್ನು ಮುಂದಿಟ್ಟೆ ನನ್ನ ಭಾಷಣವನ್ನು ಹಿಂದೂಸ್ತಾನಿಯಲ್ಲಿ

ಮಾಡುತ್ತಿದ್ದೇನೆ; ನಾನು ಹಿಂದುಳಿದ ಸಮುದಾಯಕ್ಕೆ ಸೇರಿದವನು. ಇದು, ಸಾವಿರಾರು ವರುಷಗಳಿಂದ ಭಾರತದಲ್ಲಿ ತುಳಿತಕ್ಕೆ ಸಿಕ್ಕ ಸಮುದಾಯ, ನಾನೊಬ್ಬ ಹರಿಜನ, ಭಾರತದ ೯೦ ದಶಲಕ್ಷ ಹರಿಜನರ ದನಿಗೆ ಇಲ್ಲಿ ದನಿಗೂಡಿಸುತ್ತಿದ್ದೇನೆ. ಹರಿಜನ ಕೋಮು ಈ ನಿರ್ಣಯವನ್ನು ಅತೀವ ಸಂತಸದಿಂದ ಒಪ್ಪಿಕೊಳ್ಳುತ್ತಿದೆ. ಇದಕ್ಕೆ ಇರುವ ಒಂದೇ ಕಾರಣವೆಂದರೆ, ಈ ನಿಲುವಳಿ ಭಾರತದ ಎಲ್ಲ ಅಲ್ಪಸಂಖ್ಯಾತರ ರಕ್ಷಣೆಯ ಮೂರ್ತರೂಪ. ಈ ನಿರ್ಣಯದ ವಿರುದ್ಧ ಹಾಗೂ ಡಾ. ಜಯಕರ್ ಅವರು ಮಾಡಿದ ತಿದ್ದುಪಡಿಯ ಪರವಾಗಿ ಮಾತನಾಡಿದ ನನ್ನ ಮಿತ್ರ ಡಾ. ಅಂಬೇಡ್ಕರ್ ಅವರು, ಭಾರತವು ಒಗ್ಗಟ್ಟಿನಿಂದ ಉಳಿಯಬೇಕು, ಮತ್ತು ಒಂದು ಬಲಿಷ್ಠ ಕೇಂದ್ರ ಸರ್ಕಾರವನ್ನು ಹೊಂದಬೇಕು ಎಂದು ಹೇಳಿದರು. ಅವರು ತಮ್ಮ ಇತ್ತೀಚಿನ ಇಂಗ್ಲೆಂಡ್ ಪ್ರವಾಸದ ಬಗ್ಗೆ ತೃಪ್ತಿ ಹೊಂದಿರಲಿಲ್ಲ. ಭಾರತಕ್ಕೆ ಮರಳಿದ ನಂತರ ಅವರು ನೀಡಿದ ಭಾಷಣದಿಂದ ನಾನು ಸಂತುಷ್ಟನಾಗಿದ್ದೇನೆ, ಮತ್ತು ಅವರ ಮಾತಿಗೆ ಬದ್ಧರಾಗಿರುತ್ತಾರೆ ಎಂದು ನಾನು ಭಾವಿಸುತ್ತೇನೆ.

ಭಗವಂತ ಅವರಿಗೆ ಇನ್ನಷ್ಟು ವಿವೇಕವನ್ನು ಕರುಣಿಸಲೆಂದು ಆಶಿಸುತ್ತೇನೆ. ಪ್ರತ್ಯೇಕ ಮತದಾರರ ಬೇಡಿಕೆಯನ್ನು ಅವರು ಕೈಬಿಡುತ್ತಾರೆಂದು ನಂಬುತ್ತೇನೆ. "ನಾನು ಹಿಂದೂ ಅಲ್ಲ" ಎಂಬ ಮಾತನಾಡುವುದನ್ನು ಅವರು ಇಲ್ಲಿಯವರೆಗೂ ಆಡುತ್ತಲೆ ಬಂದಿದ್ದಾರೆ. ಮುಂದೆ, ಅವರು ಹಾಗೆನ್ನುವುದನ್ನು ನಿಲ್ಲಿಸಲಿ. ಭಗವಂತನು ಅವರಿಗೆ ಸಮೃದ್ಧಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಕರುಣಿಸುವನೆಂದು ನಂಬಿದ್ದೇನೆ.

ಹರಿಜನರ ಸ್ಥಿತಿಗತಿಗಳನ್ನು ನಾನಿಲ್ಲಿ ಬಣ್ಣಿಸಿದರೆ, ನಿಮ್ಮ ಮನ ಕರಗುತ್ತದೆ. ಅವರು ಇಂದಿನವರೆಗೂ ದಮನಕ್ಕೆ ಒಳಗಾಗಿದ್ದಾರೆ. ದೌರ್ಜನ್ಯಕ್ಕೆ ತುತ್ತಾಗಿದ್ದಾರೆ. ನಾವು ಇದೆಲ್ಲವನ್ನೂ ಸಹನೆಯಿಂದ ಸಹಿಸಿಕೊಂಡೆವು. ನಮ್ಮ ನಂಬಿಕೆಯನ್ನು ಬಿಟ್ಟುಕೊಡಲಿಲ್ಲ. ನಾವು ಹಿಂದೂಗಳು. ಹಿಂದೂಗಳಾಗಿಯೇ ಉಳಿದು, ಹಿಂದೂಗಳಂತೆಯೇ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳುತ್ತೇವೆ. ನಾವು "ಹಿಂದೂಗಳಲ್ಲ" ಎಂದು ಎಂದಿಗೂ ಹೇಳಲಾರೆವು. ನಾವೂ ಹಿಂದೂಗಳೆಂಬುದು ನಿಸ್ಸಂಶಯ. ಹಿಂದೂಗಳಾಗಿಯೇ, ಹಿಂದೂಗಳ ವಿರುದ್ಧ ಹೋರಾಡುತ್ತೇವೆ. ಹಕ್ಕುಗಳನ್ನು ಪಡೆಯುತ್ತೇವೆ. ನೋಕಾಲಿ ಮತ್ತು ಪಶ್ಚಿಮ ಬಂಗಾಲದಲ್ಲಿ ದೌರ್ಜನ್ಯಕ್ಕೆ ಬಲಿಯಾದವರಲ್ಲಿ ೯೦ ಪ್ರತಿಶತ ಹರಿಜನರೆ ಎಂಬುದು ನಮಗೆ ತಿಳಿದಿದೆ. ಅವರ ಮನೆಗಳನ್ನು ಸುಡಲಾಯಿತು. ಮಕ್ಕಳು ಹತ್ಯೆಗೀಡಾದರು. ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಎಲ್ಲಕ್ಕಿಂತ ಮಿಗಿಲಾಗಿ ಸಾವಿರಾರು ಹರಿಜನರು ಬಲಾತ್ಕಾರವಾದ ಮತಪರಿವರ್ತನೆಗೆ ಪಕ್ಕಾದರು. ಸಂಖ್ಯಾತ್ಮಕವಾಗಿ, ಯಾವುದೇ ಸಮುದಾಯಕ್ಕೆ ಹೆಚ್ಚಿನ ಸವಲತ್ತು ದೊರೆಯಬೇಕಿದ್ದರೆ, ಅದನ್ನು ಪಡೆಯಲು, ನಿಸ್ಸಂದೇಹವಾಗಿ ಹರಿಜನರು ಹೋರಾಡುವರು, ಏಕೆಂದರೆ ಅವರ ಸಂಖ್ಯೆ ದೊಡ್ಡದು. ಇಂದು ಹಿಂದುಳಿದಿರುವ ತುಳಿತಕ್ಕೆ ಸಿಕ್ಕಿರುವ ಈ ಸಮುದಾಯಕ್ಕೆ ಮಾಡಿರುವುದಾದರೂ ಏನು? ಪೂನಾ ಒಡಂಬಡಿಕೆಯನ್ನು ನೆನಪು ಮಾಡುತ್ತೇನೆ. ನನ್ನದೇ ಪ್ರಾಂತ್ಯದ ಅನುಭವವನ್ನು ನಿಮ್ಮ ಮುಂದಿಡುತ್ತೇನೆ. ನಮ್ಮವರು ೨೫ ಪ್ರತಿಶತವಿರುವ ಕೇಂದ್ರೀಯ ಪ್ರಾಂತ್ಯದ ನಿದರ್ಶನವನ್ನು ನಿಮ್ಮ ಮುಂದಿಡುತ್ತಿದ್ದೇನೆ. ನಾವು ೨೮ ಸ್ಥಾನಗಳನ್ನು ಪಡೆಯಲು ಅರ್ಹರು. ಪೂನಾ ಒಡಂಬಡಿಕೆಯ ಪ್ರೇರಣೆಗೆ ಒಳಪಟ್ಟು, ನಮಗೆ ಕೇವಲ ೨೦ ಸ್ಥಾನಗಳನ್ನು ನೀಡಲಾಗಿದೆ. ನಮ್ಮ ಮಿಕ್ಕ ೮ ಸ್ಥಾನಗಳು ಎಲ್ಲಿ? ನನ್ನ ಪ್ರಾಂತ್ಯದಲ್ಲಿ ಮುಸ್ಲಿಮ್ ಬಾಂಧವರು ನಾಲ್ಕು ಪ್ರತಿಶತ ಇದ್ದಾರೆ. ನಮ್ಮ ಪ್ರಾಂತ್ಯದ ಜನಸಂಖ್ಯಾ ಪ್ರಮಾಣವನ್ನು ಆಧರಿಸಿ, ಅಲ್ಲಿ ಮುಸ್ಲಿಮರು ಕೇವಲ ಆರು ಸ್ಥಾನಗಳನ್ನು ಪಡೆಯಲು ಅರ್ಹರು. ಆದರೆ ದುರದೃಷ್ಟವಶಾತ್ ನಮ್ಮ ಎಂಟು ಸ್ಥಾನಗಳನ್ನು ತೆಗೆದು, ಮುಸ್ಲಿಮ್ ಸಹೋದರರಿಗೆ ನೀಡಲಾಯಿತು. ಹಾಗಾಗಿ ಅವರು ಆರು ಸ್ಥಾನಗಳಿಗೆ ಬದಲು ಹದಿನಾಲ್ಕು ಸ್ಥಾನಗಳನ್ನು ಪಡೆದರು. ಹರಿಜನರು ಇಂತಹ ಅನ್ಯಾಯವನ್ನು ಸಹಿಸಿಕೊಳ್ಳಲಾರರು. ಸಂಖ್ಯಾಬಲದ ಆಧಾರದ ಮೇಲೆ ಅವರಿಗೆ ಪ್ರಾತಿನಿಧ್ಯ ದೊರಕಬೇಕು. ಪ್ರಾಯಶಃ ನಿಮ್ಮ ಜನಗಣತಿಯಂತೆ ಭಾರತದಲ್ಲಿ ಹರಿಜನರು ೪೦ರಿಂದ ೫೦ ದಶಲಕ್ಷ ಇರಬಹುದು. ಆದರೆ ನಮ್ಮ ಜನಸಂಖ್ಯೆ ಮುಸ್ಲಿಮರಿಗಿಂತ ಎಂದಿಗೂ ಕಡಿಮೆ ಇಲ್ಲವೆಂಬುದನ್ನು ಆಗ್ರಹಪೂರ್ವಕವಾಗಿ

ಹೇಳಬಲ್ಲೆ. ನಾವು ೬೦ ದಶಲಕ್ಷ ಹರಿಜನರಿದ್ದು, ನಮ್ಮ ಸಂಖ್ಯೆ ಬಲದ ಆಧಾರದ ಮೇಲೆ ನಮಗೆ ಪ್ರಾತಿನಿಧ್ಯ ಸಿಗಬೇಕು.

ಈ ನಿಲುವಳಿಯಲ್ಲೊಂದು ಮಾನ್ಯತೆ ಇದೆ. ಪ್ರಸ್ತಾವಕರು ಒಪ್ಪಿದರೆ, ಅದನ್ನು ಪರಿಷ್ಕರಿಸಬಹುದು. ಈ ನಿಲುವಳಿಯು ಎಲ್ಲ ಅಲ್ಪಸಂಖ್ಯಾತರ ಹಿತರಕ್ಷಣೆಯ ಆಶ್ವಾಸನೆ ನೀಡುತ್ತದೆ. ಅಂತೆಯೇ ಹಕ್ಕುಗಳನ್ನು ನೀಡುವ ಭರವಸೆ ನೀಡುತ್ತದೆ. ದುರದೃಷ್ಟವಶಾತ್ ಭಾರತದಲ್ಲಿ ವಾಸವಾಗಿರುವ ೧೦ ದಶಲಕ್ಷ ಜನರನ್ನು ಆಜನ್ಮ ಅಪರಾಧಿ ಬುಡಕಟ್ಟು ಜನಾಂಗದವರೆಂದು ಬಣ್ಣಿಸಲಾಗಿದೆ. ಪ್ರಸ್ತುತ ಕಾನೂನಿನಂತೆ ನೂರಾರು, ಸಾವಿರಾರು ಮಂದಿ, ಈ ನಾಡಿನಲ್ಲಿ ಅಪರಾಧಿ ಬುಡಕಟ್ಟು ಜನಾಂಗದವರೆಂದು ಘೋಷಿಸಲ್ಪಟ್ಟಿದ್ದಾರೆ. ಅವರನ್ನು, ತನ್ನ ಹಕ್ಕುಗಳಿಂದ ವಂಚಿಸುವುದು ಆ ಘೋಷಣೆಯ ಉದ್ದೇಶ. ಅವರು ಅಪರಾಧಿಗಳು ಹೌದೋ ಅಲ್ಲವೋ, ಏನೇ ಆಗಲಿ ಅವರನ್ನು ಹುಟ್ಟಾ ಅಪರಾಧಿಗಳೆಂದು ಗುರುತಿಸಲಾಗಿದೆ. ಈ ಕಾನೂನಿನ ರದ್ದತಿಗಾಗಿ, ನಿಲುವಳಿಯಲ್ಲಿ ಕೆಲವೊಂದು ಉಪಬಂಧಗಳನ್ನು ನಿಗಮಿತಗೊಳಿಸಬೇಕು. ಪ್ರಸ್ತಾವಕರು ಇದನ್ನು ಮನಗಂಡು, ಈ ವರ್ಗದ ಹಿತಸಂರಕ್ಷಣೆಗೆ ಕ್ರಮ ಕೈಗೊಳ್ಳುವರೆಂದು ನಾನು ನಂಬುತ್ತೇನೆ.

ಸಚಿವ ಸಂಪುಟ ನಿಯೋಗದ ಯೋಜನೆಯಲ್ಲಿ, ವರ್ಗೀಕರಣದ ವಾಕ್ಯಖಂಡವನ್ನು ಕಾಂಗ್ರೆಸ್ ಪಕ್ಷ ಅಂಗೀಕರಿಸಿದೆ. ನಾನು ಕಾಂಗ್ರೆಸ್ಸಿಗನೇ ಆದರೂ, ತುಳಿತಕ್ಕೆ ಸಿಕ್ಕ "ಬಿ" ಮತ್ತು "ಸಿ" ವರ್ಗದ ಜನರ ಪಾಡೇನೆಂಬುದನ್ನು ನೆನೆದು ಭಯಗ್ರಸ್ತನಾಗಿದ್ದೇನೆ. ಕಾಂಗ್ರೆಸ್ ಇದನ್ನು ಅಂಗೀಕರಿಸಿದ ದಿನದಿಂದ ನಾನು ಯೋಚಿಸುತ್ತಲೆ ಬಂದಿದ್ದೇನೆ. ಬಂಗಾಳದಲ್ಲಿ ಪಾಕಿಸ್ತಾನದ ನೇರ ಅಸ್ತಿತ್ವವಿಲ್ಲದಿದ್ದರೂ, ಅಲ್ಲಿ ಹರಿಜನರು ಭಾರಿ ಪ್ರಮಾಣದ ದೌರ್ಜನ್ಯಕ್ಕೆ ಒಳಗಾದರು. ಇಲ್ಲಿಯ ಸದಸ್ಯರು, ಆ ಘಟನೆಗಳನ್ನು ಕಂಡು ದಿಗ್ಭ್ರಮೆ ಹೊಂದಿದ್ದಾರೆ. ಪತ್ರಿಕಾ ವರದಿಯಂತೆ, ಅಲ್ಲಿ ದೌರ್ಜನ್ಯಕ್ಕೆ ಬಲಿಯಾದವರಲ್ಲಿ, ೬೦ ಪ್ರತಿಶತ ಹರಿಜನರು ವರ್ಗೀಕರಣವನ್ನು ಒಪ್ಪಿದ ನಂತರ, ನನಗನಿಸುತ್ತೆ. ಪಾಕಿಸ್ತಾನ ನೆಲೆಗೊಂಡ ಪ್ರದೇಶಗಳಲ್ಲಿ, ಯಾರೊಬ್ಬ ಅಸ್ಪೃಶ್ಯನೂ ನೆಮ್ಮದಿಯಿಂದ ಜೀವಂತವಾಗಿ ಇರಲಾರ. ಪಾಕಿಸ್ತಾನದ ಸೃಷ್ಟಿಯ ಕಲ್ಪನೆ ಹುರಿಗೊಂಡಿರುವ ಪ್ರದೇಶಗಳಲ್ಲಿ, ಹರಿಜನರು ಬಲಾತ್ಕಾರಕ್ಕೆ ಸಿಕ್ಕು ಮತ ಪರಿವರ್ತನೆಗೆ ಶರಣಾಗಬೇಕಿದೆ. ಇಲ್ಲವೆ ಸಾಯಬೇಕಿದೆ. ಅವರು ದುರ್ಬಲರು. ಅವರು ಬಗೆಬಗೆಯ ದೌರ್ಜನ್ಯಕ್ಕೆ ಒಳಗಾಗಬೇಕಿದೆ. ಈಗಲೂ ಅವರ ಮೇಲಣ ದೌರ್ಜನ್ಯ ಮುಂದುವರೆಯುತ್ತಲೆ ಇದೆ. ಪ್ರತಿಯೊಂದು ಸಮುದಾಯವೂ ತನ್ನ ರಾಜಕೀಯ ಗುರಿಸಾಧನೆಗೆ, ತನ್ನ ಬಲವನ್ನು ಹೆಚ್ಚಿಸಿಕೊಳ್ಳುತ್ತಲೆ ಹೋಗುತ್ತಿದೆ. ಮುಂದೊಂದು ದಿನ ಬರಲಿದೆ; ಅಂದು ವರ್ಗೀಕರಣದ ಫಲವಾಗಿ ನಮ್ಮ ಸಂಖ್ಯಾತ್ಮಕ ಬಲ ಕುಗ್ಗುತ್ತದೆ. ಅವರ ಪ್ರಾಂತ್ಯಗಳಲ್ಲಿ ಯಾವ ಹರಿಜನನೂ ಉಳಿಯಲಾರ. ಈ ನಿಲುವಳಿಯನ್ನು ನಾವು ಪರಿಶೀಲಿಸುವಾಗ ಎಲ್ಲಿ ಹರಿಜನರು ದೌರ್ಜನ್ಯಕ್ಕೆ ಒಳಗಾಗಿದ್ದಾರೋ ಆ ಪ್ರಾಂತ್ಯಗಳಲ್ಲಿ ಹರಿಜನರ ಹಿತರಕ್ಷಣೆಯತ್ತ ಗಮನ ಕೊಟ್ಟು ವಿಶೇಷ ಕ್ರಮ ಕೈಗೊಳ್ಳಬೇಕು. ಈ ವಾಸ್ತವಿಕ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡೆ ಡಾ. ಅಂಬೇಡ್ಕರ್ ಒಂದು ಶಕ್ತಿಯುತ ಕೇಂದ್ರ ಸರ್ಕಾರದ ರಚನೆಗೆ ಆಗ್ರಹ ಪಡಿಸಿದ್ದು, ಪ್ರಾಂತೀಯ ಶಾಸನಸಭೆಗಳಲ್ಲಿ, ಹರಿಜನರಿಗೆ ಸಂಖ್ಯಾತ್ಮಕ ಪ್ರಾತಿನಿಧ್ಯ ಸಿಗಲಿಲ್ಲವಾದರೆ, ಬಂಗಾಳದ ಭಯಾನಕ ಪರಿಸ್ಥಿತಿ ನಾನು ಕಂಡಂತೆ, ಮುಂದುವರೆಯುತ್ತಲೆ ಇರುತ್ತದೆ. ಕೇಂದ್ರೀಯ ಸಂಸತ್ ಸಭೆಗಳಲ್ಲಿ ನಮಗೆ ಸಂಪೂರ್ಣ ಪ್ರಾತಿನಿಧ್ಯ ದೊರೆತರೆ, ಅಂತಹ ಭಯವೆಲ್ಲವೂ ಕಾಣೆಯಾಗುತ್ತವೆ ನಾನು ಈ ನಿಲುವಳಿಯನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ನಮ್ಮ ಹಿಂದುಳಿದ ಸಮುದಾಯ ಸಾವಿರಾರು ವರುಷಗಳಿಂದ ನಿರಾಕರಿಸಲ್ಪಡುತ್ತಿರುವ ಹಕ್ಕುಗಳನ್ನೂ ಎಲ್ಲ ಸದಸ್ಯರೂ ಮರುಸ್ಥಾಪನೆ ಮಾಡುವರೆಂದು ನಂಬುತ್ತೇನೆ. ಎಲ್ಲೆಲ್ಲಿ ಸ್ಥಾನಗಳ ಹಂಚಿಕೆಯ ಪ್ರಶ್ನೆ ಹುಟ್ಟಿತೋ, ಅಲ್ಲೆಲ್ಲ, ನಮಗೆ ಒಂದೆರಡು ಸ್ಥಾನಗಳನ್ನು ಮಾತ್ರ ನೀಡಲಾಯಿತು. ಇದು ಅನೇಕ ಪ್ರಾಂತ್ಯಗಳ ಸ್ಥಳೀಯ ಮಂಡಳಿಗಳಲ್ಲಿ ನಡೆಯುತ್ತಿದೆ. ಹಲವಾರು ಸಂದರ್ಭಗಳಲ್ಲಿ, ನಮಗೆ ಸಂಖ್ಯಾತ್ಮಕ ಪ್ರಾತಿನಿಧ್ಯಕ್ಕೆ ಅವಕಾಶ ಬೇಡಿದ್ದೆವು. ಆದರೆ ಕಾನೂನು ಹೇಗೆ ರಚನೆಯಾಗಿದೆ

ಎಂದರೆ, ಒಂದು ವೇಳೆ ಹರಿಜನ ಅಭ್ಯರ್ಥಿ ಚುನಾಯಿತರಾಗದಿದ್ದರೆ, ಬೇರೊಬ್ಬನನ್ನು ಆಯ್ಕೆ ಮಾಡಬೇಕು; ಅದಾಗದಿದ್ದರೆ, ಒಬ್ಬ ವ್ಯಕ್ತಿಯ ನಾಮನಿರ್ದೇಶನ ಮಾಡಬೇಕು.

ಕೆಲವೆಡೆ ಜನಸಂಖ್ಯೆಯ ಪ್ರತಿಶತ ೫೦ಕ್ಕಿಂತಲೂ ಹೆಚ್ಚು ಭಾಗ ಹರಿಜನರು ವಾಸಿಸುತ್ತಿದ್ದಾರೆ. ಅಲ್ಲಿ ಕೂಡ ಒಬ್ಬ ಹರಿಜನ ಪ್ರತಿನಿಧಿಯ ಆಯ್ಕೆಯಾಗಿದೆ. ಇಲ್ಲವೆ ನಾಮನಿರ್ದೇಶನವಾಗಿದೆ. ಜನತೆಯ ಕಣ್ಣಿಗೆ ನಾವು ಬಿದ್ದಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಆದುದರಿಂದ ಸಂದರ್ಭ ಒದಗಿ ಬಂದಾಗ, ಸಂಖ್ಯಾಧಾರದ ಮೇಲೆ ನಮಗೆ ಪ್ರಾತಿನಿಧ್ಯ ದಕ್ಕಿಸಿಕೊಡುವ ಪ್ರಯತ್ನ ನಡೆಯಬೇಕು. ಆಗಷ್ಟೆ ನೀವು ನಮ್ಮ ಯೋಗಕ್ಷೇಮ ನಿರ್ವಹಿಸುತ್ತಿದ್ದೀರಿ ಎಂಬ ಸಮಾಧಾನ ನಮಗೆ. ನೀವು ಕೇವಲ ಒಂದೆರಡು ಸ್ಥಾನಗಳಿಂದ ನಮ್ಮನ್ನು ತೃಪ್ತಿ ಪಡಿಸಲು ಪ್ರಯತ್ನಿಸಿದರೆ ಅದಾಗದು. ಹರಿಜನ ಸಮುದಾಯ ಈಗ ಎಚ್ಚೆತ್ತಿದೆ. ಅದು ತನ್ನ ಹಕ್ಕಿನ ಬಗ್ಗೆ ರಾಜಕೀಯ ಪ್ರಜ್ಞೆ ಪಡೆದಿದೆ. ಆ ಹಕ್ಕು ತಮ್ಮದಾಗಿಸಿಕೊಳ್ಳಲು ತನ್ನೆಲ್ಲ ಬಲವನ್ನು ವಿನಿಯೋಗಿಸುತ್ತದೆ. ಈ ಕೆಲವು ಮಾತುಗಳಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ. ನೀವು ನಮ್ಮ ಹಕ್ಕಿನ ಬಗ್ಗೆ ಉಚಿತ ಪ್ರಾಮುಖ್ಯ ನೀಡುತ್ತೀರೆಂದು ನಂಬಿದ್ದೇನೆ. ನಾವು ಇದುವರೆಗೂ ಇದ್ದ ಸ್ಥಿತಿಯಲ್ಲೆ ನಮ್ಮನ್ನು ಉಳಿಯಗೊಡಿಸುವುದಿಲ್ಲ ಎಂಬ ಭರವಸೆ ಹೊತ್ತು, ಈ ನಿಲುವಳಿಯನ್ನು ಬೆಂಬಲಿಸುತ್ತಿದ್ದೇನೆ.

**ಶ್ರೀ ಆರ್.ವಿ. ಧುಲೇಕರ್** : (ಸಂಯುಕ್ತ ಸಂಸ್ಥಾನಗಳು–ಸಾಮಾನ್ಯ) :

*ಮಾನ್ಯ ಅಧ್ಯಕ್ಷರೆ,

ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಿರುವ ನಿಲುವಳಿಯನ್ನು ಅನುಮೋದಿಸಲಾಗಿದೆ; ಅದರ ಬಗ್ಗೆ ಹಲವಾರು ಭಾಷಣಗಳು ಮಾಡಲ್ಪಟ್ಟಿವೆ. ನಿಲುವಳಿಯ ಖಂಡದ ಬಗ್ಗೆ ಹಲವಾರು ಆಕ್ಷೇಪಣೆಗಳನ್ನು ಎತ್ತಲಾಗಿದೆ. ಆ ಭಾಷಣಗಳು ಮತ್ತು ಆಕ್ಷೇಪಣೆಗಳನ್ನು ಪ್ರಸ್ತಾಪಿಸುತ್ತ ನಿರ್ಣಯದ ಪರವಾಗಿ ನನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತೇನೆ.

ಮಹಾತ್ಮ ಗಾಂಧಿಯವರು ಮಾನವದರ್ಶನವನ್ನು ಎರಡು ಪದಗಳಲ್ಲಿ ಸಂಕ್ಷಿಪ್ತವಾಗಿ ಹೀಗೆ ತಿಳಿಸಿದ್ದಾರೆ– ಸತ್ಯ ಮತ್ತು ಅಹಿಂಸೆ. ಸೂಕ್ತ ಕ್ರಮ ನಮ್ಮ ಹೊಣೆ. ಸತ್ಯ ಮತ್ತು ಅಹಿಂಸೆ ಅನ್ಯರನ್ನು ಘಾಸಿಗೊಳಿಸಲು ಅಲ್ಲ; ಇತರರನ್ನು ಅವರ ಸ್ವಾತಂತ್ರ್ಯದಿಂದ ವಂಚಿತಗೊಳಿಸುವುದಲ್ಲ; ಅವರ ಸ್ವಾಮ್ಯವನ್ನು ಕಸಿದುಕೊಳ್ಳುವುದಲ್ಲ. ಜೀವ ರಕ್ಷಣೆ ಅದರ ಉದ್ದೇಶ; ಮತ್ತು ಇತರರ ಸಾಮಾಜಿಕ ಹಕ್ಕುಗಳನ್ನು ರಕ್ಷಿಸುವುದು ಅದರ ಹೊಣೆಗಾರಿಕೆ. ಇವೆರಡೂ – ಎಂದರೆ ಸತ್ಯ ಮತ್ತು ಅಹಿಂಸೆ – ವೇದ ಮತ್ತು ಉಪನಿಷತ್ತುಗಳಿಂದ ಬೋಧಿಸಲ್ಪಟ್ಟವು. ಇವೆರಡೂ ಕಾಂಗ್ರೆಸ್ ಪಂಥವನ್ನು ರೂಪಿಸುತ್ತವೆ. ನಿಲುವಳಿ, ಭಾರತೀಯರ ಸಂವೇದನಗಳ, ಆಶೋತ್ತರಗಳ, ಸದಾಶಯಗಳ ಮತ್ತು ಧ್ಯೇಯೋದ್ದೇಶಗಳ ನೈಜ ಅಭಿವ್ಯಕ್ತಿ. ಪ್ರಸ್ತುತ ಬ್ರಿಟಿಷ್ ಆಧಿಪತ್ಯಕ್ಕೊಳಪಟ್ಟಿರುವ ನಮ್ಮ ದೇಶ ಏನು ಮಾಡಲು ಬಯಸುತ್ತದೆ ಎಂಬುದರ ಚಿತ್ರಣ; ಸ್ವಾತಂತ್ರ್ಯಾನಂತರ ಅದು ಹೇಗೆ ಈ ಜಗತ್ತಿನಲ್ಲಿರಬಯಸುತ್ತದೆಂಬುದರ ಚಿತ್ರಣ.

ನಿರ್ಣಯದ ಪ್ರಮುಖ ಖಂಡಗಳು ಹೀಗಿವೆ:*

"ಭಾರತ ಒಂದು ಸರ್ವತಂತ್ರ ಸ್ವತಂತ್ರ ಗಣರಾಜ್ಯವೆಂದು ಘೋಷಿಸಲು, ಮತ್ತು ಭವಿಷ್ಯದಲ್ಲಿ ಅದರ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಲು, ಈ ಸಂವಿಧಾನ ರಚನಾಸಭೆ ತನ್ನ ದೃಢ ಮತ್ತು ಶ್ರದ್ಧಾಪೂರ್ವಕ ಸಂಕಲ್ಪವನ್ನು ಘೋಷಿಸುತ್ತದೆ." ಅದರಲ್ಲಿ, ಬ್ರಿಟಿಷ್ ಇಂಡಿಯಾಕ್ಕೆ ಸೇರಿರುವ ರಾಜ್ಯಕ್ಷೇತ್ರಗಳು ಭಾರತೀಯ ರಾಜ್ಯಗಳಿಗೆ ಒಳಪಡುವ ರಾಜ್ಯಕ್ಷೇತ್ರಗಳು, ಬ್ರಿಟಿಷ್ ಇಂಡಿಯಾದ ಹೊರಗೆ ಹಿಂಭಾಗದಲ್ಲಿರುವ ಭಾರತದ ಇತರ ಭಾಗಗಳು, ರಾಜ್ಯಗಳು ಮತ್ತು ಅಂತಹ ರಾಜ್ಯಕ್ಷೇತ್ರಗಳು, ಯಾವೆಲ್ಲ ಸರ್ವತಂತ್ರ ಸ್ವತಂತ್ರ ಭಾರತದ ಹಂದರದೊಳಗೆ ಇರಬಯಸುತ್ತವೆಯೋ ಅವೆಲ್ಲವೂ ಕೂಡಿ, ಭಾರತದ ಒಕ್ಕೂಟವನ್ನು ರಚಿಸುತ್ತದೆ ಮತ್ತು

ಅದರಲ್ಲಿ, ಪ್ರಸ್ತುತ ರಾಜ್ಯಕ್ಷೇತ್ರಗಳು – ಈಗಿನ ಎಲ್ಲೆಗಳೊಡನೆ ಅಥವಾ ಸಂವಿಧಾನ ರಚನಾಸಭೆಯ ತೀರ್ಮಾನದಂತೆ ಅಥವಾ ತದನಂತರ ಸಂವಿಧಾನದ ಕಾನೂನಿನಂತೆ ತೀರ್ಮಾನಿಸಲ್ಪಟ್ಟ ಇತರ ಎಲ್ಲೆಗಳೊಡನೆ, ಸ್ವಾಯತ್ತ ಘಟಕಗಳ ಸ್ಥಾನವನ್ನು ಪಡೆದು ಉಳಿಸಿಕೊಳ್ಳುತ್ತವೆ; ಅದರೊಡನೆ ಉಳಿಕೆ ಅಧಿಕಾರಗಳು ಏನಿದ್ದರೂ ಅವುಗಳನ್ನು ಮತ್ತು ಒಕ್ಕೂಟಕ್ಕೆ ವಹಿಸಿದ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಅಥವಾ ಒಕ್ಕೂಟದಲ್ಲಿ ಅಂತರ್ಗತವಾಗಿರುವ ಅಥವಾ ಸೂಚ್ಯವಾಗಿರುವ ಅಥವಾ ತತ್ಪರಿಣಾಮವಾಗಿ ಲಭ್ಯವಾಗಿರುವ ಅಧಿಕಾರಗಳನ್ನು ಪ್ರಕಾರ್ಯಗಳನ್ನು ಹೊರತು ಪಡಿಸಿ ಸರ್ಕಾರದ ಮತ್ತು ಆಡಳಿತದ ಎಲ್ಲ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಕಾರ್ಯರೂಪಕ್ಕೆ ತರುತ್ತವೆ. ಮತ್ತು

ಅದರಲ್ಲಿ, ಸರ್ವತಂತ್ರ ಸ್ವತಂತ್ರ ಭಾರತ, ಅದರ ಘಟಕಗಳು ಮತ್ತು ಸರ್ಕಾರದ ಅಂಗಗಳು, ಇವೆಲ್ಲದರ ಅಧಿಕಾರ ಮತ್ತು ವಿಧಾಯಕ ಶಕ್ತಿ ಜನತೆಯಿಂದ ಪ್ರಾಪ್ತವಾದವು ಮತ್ತು,

ಅದರಲ್ಲಿ, ಕಾನೂನಿನ ಸಮ್ಮುಖದಲ್ಲಿ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳ ಸಮಾನತೆ, ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಬದ್ಧವಾಗಿ ಆಲೋಚನಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಮತಾವಲಂಬನ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಪೂಜಾ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಕ್ರಿಯಾ ಸ್ವಾತಂತ್ರ್ಯದ ಖಾತರಿಯನ್ನು ಭಾರತದ ಜನತೆಗೆ ನೀಡಿ, ಅವುಗಳನ್ನೆಲ್ಲ ಅವರಿಗೆ ಒದಗಿಸಿ ಕೊಡಲಾಗುತ್ತೆ.

ಅದರಿಂದ, ಗಣರಾಜ್ಯದ, ರಾಜ್ಯಕ್ಷೇತ್ರದ ಘನತೆಯನ್ನು ಮತ್ತು ಭೂಮಿ ಸಮುದ್ರ ಮತ್ತು ವಾಯು ಪ್ರದೇಶದ ಮೇಲೆ ನ್ಯಾಯಬದ್ಧವಾಗಿ ಮತ್ತು ನಾಗರಿಕ ರಾಷ್ಟ್ರಗಳ ಕಾನೂನಿನನ್ವಯ ಅದರ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳಲಾಗುವುದು. ಮತ್ತು,

ಜಗತ್ತಿನಲ್ಲಿ, ಈ ಪ್ರಾಚೀನ ರಾಷ್ಟ್ರ ತನ್ನ ಹಕ್ಕುಬದ್ಧ ಮತ್ತು ಗೌರವಾನ್ವಿತ ಸ್ಥಾನವನ್ನು ಪಡೆದು ತನ್ನೆಲ್ಲ ಕೊಡುಗೆಯನ್ನು ವಿಶ್ವಶಾಂತಿ ಸಂವರ್ಧನೆಗೆ ಮತ್ತು ಮನುಕುಲದ ಕಲ್ಯಾಣಕ್ಕೆ ಹೃತ್ಪೂರ್ವಕ ಕೊಡುಗೆ ನೀಡುವುದು.

**ಮಿ. ದೇಶಬಂಧು ಗುಪ್ತ** (ದೆಹಲಿ) : ಮಾನ್ಯರೆ, ಕ್ರಮ ವಿಚಾರದಲ್ಲಿ, ಹಸ್ತಪ್ರತಿಯಿಂದ ಆರಿಸಿ ವಾಚಿಸುವ ಸ್ವಾತಂತ್ರ್ಯ ಗೌರವಾನ್ವಿತ ಸದಸ್ಯರಿಗೆ ಉಂಟೆ?

**ಸನ್ಮಾನ್ಯ ಅಧ್ಯಕ್ಷರು** : ನಾನವರು ಓದುತ್ತಿದ್ದಾರೆಂದುಕೊಂಡಿಲ್ಲ. ಅವರ ಬಳಿ ಹೇರಳವಾದ ಟಿಪ್ಪಣಿ ಇದೆ. (ನಗೆ)

**ಮಿ। ಆರ್.ವಿ. ಧುಲೇಕರ್** : *[ನಾನು ವಾಚಿಸುವ ಧಾಟಿಯಲ್ಲೆ ಮಾತನಾಡಬಲ್ಲೆ. ಸನ್ಮಾನ್ಯ ಅಧ್ಯಕ್ಷರೆ, ಯಾವೊಬ್ಬ ವಿವೇಕಿಯೂ ನಿರ್ಣಯದ ಯಾವುದೇ ಖಂಡಕ್ಕೆ ಯಾವುದೇ ಆಕ್ಷೇಪಣೆಯನ್ನು ಎತ್ತಲಾರ. ನಿರ್ಣಯ, ಇಡೀ ಭಾರತದ ಜನತೆಯ ಹಕ್ಕಿಗೆ ಖಾತರಿ ನೀಡುತ್ತದೆ; ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಒದಗಿಸುತ್ತದೆ, ಹಿಂದುಳಿದ ಮತ್ತು ತುಳಿತಕ್ಕೆ ಸಿಕ್ಕ ವರ್ಗಗಳಿಗೆ ಒದಗಿರುವ ಅನ್ಯಾಯಕ್ಕೆ ಪರಿಹಾರವೊದಗಿಸುವ ಭರವಸೆ ನೀಡುತ್ತದೆ; ಅವರ ಅಭಿವೃದ್ಧಿಗೆ ಸಂಪೂರ್ಣ ಅವಕಾಶ ಒದಗಿಸುವ ಆಶ್ವಾಸನೆ ನೀಡುತ್ತದೆ.

ಭಾರತದ ರಾಜ್ಯಗಳ ಮಟ್ಟಿಗೆ, ಅವುಗಳ ಆಂತರಿಕ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನಿಲುವಳಿ ನೀಡುತ್ತದೆ. ಅವುಗಳ ನ್ಯಾಯಸಮ್ಮತವಾದ, ಕಾನೂನುಬದ್ಧವಾದ ಹಕ್ಕುಗಳನ್ನು ರಕ್ಷಿಸುವ ಭರವಸೆ ನೀಡುತ್ತದೆ. ನಿಜ; ಅವರ ಈಗಿನ ಅನ್ಯಾಯ ಹಾಗೂ ನಿರಂಕುಶ ಪ್ರಭುತ್ವ, ಇನ್ನು ಮುಂದುವರೆಯಲು ಬಿಡುವುದಿಲ್ಲ. ನಿರಂಕುಶ ಪ್ರಭುತ್ವ ಮತ್ತು ಪ್ರಜಾಪ್ರಭುತ್ವ ಪರಸ್ಪರ ವ್ಯತಿರಿಕ್ತವಾದವು. ಅವೆರಡೂ ಒಂದಾಗುವುದಿಲ್ಲ. ಯಾರೇ ಒಬ್ಬ ಅರಸ ಜನತೆಯ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕಲಾರ. ಅಂತಹ ಬೇಜವಾಬ್ದಾರಿ ಸರ್ಕಾರ ಆಡಳಿತ ನಡೆಸಲು ಜನತೆ ಬಿಡುವುದಿಲ್ಲ. ಅಥವಾ ಆಳುವ ಅರಸರ ಅನ್ಯಾಯಕ್ಕೆ ಈ ಸಭೆ ಸೊಪ್ಪು ಹಾಕುವುದಿಲ್ಲ. ಈ ನಿಲುವಳಿಯ ಅಗತ್ಯವನ್ನು ಪ್ರಶ್ನಿಸಿ ಒಂದು ಆಕ್ಷೇಪಣೆ ಎತ್ತಲಾಗಿದೆ. ಅಂತಹ ಅಗತ್ಯವಿದ್ದರೆ,

ರಾಜ್ಯದ ಪ್ರತಿನಿಧಿಗಳು ಭಾಗವಹಿಸುವವರೆಗೆ, ನಿಲುವಳಿಯನ್ನು ಪ್ರಸ್ತಾವಿಸಬಾರದೆಂಬ ಒಂದು ಸಲಹೆ ಮಾಡಬಾರದು. ರಾಜ್ಯದ ಪ್ರತಿನಿಧಿಗಳಿಗೆ ನಿಲುವಳಿಯನ್ನು ಪರಿಶೀಲಿಸಲು ಕಾಲಾವಕಾಶ ಸಿಕ್ಕಿಲ್ಲವೆಂದು ಹೇಳಲಾಗಿದೆ. ರಾಜ್ಯದ ಪ್ರತಿನಿಧಿಗಳ ಗೈರುಹಾಜರಾತಿಯ ಬಗ್ಗೆ ಎತ್ತಿದ ಆಕ್ಷೇಪಣೆ ನಿರಾಧಾರ. ಬ್ರಿಟಿಷ್ ಸಚಿವ ಸಂಪುಟದ ಹೇಳಿಕೆಯ ೧೯(೨) ಖಂಡದ ಅನುಸಾರವಾಗಿ, ಪ್ರಾರಂಭಿಕ ಹಂತದಲ್ಲಿ, ರಾಜ್ಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸುವಂತಿಲ್ಲ. ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು, ಸಮಾಲೋಚಿಸಲು ಸಭೆಯು ರಾಜ್ಯಗಳಿಂದ ರಚಿತವಾದ ಸಂಧಾನ ಸಮಿತಿಯೊಡನೆ ಸಮಾಲೋಚಿಸುತ್ತದೆ. ನಾವು, ರಾಜ್ಯಗಳಿಗೆ ನಮ್ಮ ನಿರ್ಣಯದ ಧ್ಯೇಯೋದ್ದೇಶಗಳನ್ನು ವಿಶದಪಡಿಸದೆ ಹೋದರೆ, ಅದು ಅವಿವೇಕ. ಅಂತೆಯೇ ಭಾರತದ ಜನತೆಗೆ, ಇಡೀ ಪ್ರಪಂಚದ ಜನರಿಗೆ ತಿಳಿಸದೆ ಹೋದಲ್ಲಿ ಅದು ಬುದ್ಧಿವಂತಿಕೆಯಲ್ಲ. ನಾವೀಗ ಅದನ್ನು ಮಾಡದೆ ಹೋದಲ್ಲಿ ಹಲವಾರು ಆಲೋಚನೆಗಳು ಹುಸಿ ಭೀತಿ, ಕೆಟ್ಟ ಹುಟ್ಟಿಕೊಳ್ಳುತ್ತವೆ. ನಿರ್ಣಯ ನಮ್ಮ ಮೂಲತತ್ತ್ವಗಳನ್ನು ಜಗತ್ತಿಗೆ ತಿಳಿಸುತ್ತದೆ. ಪ್ರತಿಯೊಬ್ಬನೂ ನಿರ್ಣಯವನ್ನು ತೂಗಿ ನೋಡಿ, ನಮಗೆ ಸಹಕಾರ ನೀಡಲಿ.

ಮುಸ್ಲಿಮ್‌ಲೀಗ್ ಸದಸ್ಯರ ಗೈರುಹಾಜರಿ ಮತ್ತೊಂದು ಆಕ್ಷೇಪಣೆ ತಲೆಯೆತ್ತಿದೆ. ಆದುದರಿಂದ ಈ ನಿಲುವಳಿಯನ್ನು ಈಗ ಪ್ರಸ್ತಾವಿಸಬಾರದು. ಮೊದಲಿಗೆ ಈ ನಿಲುವಳಿ ನಿರಾಧಾರ. ಮುಸ್ಲಿಮ್‌ಲೀಗ್ ಪಕ್ಷ, ಸಂವಿಧಾನ ರಚನಾಸಭೆಯ ಚುನಾವಣೆಯಲ್ಲಿ ಭಾಗವಹಿಸಿದೆ. ಸಚಿವ ಸಂಪುಟದ ನಿಯೋಗದ ಯೋಜನೆಯಿಂದ ಪ್ರೇರಿತರಾಗಿ, ತನ್ನ ಸದಸ್ಯರನ್ನು ಈಗಾಗಲೆ ಚುನಾಯಿಸಿದೆ. ಈಗ ಮುಸ್ಲಿಮ್‌ಲೀಗ್ ಸದಸ್ಯರು, ಸಭೆಯಲ್ಲಿ ಭಾಗವಹಿಸದೆ ಇರುವುದು ಸರಿಯಲ್ಲ. ಸಂಖ್ಯಾಧಾರಿತ ಪ್ರಾತಿನಿಧ್ಯ ಮತ್ತು ಪ್ರತ್ಯೇಕ ಮತದಾರರ ಬೇಡಿಕೆಗೆ ಒಪ್ಪಿಗೆ ನೀಡಲಾಗಿದೆ. ಸಭೆಗೆ ಗೈರುಹಾಜರಾದರೆ ಅದರ ಹೊಣೆಯನ್ನು ಅವರೇ ವಹಿಸಬೇಕಾಗುತ್ತದೆ. ಸದಸ್ಯರು ಹಾಜರಿರಲೇಬೇಕೆಂದು ಒತ್ತಾಯಿಸಲು ಸದನಕ್ಕೆ ಅಧಿಕಾರವಿಲ್ಲ. ಒಬ್ಬ ವ್ಯಕ್ತಿಯ ಹಿತವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಸಂವಿಧಾನದ ರಚನೆಯಾಗುವ ಸಂದರ್ಭದಲ್ಲಿ ಆತನ ಗೈರುಹಾಜರಿಯಿಂದ ತನ್ನ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಆ ಕಾರಣ, ಉಳಿದಂತೆ ಹಾಜರಿರುವ ವ್ಯಕ್ತಿಗಳನ್ನು ದೂಷಿಸಿ ಫಲವಿಲ್ಲ.

ಎರಡನೆಯದಾಗಿ, ೧೯೪೬ರ ಡಿಸೆಂಬರ್ ೧೬ರಂದು ಎಚ್.ಎಂ.ಜಿ.ಯವರು ನೀಡಿದ ಹೇಳಿಕೆಯ ನಂತರ, ನಿಲುವಳಿಗೆ ಏನೊಂದೂ ಆಕ್ಷೇಪಣೆ ಇರಲಾರದು. ಕಾಂಗ್ರೆಸ್, ಒಂದು ನಿಲುವಳಿಯನ್ನು ಜಾರಿ ಮಾಡಿ, ಆ ಹೇಳಿಕೆಯನ್ನು ಅನುಮೋದಿಸಿತು. ಸಂವಿಧಾನ ರಚನಾಸಭೆಗೆ, ತನ್ನ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಮುಸ್ಲಿಮ್‌ಲೀಗ್ ಪಕ್ಷಕ್ಕೆ ಒಂದು ಅವಕಾಶ ಕೊಟ್ಟಿತು. ನಿಲುವಳಿಯೊಡನೆ ಸಂವಿಧಾನ ರಚನಾಸಭೆಯ ಪ್ರಾರಂಭಿಕ ಅಧಿವೇಶನ ಒಂದು ತಿಂಗಳು ಮುಂದೂಡಲ್ಪಟ್ಟಿದೆ. ಕ್ಷಮಿಸಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನೊಡನೆ ಮುಸ್ಲಿಮ್‌ಲೀಗ್ ಪಕ್ಷ ಸ್ನೇಹಹಸ್ತಕ್ಕೆ ಕೈಚಾಚಲಿಲ್ಲ. ಸದ್ಭಾವನೆಗೆ ಒಡಂಬಡಿಸಲಿಲ್ಲ. ಮುಸ್ಲಿಮ್‌ಲೀಗ್ ಸಹಕಾರ ನೀಡಿ, ಮುಂದೆ ಅಂತಿಮ ನಿರ್ಧಾರಕ್ಕೆ ಬರಲು, ಸಮಯ ಸಾಕಾಗಲಿಲ್ಲವೆಂದು ತೋರುತ್ತೆ. ಲೀಗ್‌ನ ಪ್ರತಿನಿಧಿಗಳು ಕೂಡಲೆ ಸದನದಲ್ಲಿ ತಮ್ಮ ಯುಕ್ತ ಸ್ಥಾನವನ್ನು ಪಡೆದು, ಭಾರತವನ್ನು ಸರ್ವತಂತ್ರ ಸ್ವತಂತ್ರ ಗಣರಾಜ್ಯವನ್ನಾಗಿ ಮಾಡಲು ನೆರವಾಗುತ್ತಾರೆಂದು ನಾನು ಈಗಲೂ ನಂಬುತ್ತೇನೆ.

ನಾವು ಒಡೆದು ಇಬ್ಭಾಗವಾಗಿರುವುದಾಗಿಯೂ, ಎಂದು ಒಂದಾಗಲಾರೆವೆಂದೂ ಟೀಕಿಸಿ ನಮ್ಮ ಮೇಲೆ ಕಳಂಕ ಹೊರಿಸಲು ನಮ್ಮ ವಿರೋಧಿಗಳಿಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಈ ಕಳಂಕವನ್ನು ತೊಡೆದುಹಾಕಲು ಇನ್ನೂ ಸಮಯಾವಕಾಶವಿದೆ. ಈ ವಿಷಯದ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ನಮ್ಮ ಮುಸ್ಲಿಮ್ ಲೀಗ್ ಸಹೋದರರಿಗೆ ವಿನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

ಈ ಸಭೆಯ ಬಗ್ಗೆ, ಗಣ್ಯ ರಾಜನೈತಿಕ ನಿಪುಣರಾದ ಲಾರ್ಡ್ ಸೈಮನ್ ಮತ್ತು ಮಿ। ಚರ್ಚಿಲ್ ಅವರು ಕೆಲವು ಅಸಮರ್ಥನೀಯ ಆಪಾದನೆಗಳನ್ನು ಹೊರಿಸಿದ್ದಾರೆ. ಮುಸ್ಲಿಮ್ ಲೀಗ್ ಪ್ರತಿನಿಧಿಯ ಅನುಪಸ್ಥಿತಿಯಿಂದ,

ಈ ಸಭೆ ತುಂಡಾಗಿದೆ; ಅದರ ನಿರ್ಧಾರಗಳಿಗೆ ತೂಕವಿಲ್ಲ. ಬ್ರಿಟಿಷ್ ಸರ್ಕಾರ, ಸಭೆಯಿಂದ ರಚಿಸಲ್ಪಟ್ಟ ಸಂವಿಧಾನವನ್ನು ಅಂಗೀಕರಿಸಲೂಬಾರದು, ಅಳವಡಿಸಲೂಬಾರದೆಂದು ಆಗ್ರಹ ಪಡಿಸುತ್ತಾರೆ. ಎಂಥ ನಿರಾಧಾರವಾದ, ಹೀನಾಯವಾದ ಆರೋಪ! ಅದು ತೀರಾ ಕೆಳಮಟ್ಟದ ಸಂಸ್ಕೃತಿ ಮತ್ತು ನಾಗರಿಕತೆ; ವಿವೇಕದ ಮತ್ತು ರಾಜನೀತಿ ನೈಪುಣ್ಯದ ಎಲ್ಲ ಮಾನದಂಡಗಳಿಗೂ ವ್ಯತಿರಿಕ್ತವಾದುದು. ವಿವೇಕ ಮತ್ತು ಅಧಿಕಾರದ, ಶ್ರಮ ವಿನಿಯೋಗದಿಂದ ಗಳಿಸಿದ ಬೃಹತ್ ಸಾಮ್ರಾಜ್ಯಗಳನ್ನು, ಇಂತಹ ರಾಜಕೀಯಗಳು ಅವಿವೇಕಿ, ಕಳೆದುಕೊಂಡು ಸರ್ವನಾಶ ಮಾಡಿದರು. "ಸಾರಿಸಮ್" (Tsarism)ನ ಅಧಃಪತನ ನಮ್ಮ ಕಣ್ಣೆದುರಿಗೇ ಕಂಡಿದ್ದೇವೆ. ಹಿಟ್ಲರ್, ಮುಸೋಲಿನಿ ಮತ್ತು ಮಿಕಾಡೋ ಅವರ ಅವನತಿಯನ್ನು ಕಂಡಿದ್ದೇವೆ. ಜನಾಂದೋಲನದ ಆಕ್ರಮಣಕ್ಕೆ ಸಿಕ್ಕು ಬ್ರಿಟಿಷ್ ಸಾಮ್ರಾಜ್ಯಶಾಹಿ ನೌಕೆ ಮುಳುಗುತ್ತಿದೆ. ಬ್ರಿಟಿಷ್ ಸಾಮ್ರಾಜ್ಯ ವಿನಾಶದಿಂದ ತಪ್ಪಿಸಿಕೊಳ್ಳಲಾಗದು. ಜರ್ಮನಿ, ಇಟಲಿ ಮತ್ತು ಜಪಾನ್ ರಾಷ್ಟ್ರಗಳ ಇತಿಹಾಸದಿಂದ ಪಾಠ ಕಲಿತು ಇಂಗ್ಲೆಂಡ್‌ನ ರಾಜಕೀಯ ಚುಕ್ಕಾಣಿ ಹಿಡಿದ ಪ್ರಧಾನಿ ಅಟ್ಲಿ ಅವರು ತಮ್ಮ ದೇಶವನ್ನು ಜನತೆಯನ್ನೂ ಕಾಪಾಡಿದರೆ, ಸುದೈವ ಎಂದುಕೊಳ್ಳಬಹುದು. ಯುಕ್ತ ಹಿತನುಡಿ ನುಡಿಯುವುದು ನನ್ನ ಕರ್ತವ್ಯ. ಕೇಳುವುದು ಬಿಡುವುದು ಅವರಿಗೆ ಸೇರಿದ್ದು.

ಸತ್ಯದ ಮೂರ್ತರೂಪನಾದ ಯುಧಿಷ್ಠಿರ ತನ್ನ ಜೀವನದಲ್ಲಿ ಒಮ್ಮೆ ಅರ್ಧ ಸತ್ಯವನ್ನು ನುಡಿದ – "ನರೋ ವಾ ಕುಂಜರೋ ವಾ". ಆ ಒಂದು ಕ್ಷುಲ್ಲಕ ಅಸತ್ಯ ನುಡಿಗಾಗಿ ಪ್ರಸಿದ್ಧ ಮಹಾಕಾವ್ಯ ಮಹಾಭಾರತದ ಕರ್ತೃ ವ್ಯಾಸರು ನಿರ್ದಯೆಯಿಂದ, ಕ್ರೂರ ರೀತಿಯಲ್ಲಿ ಆತನಿಗೆ ಸರಪಳಿ ಬಿಗಿದು ನರಕಕ್ಕೆ ಎಳೆದೊಯ್ದು ನರಳುವಂತೆ ಮಾಡಿದರು.

ಭಾರತದ ೪೦೦ ದಶಲಕ್ಷ ಜನಸ್ತೋಮಕ್ಕೆ ನ್ಯಾಯವೊದಗಿಸಲು ಮಹಾ ಬ್ರಿಟನ್ ಸಾಮ್ರಾಜ್ಯಕ್ಕೆ ಇದೊಂದು ಅವಕಾಶ ದೊರೆತಿದೆ. ಕಳೆದುಕೊಳ್ಳುವ ಯಾ ಗೆಳೆತನ ಗಳಿಸುವ ಆಯ್ಕೆ ಬ್ರಿಟಿಷರಿಗೆ ಸೇರಿದ್ದು. ಆಟ ಮುಗಿದ ಮೇಲೆ ಪಶ್ಚಾತ್ತಾಪ ಪಟ್ಟು ಫಲವಿಲ್ಲ.

ನಾನು ಅಲ್ಪಸಂಖ್ಯಾತರನ್ನು ತಳಸಮುದಾಯವರನ್ನೂ ಉದ್ದೇಶಿಸಿ ಮಾತನಾಡಲು ಬಯಸುತ್ತೇನೆ. ಅವರ ಹಿತಸಂರಕ್ಷಣೆಯನ್ನು ಒಳಗೊಂಡ ಖಂಡಗಳ ಬಗ್ಗೆ ಎರಡು ಮಾತು. ಅನ್ಯಾಯದ ಭೀತಿ ಇದ್ದಾಗ ರಕ್ಷಣೆಯ ಪ್ರಶ್ನೆ ಏಳುತ್ತದೆ. ಅಂತಹ ಭೀತಿಗೆ ಎಡೆಯಿಲ್ಲದಿರುವಾಗ, ಯಾರಿಗೂ ಅದರ ರಕ್ಷಣೆ ಬೇಕಿಲ್ಲ. ಭಾರತೀಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಲ್ಲಿ ಮೂರ್ಖತನದಿಂದಲೋ ಇಲ್ಲವೆ ಸ್ವಾರ್ಥದಿಂದಲೋ ಕೆಲವು ಅನಾನುಕೂಲಗಳು ತಾರತಮ್ಯಗಳು ನಮ್ಮ ಸಮಾಜದಿಂದಲೆ ಸಂಭವಿಸಿರುವುದನ್ನು ಕಾಣಬಹುದು. ಉದಾಹರಣೆಗೆ ಅಸ್ಪೃಶ್ಯತೆ, ಸಮಾಜದ ಬಹುಅಂಶವಾಗುವ ಒಂದು ಸಮುದಾಯವನ್ನು ಅಸ್ಪೃಶ್ಯರನ್ನಾಗಿಸಿ, ಮಾನವೀಯ ಹಕ್ಕುಗಳಿಂದ ಅವರನ್ನು ವಂಚಿಸುವುದು ಅಕ್ಷಮ್ಯ ಅಪರಾಧ. ಇದಕ್ಕಿರುವ ಒಂದೇ ಪ್ರಾಯಶ್ಚಿತ್ತವೆಂದರೆ, ಅವರ ಹಕ್ಕುಗಳನ್ನು ಮಾನ್ಯ ಮಾಡಿ, ಅದನ್ನು ಅವರಿಗೆ ಕೊಡಮಾಡುವುದು. ನಾವು ಹಾಗೆ ಮಾಡಲು ಟೊಂಕ ಕಟ್ಟಿದ್ದೇವೆ. ಆದರೆ, ನಿಮ್ಮ ಗಮನ ಸೆಳೆಯಲು ನಾನು ಪ್ರಸ್ತಾವಿಸುತ್ತಿರುವ ಅಂಶವಿಷ್ಟೆ. ಸಾಮಾಜಿಕ ಅಡೆತಡೆಗಳನ್ನು ನಿರ್ಮಿಸಿ, ವಿಭಜನೆ ತಂದೊಡ್ಡಿದ ನಮ್ಮ ದೇಶ ಅಥವಾ ಸಮುದಾಯ, ಇಬ್ಬರೂ ಅಪರಾಧಿಗಳೇನೋ ನಿಜ. ನಮ್ಮ ಮೇಲೆ ಸಾಮ್ರಾಜ್ಯಶಾಹಿ ಹಿಡಿತ ಸಾಧಿಸಿ, ನಮ್ಮ ನಮ್ಮಲ್ಲಿ ವೈಮನಸ್ಯ, ದ್ವೇಷ ಹುಟ್ಟಿಸುವುದರ ಮೂಲಕ, ತಾವು ತಳವೂರಲು ಬ್ರಿಟಿಷರು, ಈ ತಾರತಮ್ಯವನ್ನು ಉಕ್ಕೇರಿಸಿದರು. ಅವರೇ ಸೃಷ್ಟಿಸಿದ ಸಂಕೀರ್ಣ ಸಮಸ್ಯೆಯನ್ನು ಬಗೆಹರಿಸಲು ಅವರು ಯತ್ನಿಸಲೇ ಇಲ್ಲ. ಅವರ ಇಬ್ಬಗೆಯ ನೀತಿಯಿಂದ ಬ್ರಾಹ್ಮಣ, ಬ್ರಾಹ್ಮಣೇತರ, ಸ್ಪೃಶ್ಯರು, ಅಸ್ಪೃಶ್ಯರು, ಹಿಂದೂ ಮುಸ್ಲಿಮ್ ಸಿಖ್ಖರು – ಮುಸ್ಲಿಮರು, ಸ್ತ್ರೀ ಪುರುಷರಲ್ಲಿ ಭೇದ ಉಂಟುಮಾಡಿದರು. ಸಹೋದರ ಸಹೋದರಿಯರಲ್ಲಿ ತಾರತಮ್ಯ ಸೃಷ್ಟಿಸಿದರು. ಅವರ ಅಪರಾಧದ ಹೊರೆ ನಾವು ಹೊರಬೇಕೆ? ಅದು ಹೌದಾದರೆ ನಾನು ಏಕಾಂಗಿಯಾಗಿ ಎಲ್ಲ

ಜವಾಬ್ದಾರಿಯನ್ನು ಹೊರಲು ಸಿದ್ಧನಿದ್ದೇನೆ. ರಕ್ಷಣೆಯನ್ನು ಒಂದೆಡೆ ಮುಂದುವರೆಸುತ್ತ, ವಿಭಜನೆಯನ್ನು ನಿರಂತರಗೊಳಿಸುವುದು ಯುಕ್ತ ಕ್ರಮವಲ್ಲ. ನಾನು ತಮಗೆ ಮೊಳೆ ಹೊಡೆದಂತೆ ನಿರ್ದಾಕ್ಷಿಣ್ಯವಾಗಿ ಹೇಳಬಯಸುವುದಿಷ್ಟೆ – "ದಯವಿಟ್ಟು ಎಚ್ಚೆತ್ತುಕೊಳ್ಳಿ". ರಕ್ಷಣೆಯ ಕವಚದೊಳಗೆ ಇಂಗ್ಲಿಷರು ಹುನ್ನಾರ ಹೂಡಿದರು. ಅದರ ನೆರವಿನಿಂದ ನಿಮ್ಮನ್ನು ದೀರ್ಘಕಾಲ ಮಂಪರಿನಲ್ಲಿಟ್ಟರು. ಅದನ್ನು ಈಗ ಬಿಡಿ. ನೀವು ನಿಮ್ಮ ಸಂವಿಧಾನವನ್ನು ರಚಿಸಿ, ಈ ಏರುಪೇರುಗಳನ್ನು ನಿವಾರಿಸುವುದು ಯಾವಾಗ? ಈಗ ನಿಮ್ಮನ್ನು ದಿಕ್ಕು ತಪ್ಪಿಸುವವರು ಯಾರೂ ಇಲ್ಲ. ರಕ್ಷಣಾ ಕ್ರಮಗಳು, ಈಗಿರುವ ಅಸಮಾನತೆಯನ್ನು ನೀಗಿಸಲಾರವು. ವಿಭಜನೆಗಳನ್ನು ತೊಡೆದುಹಾಕಲಾರವು. ಹಳ್ಳಕೊಳ್ಳಗಳ ನಡುವೆ ರಸ್ತೆ ನಿರ್ಮಾಣ ಮಾಡಲಾರಿರಿ. ನಾವು ಒಗ್ಗೂಡಿ ಈ ತಾರತಮ್ಯವನ್ನು ಎದೆಗುಂದದೆ ನಿವಾರಿಸೋಣ. ಎಲ್ಲರೂ ಸಮಾನ ಹಕ್ಕುಗಳನ್ನು ಅನುಭವಿಸುವಂತಾಗಲಿ. ವ್ಯಾಪಕ ಪ್ರಾತಿನಿಧ್ಯ ರಕ್ಷಣೆಗೆ ಖಾತರಿ ನೀಡಲಾರದೆಂಬುದನ್ನು ನೆನಪಿಡಿ. ಬದಲಿಗೆ ಪ್ರಾತಿನಿಧ್ಯಕ್ಕಾಗಿ ಕಚ್ಚಾಡುವುದರಿಂದ ಸಂಘರ್ಷಕ್ಕೆ ಎಡೆ ಕೊಟ್ಟಂತಾಗುತ್ತದೆ.

೧೯೧೬ರಲ್ಲಿ, ಮುಸ್ಲಿಮರಲ್ಲಿ ಪ್ರತ್ಯೇಕ ಮತದಾರರನ್ನು ಹುಟ್ಟುಹಾಕಿ, ಸ್ಥಾನ ಮೀಸಲಿಡುವ ಬೇಡಿಕೆಗೆ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮ್ಮತಿಸಿತು. ಮೂವತ್ತು ವರುಷಗಳೊಳಗೆ, ಈ ವಿಷಪೂರಿತ ವ್ಯವಸ್ಥೆ, ನಾಗರಿಕ ಸಮರದ ಅಂಚಿಗೆ ಎಳೆತಂದಿದೆ. ವಿಭಜನೆಗೆ ಹೋರಾಟ ನಡೆದು, ಎರಡು ಸಹೋದರ ಸಮುದಾಯಗಳು ಪರಸ್ಪರ ರಕ್ತಪಿಪಾಸುಗಳಾಗಿದ್ದಾರೆ. ಇದು ೧೯೦೬ರಲ್ಲಿ ಲಾರ್ಡ್ ಮಿಂಟೋ ಹೂಡಿದ ಸಂಚು; ಈಗದು ಫಲಪ್ರದವಾಗಿದೆ.

ಸಂವಿಧಾನ ಸಭೆ ಸರ್ವತಂತ್ರ ಸ್ವತಂತ್ರ ಮಂಡಳಿಯಲ್ಲ ಎಂದು ಕೆಲವರ ಅಭಿಮತ. ಅದು ಬ್ರಿಟಿಷರ ಸೃಷ್ಟಿ. ಅದರ ಅಸ್ತಿತ್ವವೇ ಅರ್ಥಹೀನ. ಅದು ರಚಿಸುವ ಸಂವಿಧಾನಕ್ಕೆ ಅರ್ಥವಿಲ್ಲ. ಅವರು ಬುದ್ಧಿಹೀನರು ಎನ್ನುವ ಉದ್ಧಟತನ ನನಗಿಲ್ಲ. ಆದರೆ ಅವರಿಗೆ ಭಾರತೀಯ ಇತಿಹಾಸದ ತಿಳುವಳಿಕೆ ಸಾಲದು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಷಯ ನಾನು ಹೆಚ್ಚೇನೂ ಹೇಳಲಾರೆ. ಕೆಲವು ಕಾರಣಗಳಿಂದಾಗಿ, ಒಂದು ಸಾವಿರ ವರುಷಗಳ ಹಿಂದೆ, ಭಾರತ ವಿಕೇಂದ್ರೀಕರಣಕ್ಕೆ ಒಳಪಟ್ಟಿತು. ವಿಭಜನೆ ಹೊಂದಿತು. ಅವರ ಮೇಲೆ ಆಕ್ರಮಣ ನಡೆಸಿದ ವಿದೇಶಿ ಆಕ್ರಮಣಕಾರರನ್ನು ತಡೆಯುವಲ್ಲಿ ವಿಫಲಗೊಂಡಿತು. ಅಂದಿನಿಂದ ಸ್ವಾತಂತ್ರ್ಯ ಪ್ರಜ್ಞೆಯ ಕಿಚ್ಚು ಭಾರತೀಯರ ಎದೆಯಲ್ಲಿ ಹೊತ್ತಿ ಉರಿಯುತ್ತಲೆ ಇದೆ. ಅದು ಆರಲೆ ಇಲ್ಲ. ಒಂದೆಡೆ, ಆ ಜ್ವಾಲೆ ಋಷಿಗಳ ರೂಪ ತಾಳಿತು. ಸ್ವಾಮಿ ರಾಮದಾಸ್, ಗೋಸ್ವಾಮಿ, ತುಳಸೀದಾಸ್, ಗುರುನಾನಕ್, ಸ್ವಾಮಿ ದಯಾನಂದ್, ರಾಮಕೃಷ್ಣ ಪರಮಹಂಸ, ವಿವೇಕಾನಂದ ಮತ್ತು ರಾಮತೀರ್ಥರು. ಈ ಸ್ವಾತಂತ್ರ್ಯ ಪ್ರಜ್ಞೆಯ ದ್ಯೋತಕ. ಒಂದೆಡೆ ಶಿವಾಜಿ, ಗುರುಗೋವಿಂದ ಸಿಂಗ್, ರಾಣಾಪ್ರತಾಪ್, ಝಾನ್ಸಿರಾಣಿ ಲಕ್ಷ್ಮೀಬಾಯಿ, ರಾಜಾ ರಾಮ ಮೋಹನ್ ರಾಯ್, ಲೋಕಮಾನ್ಯ ತಿಲಕರು, ಮೋತಿಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸ್ ಇವರೆಲ್ಲ ರಾಜಕೀಯ ಜ್ವಲಂತ ನಿದರ್ಶನಗಳು; ಮಹಾತ್ಮಾ ಗಾಂಧಿ, ಖಾನ್ ಅಬ್ದುಲ್ ಗಫಾರ್ ಖಾನ್ ಅವರು ಸಂತರೂ ಹೌದು, ರಾಜಕಾರಣಿಗಳೂ ಹೌದು. ಭಾರತದೊಡನೆ ತಮ್ಮ ಅಂಕಿತವನ್ನು ಗುರುತಿಸಿಕೊಂಡ, ಬಾಬರ್, ಹುಮಾಯೂನ್, ಅಕ್ಬರ್ ಅವರನ್ನು, ಜನತೆ ತನ್ನವರನ್ನಾಗಿ ಕಂಡಿತು. ಭಾರತೀಯರ ಸ್ವಾತಂತ್ರ್ಯದ ಉತ್ಸಾಹಕ್ಕಾಗಿ, ಅವನನ್ನು ಸೆರೆಯೊಳಗೆ ದೂಡದ ಒಂದು ದಿನವಾಗಲಿ, ಬ್ರಿಟಿಷರ ಆಳ್ವಿಕೆಯಲ್ಲಿ ಕಾಣಸಿಗಲಿಲ್ಲ. ಕಳೆದ ಇನ್ನೂರು ವರುಷಗಳಿಂದ ಸ್ವಾತಂತ್ರ್ಯ ಹೋರಾಟ ನಡೆಯುತ್ತಲೆ ಬಂದಿದೆ. ಕಾಂಗ್ರೆಸ್‌ನ ಅರವತ್ತು ವರುಷಗಳ ನಡೆಯಲ್ಲಿ ಕಂಡಿದ್ದು ಕೇವಲ ಕಷ್ಟನಿಷ್ಠುರಗಳು, ತ್ಯಾಗಗಳಷ್ಟೆ. ಖುದಿರಾಂ ಬೋಸ್, ಭಗತ್‌ಸಿಂಗ್, ರಾಜಗುರು, ಚಂದ್ರಶೇಖರ್ ಆಜಾದ್ ಮತ್ತು ಇತರ ಹಲವಾರು ದೇಶಭಕ್ತರು, ಭಾರತ ಸ್ವಾತಂತ್ರ್ಯಕ್ಕಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಆತ್ಮಾರ್ಪಣ ಮಾಡಿದರು. ಲಕ್ಷೋಪಲಕ್ಷ ಭಾರತೀಯರು ಆಶ್ಚರ್ಯಕರ ರೀತಿಯಲ್ಲಿ ಸಾಹಸವನ್ನು ಮೆರೆದಿದ್ದಾರೆ. ಕಾಂಗ್ರೆಸ್‌ನ ಅಪಾರ ತ್ಯಾಗದ ಫಲವಾಗಿ ಇಂಗ್ಲಿಷ್

ನಿಧಾನವಾಗಿ ಅಧಿಕಾರ ಹಸ್ತಾಂತರಕ್ಕೆ ಒಲವು ತೋರಿದೆ. ೧೮೯೯, ೧೯೦೯, ೧೯೧೯ ಮತ್ತು ೧೯೩೫ರಲ್ಲಿ ಜಾರಿಗೊಂಡ ಅಧಿನಿಯಮಗಳು, ಭಾರತೀಯರು ಹಂತಹಂತವಾಗಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರುವುದನ್ನು ನಿರೂಪಿಸುತ್ತವೆ. ೧೯೪೦ರಿಂದ ೪೨ರ ವರೆಗೆ ರಾಷ್ಟ್ರೀಯ ಚಳವಳಿ ಮತ್ತು ಇತ್ತೀಚಿನ ಮಹಾಸಮರ ಸೃಷ್ಟಿಸಿದ ಅಂತಾರಾಷ್ಟ್ರೀಯ ಸನ್ನಿವೇಶ ಇಂಗ್ಲೆಂಡ್ ದೇಶವನ್ನು ಭಾರತ ತ್ಯಜಿಸುವಂತೆ ಬಲಾತ್ಕರಿಸಿವೆ. ಬ್ರಿಟಿಷರಿಂದ ಬಲಾತ್ಕಾರವಾಗಿ ಪಡೆದುಕೊಂಡ ಅಧಿಕಾರವನ್ನು ಸಂವಿಧಾನ ರಚನಾಸಭೆ ಪ್ರತಿನಿಧಿಸುತ್ತದೆ. ಅದು ಅವರ ಕೊಡುಗೆಯಲ್ಲ. ಅದನ್ನು ಹಿಂಪಡೆಯುವಷ್ಟು ಶಕ್ತಿ ಬ್ರಿಟಿಷರ ಕೈಯಲ್ಲಿ ಉಳಿದಿಲ್ಲ ನಾವು ರಚಿಸಿದ ಸಂವಿಧಾನವನ್ನು ಇಂಗ್ಲೆಂಡ್ ಒಪ್ಪಿಕೊಳ್ಳಲೇಬೇಕು. ಅದರಲ್ಲಿ ಸಂಶಯವೇ ಇಲ್ಲ. ವಿಶ್ವಸಂಸ್ಥೆಯ ಸಭೆಯಲ್ಲಿ ಭಾರತ ಗಳಿಸಿದ ಜಯದಿಂದ, ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೌಟುಂಬಿಕ ಪ್ರಶ್ನೆಯಾಗಿ ಉಳಿಯುವುದಿಲ್ಲ ಎಂಬುದನ್ನು ಸಾಬೀತು ಪಡಿಸಿದೆ. ಭಾರತ ಸ್ವತಂತ್ರ, ಶಕ್ತಿಯುತ ರಾಷ್ಟ್ರದ ಸ್ಥಾನಕ್ಕೇರಿದೆ. ಈ ನಿಟ್ಟಿನಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರ, ಅನನ್ಯ ಕಾರ್ಯಸಾಧನೆಯನ್ನು ಪ್ರಶಂಶಿಸಲು ನನಗೆ ಪದಗಳೇ ಸಾಲದು.

ಮಾನ್ಯ ಅಧ್ಯಕ್ಷರೆ, ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಾರೆ. ಕೇವಲ ಎರಡೇ ಶಬ್ದಗಳನ್ನಾಡಿ, ನಾನು ನನ್ನ ಭಾಷಣವನ್ನು ಸಮಾಪ್ತಿಗೊಳಿಸುತ್ತೇನೆ.

ಭಾರತೀಯರೆಲ್ಲರೂ, ತತ್ರಾಪಿ ಮುಸಲ್ಮಾನರು, ಸಿಖ್ಖರು, ತಳಸಮುದಾಯದವರು ಮತ್ತು ಇತರೆ ಅಲ್ಪಸಂಖ್ಯಾತರು ಭಯ ಪಡಬೇಕಿಲ್ಲ. ಮಹಾತ್ಮಾ ಗಾಂಧಿ, ಖಾನ್ ಅಬ್ದುಲ್ ಗಫಾರ್ ಖಾನ್, ಪಂಡಿತ್ ಜವಾಹರ್ ಲಾಲ್ ನೆಹರ್ ಮತ್ತು ಸರ್ದಾರ್ ಪಟೇಲರ ಧ್ಯೇಯದಲ್ಲಿ ನಿಮ್ಮ ಹಕ್ಕುಗಳ ಸುರಕ್ಷಿತ ಈ ನಿಲುವಳಿಯ ಮೂಲಕ ಸಂವಿಧಾನ ರಚನಾಸಭೆ ಸಮಾನ ಧೋರಣೆ ಮತ್ತು ನ್ಯಾಯವನ್ನು ಎಲ್ಲರಿಗೂ ದೊರಕಿಸುವ ಭರವಸೆಯನ್ನು ಘೋಷಿಸುತ್ತದೆ.

ಇತರ ರಾಷ್ಟ್ರಗಳೂ ಸಹ ಅಂತಹ ಘೋಷಣೆಗಳ ಅಗತ್ಯ ಮನಗಂಡಿದ್ದುವು. ಸದಸ್ಯರ ಗಮನಕ್ಕೆ ೧೯೧೯ರ ಜನವರಿ ೨೧ರಂದು ಘೋಷಿಸಲಾದ ಬ್ರಿಟಿಷ್ ಗಣತಂತ್ರದ ನಿರ್ಣಯವನ್ನು ತರಲು ಬಯಸುತ್ತೇನೆ.

ಸ್ವಾತಂತ್ರ್ಯ ಗಳಿಸಲು ಭಾರತ ಬಂಡೆಯೋಪಾದಿ ದೃಢನಿರ್ಧಾರವನ್ನು ತಳೆದಿದೆ ಎಂಬುದನ್ನು ಈ ಸಭೆಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ. ಇಂಗ್ಲೆಂಡ್, ನನ್ನ ಮಾತುಗಳಲ್ಲಿ ಗಮನಕ್ಕೆ ತಂದುಕೊಳ್ಳಬೇಕು.

ಇಷ್ಟನ್ನು ಹೇಳಿ, ನಾನು ನಿಲುವಳಿಯನ್ನು ಬೆಂಬಲಿಸುತ್ತೇನೆ.

**ಡಾ. ಎಚ್.ಸಿ. ಮುಖರ್ಜಿ** (ಬಂಗಾಳ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ,

ನನ್ನ ಸಮುದಾಯಕ್ಕೆ ಸಂಬಂಧಿಸಿದಂತೆ, ಆಂಗ್ಲ ಸಾಮತಿಯೊಂದಕ್ಕೆ ನಾನು ಯಾವಾಗಲು ಬದ್ಧನಾಗಿದ್ದೇನೆ– "ಪುಟ್ಟ ಮಕ್ಕಳು ಬರೆ ಕಾಣಿಸಿಕೊಳ್ಳಬೇಕಷ್ಟೆ; ಅವರನ್ನು ಕೇಳಬಾರದು". ಈ ಒಂದು ಸಂದರ್ಭದಲ್ಲಿ ಪಂಡಿತ್ ಜವಾಹರ್ ಲಾಲ್ ನೆಹರು ಅವರು ಪ್ರಸ್ತಾವಿಸಿದ ನಿಲುವಳಿಗೆ ಬೆಂಬಲ ಸೂಚಿಸಲೇಬೇಕೆಂಬ ಆಗ್ರಹಕ್ಕೆ ಮಣಿದು ಬೆಂಬಲಿಸುತ್ತಿದ್ದೇನೆ. ಏಕೆಂದರೆ, ನನ್ನ ಅಭಿಪ್ರಾಯದಂತೆ, ನಿಲುವಳಿಯ ಹಿಂದೆ ಇರುವುದು ಕೇವಲ ನಮ್ಮ ಹಿರಿಯ ಪಕ್ಷಗಳೊಂದೆ ಅಲ್ಲ; ಸಣ್ಣ ಪುಟ್ಟ ಅಲ್ಪಸಂಖ್ಯಾತರು, ಮತೀಯ ಮತ್ತು ಸಾಮಾಜಿಕ ಪಂಗಡಗಳು ಇವೆ ಎಂಬುದನ್ನು ಈ ಜಗತ್ತು ತಿಳಿಯಬೇಕಿರುವುದು ಅತ್ಯಾವಶ್ಯಕ. ಅಂತಹ ಒಂದು ಪಂಗಡಕ್ಕೆ ಸೇರಿದವ ನಾನು, ಪ್ರಸ್ತುತ ನಿಲುವಳಿಯ ಬಗ್ಗೆ ಏನೆಲ್ಲ ಹೇಳಬಹುದೋ ಎಲ್ಲವನ್ನೂ ನನಗೆ ಮೊದಲು ಮಾತನಾಡಿದವರು, ಸವಿವರ ತಿಳಿಸಿದ್ದಾರೆ. ನನ್ನ ಆಸಕ್ತಿಯನ್ನು ಕೆರಳಿಸಿರುವುದು ನಿರ್ಣಯದ ೫ ಮತ್ತು ೬ನೇ ಖಂಡಿಕೆಯ ವಿಷಯ. ಇವು ನನ್ನ ಮನಸ್ಸನ್ನು ಸೆಳೆದಿರುವ ವಿಷಯಗಳು. ಏಕೆಂದರೆ ಕಾಂಗ್ರೆಸ್, ಎಲ್ಲಿಯವರೆಗೆ ಆ ಖಂಡಿಕೆಗಳಲ್ಲಿ ಪ್ರತಿಪಾದಿಸಿರುವ ತತ್ತ್ವಗಳಿಗೆ ಬದ್ಧವಾಗಿರುತ್ತದೋ ಅಲ್ಲಿಯವರೆಗೆ ಅದರ ಮುಖಂಡತ್ವ ಉಳಿಯುತ್ತದೆ.

ಇತರ ಅಂಶಗಳಿಗೆ ಸಂಬಂಧಿಸಿದಂತೆ ನಾನೀಗಲೆ ಅವುಗಳ ಬಗ್ಗೆ ಆಸಕ್ತಿ ತಳೆದಿಲ್ಲ. ಆದರೆ ನನಗೆ ಖೇದ ತರುವ ಸಂಗತಿ ಎಂದರೆ, ಸಮಸ್ಯೆಗಳು ನಮ್ಮ ನಡುವೆಯೇ, ಭಾರತದೊಳಗೇ ಉದ್ಭವಿಸಿವೆ ಎಂಬುದು. ನಾನು ಬೇರೆ ಬೇರೆ ಪಕ್ಷಗಳ ಹೆಸರುಗಳನ್ನು ನಿರ್ದಿಷ್ಟ ಪಡಿಸಲಾರೆ. ಆದರೆ ನನಗೆ ತೋರಿದಂತೆ ಬಹುಸಂಖ್ಯಾತರಾಗಲಿ, ಅಲ್ಪಸಂಖ್ಯಾತರಾಗಲಿ, ಅವರ ತೊಂದರೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವುಗಳನ್ನು ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಗಳಿಗೆಯಲ್ಲಿ ಗುರುತಿಸಬೇಕಾಗುತ್ತದೆ. ಇವು ಮೂಲಭೂತ ಹಕ್ಕುಗಳು; ಪ್ರತಿಯೊಂದು ಸಾಮಾಜಿಕ ಮತ್ತು ಮತೀಯ ಪಂಗಡಕ್ಕೂ ಅನ್ವಯಿಸುತ್ತದೆ. ಮತೀಯ ಹಕ್ಕುಗಳಿಗೆ ಸಂಬಂಧಿಸಿದಂತೆ ನಮಗೆ ಪೂಜಾ ಸ್ವಾತಂತ್ರ್ಯ– ಪ್ರತಿಯೊಂದು ಮತವೂ ಇಂದು ಉಗ್ರವಾಗುತ್ತಿದೆ. ಕ್ರೈಸ್ತ ಪಾದ್ರಿಗಳು, ಮುಸ್ಲಿಮ್ ಮೌಲ್ವಿಗಳು, ಸಿಖ್ಖ ಗುರುಗಳು ನಿರ್ಭೀತರಾಗಿ ಹಿಂದೂ ಬಹುಸಂಖ್ಯಾತ ಕೋಮಿನೊಳಗೆ ಪ್ರವೇಶಿಸುವ ಕಾಲ ಹೋಯಿತು. ಪ್ರತಿಯೊಂದು ಕೋಮು ಇಂದು ಉಗ್ರಗಾಮಿಯಂತೆ, ಮತಪರಿವರ್ತನೆಯಲ್ಲಿ ತೊಡಗಿ ತನ್ನ ತೆಕ್ಕೆಯೊಳಗೆ ತಂದುಕೊಳ್ಳುವ ಶಕ್ತಿ ಪಡೆದಿದೆ. ಈ ವಿಷಯದಲ್ಲಿ ನಾವು ಸಂದೇಹಗ್ರಸ್ತರಾಗಬೇಕೇಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಪ್ರಚಾರದ ವಿಷಯದಲ್ಲಿ ನಮಗಿರುವ ಅಧಿಕಾರವನ್ನು ಕ್ರೈಸ್ತ ಪಂಗಡಗಳಿಗೆ ಅನ್ವಯಿಸುತ್ತ ಈ ಮಾತು ಹೇಳುತ್ತಿದ್ದೇನೆ.

ಕಾಂಗ್ರೆಸ್, ರಾಷ್ಟ್ರೀಯತೆಯ ಹರಿಕಾರ. ರಾಷ್ಟ್ರದ ಪ್ರಗತಿ ಸಾಧಿಸುವವರೆಗೆ ನಾನದನ್ನು ಪ್ರಶ್ನಿಸಲಾರೆ. ಅದು ಭಾರತದ ಉಳಿದವರ ನಿಷ್ಠೆಯನ್ನು ಮಾತ್ರವಲ್ಲದೆ ನನ್ನ ಕೋಮನ್ನೂ ಒಳಗೊಂಡಂತೆ ಅತಿ ಸಣ್ಣ ಅಲ್ಪಸಂಖ್ಯಾತ ವರ್ಗದವರ ಬಲವನ್ನೂ ಗಳಿಸಬಹುದು.

**ಶ್ರೀ ಪ್ರಮಥ ರಂಜನ್ ಠಾಕೂರ್** (ಬಂಗಾಳ : ಸಾಮಾನ್ಯ) : ನಾವು ಇನ್ನೆಷ್ಟು ಹೊತ್ತು ಈ ನಿಲುವಳಿಯ ಕುರಿತು ಚರ್ಚಿಸಬೇಕಾಗುತ್ತೆ?

**ಮಾನ್ಯ ಅಧ್ಯಕ್ಷರು** : ನನಗೆ ಗೊತ್ತಿಲ್ಲ (ನಗೆ)

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಯಾರಾದರೂ ಸಮಾಪ್ತಿಯನ್ನು ಪ್ರಸ್ತಾಪಿಸುವರೆ?

**ಮಾನ್ಯ ಅಧ್ಯಕ್ಷರು** : ಹೌದು, ಯಾರಾದರೂ ಸಮಾಪ್ತಿಯನ್ನು ಪ್ರಸ್ತಾವಿಸಬಹುದು.

**ಶ್ರೀ ಎಚ್.ವಿ.ಪಾಟಸ್ಕರ್** (ಬಾಂಬೆ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ, ಪಂಡಿತ್ ಜವಾಹರ್ ಲಾಲ್ ನೆಹರು ಅವರು ಪ್ರಸ್ತಾವಿಸಿದ ಈ ನಿಲುವಳಿಗೆ ನನ್ನ ಬೆಂಬಲವಿದೆ. ನಿರ್ಣಯದ ಬಗ್ಗೆ ವಿಭಿನ್ನ ಆಸಕ್ತಿ ಮತ್ತು ರಾಜಕೀಯ ಚಿಂತನೆಯುಳ್ಳ ಅನೇಕರು, ಈಗಾಗಲೇ ಮಾತನಾಡಿದ್ದಾರೆ. ನಾನು ಕೆಲವೇ ಕೆಲ ಅಂಶಗಳ ಬಗ್ಗೆ ಕೆಲವೇ ಶಬ್ದಗಳಿಗೆ ನನ್ನ ಮಾತನ್ನು ಸೀಮಿತಗೊಳಿಸಲು ಬಯಸುತ್ತೇನೆ.

ಮೊಟ್ಟ ಮೊದಲ ಪ್ರಶ್ನೆಯೆಂದರೆ ಈ ಹಂತದಲ್ಲಿ ಇಂಥದೊಂದು ನಿಲುವಳಿಯೇಕೆ? ಸರಳವಾದ ಉತ್ತರವೆಂದರೆ, ನಾವೀಗ ನಿರ್ವಹಿಸಬೇಕಿರುವ ಕರ್ತವ್ಯದ ಅಗಾಧ ಸ್ವರೂಪ ಮತ್ತು ಸಂಕೀರ್ಣತೆ. ಅದು ಈ ನಿರ್ಣಯವನ್ನು ಈ ಹಂತದಲ್ಲಿ ಅಂಗೀಕರಿಸಬೇಕೆನ್ನುವುದಕ್ಕೆ ಮುಖ್ಯ ಕಾರಣ. ಸ್ವಾಮಿ, ನಮ್ಮೆದುರಿಗಿರುವ ಕರ್ತವ್ಯದ ಕಡೆ ನೋಡೋಣ. ಮಾನವಜನಾಂಗದ ಐದನೇ ಒಂದು ಭಾಗವಾದ, ಭಾರತದ ೪೦ ಕೋಟಿ ಚಿಲ್ಲರೆ ಜನರಿಗೆ ಹೊಂದುವಂತಹ ಸಂವಿಧಾನವನ್ನು ರಚಿಸುವ ಭಾರ ನಮ್ಮ ಹೆಗಲ ಮೇಲಿದೆ. ಮತ್ತೆ ೪೦ ಕೋಟಿ ಜನರು ಮತೀಯವಾಗಿ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಜೈನರು, ಸಿಕ್ಖರು ಮತ್ತಿತರ ಪಂಗಡ ಮತ್ತು ಉಪ ಪಂಗಡಗಳಾಗಿ ವಿಭಜನೆ ಹೊಂದಿದ್ದಾರೆ. ಭಾರತೀಯ ರಾಜ್ಯ ಕ್ಷೇತ್ರಗಳ ಮೂರನೇ ಒಂದು ಭಾಗಗಳು ರಾಜ್ಯಗಳಾಗಿ ಗುರುತಿಸಲ್ಪಟ್ಟಿವೆ. ಅದೊಂದು ಕಾಲದ ತಪ್ಪೆಣಿಕೆ. ಅವುಗಳ ಸಂಖ್ಯೆ ೫೮೭. ಮತ್ತೆ ಅವರ ಆರ್ಥಿಕ ಸ್ಥಿತಿಗತಿಯೂ ಕೂಡ ವಿವಿಧ ವಿಭಿನ್ನ. ನನಗೆ ಸಿಕ್ಕ ಮಾಹಿತಿಯಂತೆ ಅವರ ವಾರ್ಷಿಕ

ವರಮಾನ ಕೂಡ ೧೦೦ ರೂಪಾಯಿ, ಆಡಳಿತ ವಿಷಯಕ್ಕೆ ಬಂದಾಗ, ಕೆಲವೆಡೆ ನಿರಂಕುಶ ಪ್ರಭುತ್ವ ಮತ್ತೆ ಕೆಲವೆಡೆ ವೈಯಕ್ತಿಕ ಕಾನೂನು ಜಾರಿಯಲ್ಲಿದೆ. ಇತರ ರಾಜ್ಯಗಳಲ್ಲಿ ನಾನು ಕಂಡಂತೆ ಸಂವಿದಾನಿಕ ಸರ್ಕಾರ ರಚನೆಯ ಪ್ರಯತ್ನ ನಡೆಯುತ್ತಿದೆ. ಮತ್ತೆ ಈ ರಾಜ್ಯದ ನಿವಾಸಿಗಳಾದ ೪೦ ಕೋಟಿ ಜನರೂ ವಿಕಸನದ ಹಲವು ಹಂತಗಳಲ್ಲಿದ್ದಾರೆ. ಅವರಿಗೆ ಸಂಬಂಧಿಸಿದಂತೆ ಹಲವಾರು ವಿವಿಧ ಕ್ಲೇಮುಗಳು ಮುಂದಿಡಲ್ಪಟ್ಟಿವೆ. ಹಿಂದುಳಿದ ವರ್ಗಗಳು, ಬುಡಕಟ್ಟು ಪ್ರದೇಶವಾಸಿಗಳು, ಇತ್ಯಾದಿ. ಆರ್ಥಿಕವಾಗಿ ನಾವು ವಿಭಜಿತರಾಗಿದ್ದೇವೆ. ಒಂದೆಡೆ ಕೋಟ್ಯಧೀಶರು, ಮತ್ತೊಂದೆಡೆ ಹಸಿವೆಯ ಅಂಚಿಗೆ ದೂಡಲ್ಪಟ್ಟವರೂ ಇದ್ದಾರೆ ಅಥವಾ ಆಗಲೆ ಹಸಿವನ್ನು ಉಣ್ಣುತ್ತಿರುವವರು ಇದ್ದಾರೆ. ಆಡಳಿತದಲ್ಲೂ, ನಮ್ಮಲ್ಲಿ ಅಸಮ ಪ್ರಮಾಣದ ಪ್ರಾಂತ್ಯಗಳಾಗಿ ವಿಭಜನೆ ಹೊಂದುವುದಕ್ಕೆ ವಿದೇಶಿ ಆಡಳಿತವೂ ಕಾರಣವೆ. ಅದೂ ಕೂಡ ಸೃಷ್ಟಿಸಿರುವ ಹಲವಾರು ಸಮಸ್ಯೆಗಳೊಡನೆ ನಾವು ಮುಖಾಮುಖಿಯಾಗುತ್ತಿದ್ದೇವೆ. ಬ್ರಿಟಿಷ್ ಪೂರ್ವ ಆಕ್ರಮಣ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತದಿಂದ ಬಹುತೇಕ ಅಂತಹ ರೀತಿಯಲ್ಲಿ ವಿಭಾಗ, ಉಪವಿಭಾಗ, ಅಡ್ಡ ವಿಭಾಗಗಳಾಗಿ ವಿಭಜನೆ ಹೊಂದಿರುವ ಅತಿ ದೊಡ್ಡ ಜನತೆಯ ಒಳಿತಿಗಾಗಿ ನಾವು ಒಂದು ಸಂವಿಧಾನವನ್ನು ರಚಿಸಬೇಕಿದೆ. ಅದು ಈ ಎಲ್ಲ ವರ್ಗಗಳಿಗೆ ಸಮ್ಮತವಾಗಬೇಕು ಅಥವಾ ಹೇಗಾದರೂ ಅವರಲ್ಲಿ ಸಾಧ್ಯವಾದಷ್ಟೂ ಮಂದಿಯ ಅಗತ್ಯಗಳನ್ನೂ ಆಶೋತ್ತರಗಳನ್ನು ಪೂರೈಸುವ ಸಂವಿಧಾನ ರೂಪುಗೊಳ್ಳಬೇಕು. ಸಹಜವಾಗಿಯೇ, ಸಂವಿಧಾನದ ರಚನೆಯಲ್ಲಿ ತೊಡಗುವಾಗ ವಿಭಾಗ, ಉಪ ವಿಭಾಗ ಮತ್ತು ಅಡ್ಡ ವಿಭಾಗದ ಸಂಖ್ಯೆ ವೃದ್ಧಿಗೊಳ್ಳುತ್ತದೆ. ಈಗಾಗಲೇ ಈ ವಿಭಾಗದ ಅಥವಾ ಆ ವಿಭಾಗದ ಆಸಕ್ತಿಯನ್ನು ಮುಂದೊಡ್ಡಲು ನೂಕುನುಗ್ಗಲು ನಡೆದಿದೆ. ಇವುಗಳಲ್ಲಿ ಹಲವಾರು ಆಸಕ್ತಿಗಳಲ್ಲಿ ಪರಸ್ಪರ ತಾಕಲಾಟವಿದೆ. ಈ ಸದನದ ವೇದಿಕೆಯಲ್ಲೂ ಸಹ ಪರಸ್ಪರ ವಿರೋಧಿ ಅಭಿಪ್ರಾಯಗಳು ವ್ಯಕ್ತವಾದುದನ್ನೂ ನಾವು ಕಂಡಿದ್ದೇವೆ. ಭಾರತ, ಮೌಢ್ಯ ಮತ್ತು ಬಡತನದ ದೇಶ ಎಂಬುದು ನಮಗೆ ತಿಳಿದಿದೆ. ಹಾಗಾಗಿ, ರಾಜಕೀಯ ಚಟುವಟಿಕೆಗಳಿಗಾಗಿ ಮತಾಂಧತೆಯನ್ನು ದಾಳವಾಗಿ ಬಳಸಿಕೊಳ್ಳುವುದು ಈ ರಾಷ್ಟ್ರದಲ್ಲಿ ಬಹಳ ಸುಲಭ.

ಒಂದು ನಿರ್ದಿಷ್ಟ ಮತವನ್ನು ಆಧರಿಸಿ, ಇಡೀ ವಿಶ್ವದಲ್ಲಿ ಯಾವೊಂದೂ ಆಧುನಿಕ, ಪರಿಣಾಮಕಾರಿ ಸಂವಿಧಾನ ರಚನೆಯಾಗಿಲ್ಲ. ಪ್ರಾದೇಶಿಕ ಗುರಿಗಳೇನೇ ಇರಲಿ ವಿಶ್ವಾದ್ಯಂತ, ಸಾಮಾಜಿಕ ಸುಭದ್ರತೆಯನ್ನು ನಿರ್ಮಾಣ ಮಾಡುವುದೇ ಪ್ರತಿಯೊಂದು ಮತದ ಮೂಲತತ್ತ್ವ, ನಾವು ದೈವದ ಪರಿಕಲ್ಪನೆಯನ್ನು ಹುಟ್ಟುಹಾಕಿ, ಅದಕ್ಕೆ ಏನೇ ಹೆಸರಿಡಲಿ, ಅದರ ಹಿಂದಣ ಉದ್ದೇಶ ಮಾನವ ಜನಾಂಗ ನಿಜವಾದ ಸೌಭ್ರಾತೃತ್ವವನ್ನು ರೂಢಿಸಿಕೊಳ್ಳಲೆಂಬುದು. ಮನುಕುಲವನ್ನು ಉನ್ನತ ಸ್ತರಕ್ಕೇರಿಸಿ ಉದಾತ್ತಗೊಳಿಸಲು, ಸ್ಥಾಪಿಸಿದ ಮತವನ್ನು ಈಗ ಮನುಷ್ಯ ಮನುಷ್ಯನ ನಡುವೆ ವೈಮನಸ್ಯ ತಂದು ಮಾನವನನ್ನು ಮೃಗದ ಮಟ್ಟಕ್ಕೆ ಇಳಿಸುವ ಭಯಾನಕ ಸಾಧನವನ್ನಾಗಿ ಬಳಸಿಕೊಳ್ಳಲಾಗಿದೆ.

ಆದುದರಿಂದ, ನಮ್ಮ ಮುಂದಿರುವುದು ಒಂದು ವ್ಯಾಪಕವಾದ ಸಂಕೀರ್ಣ ಸಮಸ್ಯೆ. ಹಿಂದೂ ಮುಸ್ಲಿಮ್ ಪರಸ್ಪರ ವಿರೋಧಿಸುತ್ತಿರುವ ಸಮಸ್ಯೆ ಎದುರಾಗಿದೆ. ಹಿಂದೂ-ಹಿಂದೂಗಳ ನಡುವೆ ಘರ್ಷಣೆ, ಕ್ರೈಸ್ತರ ಸಮಸ್ಯೆ, ಅಂತೆಯೆ ಆಂಗ್ಲೋ ಇಂಡಿಯನ್ನರು, ತಳಸಮುದಾಯದವರು, ಹಿಂದುಳಿದವರ ಸಮಸ್ಯೆ; ನಡುವೆ ಮಹಿಳೆಯರ ಹಕ್ಕುಗಳ ಸಮಸ್ಯೆ.

ಪ್ರತಿ ವಿಭಾಗ, ಅಡ್ಡ ವಿಭಾಗವೂ, ತನ್ನ ಪ್ರತ್ಯೇಕ ಹಕ್ಕುಗಳ ಬಗ್ಗೆ ಚಿಂತಿಸುತ್ತದೆ. ತನಗೆಂದೇ ಒಂದು ಪ್ರಣಾಳಿಕೆಯನ್ನು ಬೇಡುತ್ತದೆ. ಮಾನ್ಯರೆ, ವಿಭಿನ್ನ ಪ್ರಣಾಳಿಕೆಗಳು, ವರ್ಗಗಳಿಗಾಗಿ ವಿಭಿನ್ನ ಇರಬೇಕೆಂಬ ಸಾಮಾನ್ಯ ಕಚ್ಚಾಟದಿಂದ ಶ್ರೀಸಾಮಾನ್ಯನ ಪ್ರಣಾಳಿಕೆ ಕಣ್ಣು ತಪ್ಪಿ ಹೋಗುತ್ತದೆ. ಸಾಮಾನ್ಯನಿಗಾಗಿ ಒಂದು ಪ್ರಣಾಳಿಕೆಯ ಅಗತ್ಯ ಇಂದು ತೀವ್ರವಾಗಿದೆ. ಈ ನಿರ್ಣಯವು, ಶ್ರೀಸಾಮಾನ್ಯನ ಪ್ರಣಾಳಿಕೆಯನ್ನು ಒಳಗೊಂಡಿದೆ. ಈ ನಿಲುವಳಿಯ ಉದ್ದೇಶವನ್ನು ಭಾರತೀಯರಿಗೆ ಮಾತ್ರವೇ ಅಲ್ಲದೆ, ಇಡೀ ವಿಶ್ವಕ್ಕೆ ತಿಳಿಯ ಪಡಿಸಲು

ಉದ್ದೇಶಿಸಿದ್ದೇವೆ. ನಮ್ಮ ಉದ್ದೇಶದ ಬಗ್ಗೆ, ಭಾರತದೊಳಗೆ ಬೇರೆ ಬೇರೆ ರಾಜಕೀಯ ಪಕ್ಷಗಳ ಹೇಳಿಕೆ, ಪ್ರತಿ ಹೇಳಿಕೆಗಳಿಗೆ ಉತ್ತರಿಸಿ ಸಮಜಾಯಿಷಿ ನೀಡುವುದಕ್ಕಿಂತ ಹೆಚ್ಚಾಗಿ, ಉದ್ದೇಶವನ್ನು ಸಂಶಯಿಸುವ ಎಲ್ಲರನ್ನೂ ತೃಪ್ತಿ ಪಡಿಸಬೇಕಾಗಿದೆ. ಅವರೆಲ್ಲ ಈ ಸುಲಭಗ್ರಾಹ್ಯವಾದ ಹೇಳಿಕೆಯತ್ತ ಗಮನ ಕೊಡಬೇಕು. ಜಾತಿ, ಪಂಥ, ಮತ, ಲಿಂಗ ಮತ್ತು ಸಾಮಾಜಿಕ ಅಥವಾ ಆರ್ಥಿಕ ಸ್ಥಿತಿಗತಿಗಳೇನೇ ಇರಲಿ ಪ್ರತಿಯೊಬ್ಬ ಭಾರತೀಯರ ಹಿತಾಸಕ್ತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಮುಂದೆ ನಾವು ಉದ್ದೇಶಿಸಿರುವ ಸಂವಿಧಾನದ ರಚನೆಯಾಗುವುದೆಂಬುದನ್ನು ಅರಿತು ಸಮಾಧಾನ ಪಟ್ಟುಕೊಳ್ಳಬಹುದು. ಸದನದ ಹೊರಗುಳಿದವರನ್ನು ಈ ನಿರ್ಣಯ ತೃಪ್ತಿ ಪಡಿಸಲಾಗದಿದ್ದಲ್ಲಿ ಮತ್ತಾವುದೂ ಅವರನ್ನು ತೃಪ್ತಿ ಪಡಿಸಲಾಗದು. ಪ್ರತಿಯೊಂದು ವಿಭಾಗಕ್ಕೂ ನ್ಯಾಯಸಮ್ಮತವಾಗಿರುವಂತೆ ನಾವು ಪ್ರಯತ್ನಿಸುತ್ತೇವೆ. ಜೊತೆಗೆ, ಯಾವುದೇ ರೀತಿಯ ಬೆದರಿಕೆಯೊಡ್ಡಿ ಯಾವ ಅಕೃತ್ಯವನ್ನೂ ಎಸಗದಂತೆ ನಮ್ಮ ಒತ್ತಡ ಹೇರಲು ಬಿಡದಂತೆ ನೋಡಿಕೊಳ್ಳುತ್ತೇವೆ. ನಮ್ಮ ಧ್ಯೇಯೋದ್ದೇಶಗಳನ್ನು ಸ್ಪಷ್ಟ ಪಡಿಸಿ, ಸ್ವತಂತ್ರ ಭಾರತಕ್ಕಾಗಿ ದಿಟ್ಟ ಹೆಜ್ಜೆ ಇಟ್ಟು ಕಾರ್ಯೋನ್ಮುಖರಾಗಿ ಮುನ್ನಡೆಯುತ್ತೇವೆ. ನಮ್ಮ ಹಾದಿಯಲ್ಲಿ ಅಡ್ಡಬರುವ ಎಲ್ಲ ತೊಂದರೆಗಳನ್ನೂ ಎದುರಿಸುತ್ತೇವೆ. ನಾವು ಸ್ವಾತಂತ್ರ್ಯದ ಗುರಿ ಮುಟ್ಟುತ್ತೇವೆ. ವಿಶ್ವಶಾಂತಿಯನ್ನು ಕದಡುತ್ತಿರುವ ಗೊಂದಲಮಯ ಪರಿಸ್ಥಿತಿಯನ್ನು, ಸ್ವತಂತ್ರ ಭಾರತ, ತಹಬಂದಿಗೆ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಷ್ಟನ್ನು ಹೇಳಿ ಪಂಡಿತ್ ಜವಾಹರ್‌ಲಾಲ್ ನೆಹರು ಪ್ರಸ್ತಾವಿಸಿದ ನಿಲುವಳಿಗೆ ನಾನು ಬೆಂಬಲ ನೀಡುತ್ತೇವೆ.

**ಶ್ರೀ ಎಸ್.ಎಚ್. ಪ್ರೇಟರ್** (ಮದರಾಸು : ಸಾಮಾನ್ಯ) :

ಮಾನ್ಯರೆ,

ಈ ನಿಲುವಳಿಯ ಮೇಲೆ ಚರ್ಚೆ ಪ್ರಾರಂಭಿಸಿದಾಗ, ಮೊದಮೊದಲು ನನ್ನ ಕೋಮಿನ ಪ್ರತಿನಿಧಿಯೊಬ್ಬರು, ನಿಲುವಳಿಯನ್ನು ಮುಂದೂಡಬೇಕೆಂಬ ಡಾ. ಜಯಕರ್ ಅವರ ತಿದ್ದುಪಡಿಗೆ ಬೆಂಬಲ ಸೂಚಿಸಿದರು. ಈಗ ಅಂತಹ ಮುಂದೂಡಿಕೆಗೆ ಮಾನ್ಯತೆಯೂ ಇಲ್ಲ, ಅದು ಸಮರ್ಥನೀಯವೂ ಅಲ್ಲ ಘೋಷಾನುಮೋದನೆ. ಈ ಸದನವು ಮುಂದರಿದು ನಿಲುವಳಿಯನ್ನು ಅಂಗೀಕರಿಸಿ ಜಾರಿಗೊಳಿಸಬೇಕು.

ಸಭೆಯ ಗುರಿಯೇನೆಂಬುದನ್ನು ನಿಲುವಳಿ ಒಳಗೊಂಡಿದೆ. ಭಾರತಕ್ಕೆ ಸರ್ವತಂತ್ರ ಸ್ವತಂತ್ರ ರಾಷ್ಟ್ರದ ನೆಲೆಗಾಣಿಸುವ ಒಂದು ಸರ್ಕಾರವನ್ನು ಸ್ಥಾಪಿಸಬೇಕೆಂಬುದು ಗುರಿ. ನಿಲುವಳಿಯನ್ನು ಅಂಗೀಕರಿಸುವುದರಿಂದ, ಸಭೆ ತನ್ನ ಉದ್ದೇಶವನ್ನು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟಂತೆ, ಭಾರತಕ್ಕೆ ತನ್ನ ಆಂತರಿಕ ವ್ಯವಹಾರಗಳನ್ನು ನಿಯಂತ್ರಿಸುವ ಸಂಪೂರ್ಣ ಅಧಿಕಾರ ನೀಡುವುದು, ಮತ್ತು ಅಂತಾರಾಷ್ಟ್ರೀಯ ಬಾಂಧವ್ಯ ಕುರಿತಂತೆ, ಸಂಪೂರ್ಣ ಸ್ವತಂತ್ರ ನಿರ್ಧಾರ ತೆಗೆದುಕೊಂಡು ಕಾರ್ಯೋನ್ಮುಖವಾಗಲು ಅಧಿಕಾರ ನೀಡುವುದು ನಮ್ಮ ಗುರಿ.

ಸ್ವಯಂ ಸರ್ಕಾರದ ಸಮಸ್ಯೆಯನ್ನು ಬಗೆಹರಿಸುವ ನಮ್ಮ ಸಾಮರ್ಥ್ಯದ ಮೇಲೆ ಸ್ವಾತಂತ್ರ್ಯ ಗಳಿಸುವ ಯತ್ನ ಆಧರಿಸಿದೆ. ನಿರ್ಣಯದ ನಿಬಂಧನೆಗಳು, ಪರಿಹಾರದ ಬುನಾದಿಯನ್ನು ಸ್ಪಷ್ಟ ಪಡಿಸುತ್ತವೆ. ಇದು ಹೊಂದಾಣಿಕೆಯ ನಿಲುವಳಿ. ಅದರ ನಿಬಂಧನೆಗಳು ಸಂಪೂರ್ಣ ಕ್ಯಾಬಿನೆಟ್ ಮಿಷನ್‌ನ ಹೇಳಿಕೆಯ ಪ್ರಸ್ತಾವಗಳ ಚೌಕಟ್ಟಿನೊಳಗೆ ಅಡಕವಾಗಿವೆ. ಕಾಂಗ್ರೆಸ್ ಮತ್ತು ಮುಸ್ಲಿಮ್‌ಲೀಗ್‌ಗಳ ಪರಸ್ಪರ ವಿರೋಧಿ ಕ್ಲೇಮುಗಳ ನಡುವೆ ಒಂದು ಸುವರ್ಣ ಮಾಧ್ಯಮವನ್ನು ಒದಗಿಸುತ್ತದೆ. ಪ್ರಸ್ತಾವಗಳು ಈ ಪಕ್ಷಕ್ಕೋ ಇಲ್ಲವೆ ಆ ಪಕ್ಷಕ್ಕೋ ಪ್ರಶ್ನಾರ್ಹ ಪ್ರಸ್ತಾವವೆನಿಸಬಹುದು. ಆದರೆ ಇಂದು ತೀವ್ರವಾಗಿ ಅಗತ್ಯವಿರುವುದೇನೆಂದರೆ, ಜನರು ಅಪ್ರಿಯ ಸತ್ಯವನ್ನು ಗ್ರಹಿಸಬೇಕೆಂಬುದು ಮತ್ತು ಸಾಮಾನ್ಯ ಒಳಿತಿಗಾಗಿ ತಮ್ಮ ಹಲವಾರು ಆದರ್ಶಗಳನ್ನು ತ್ಯಾಗ ಮಾಡಬೇಕೆಂಬುದು ಇಲ್ಲಿ ಗುರುತಿಸಬೇಕಾದ ಎರಡು ಸತ್ಯಾಂಶಗಳಿವೆ. ಆ ಎರಡೂ ಸತ್ಯಾಂಶಗಳು ನಿಲುವಳಿಯ ನಿಬಂಧನೆಗಳಲ್ಲಿ ಅಡಕಗೊಂಡಿವೆ. ಒಂದು – ಯಾವುದೇ ಸಂವಿಧಾನವನ್ನು ನಾವು ರಚಿಸುವಾಗ,

ಅದು ಪ್ರಾಂತೀಯ ಸ್ವಾಯತ್ತತೆಯ ಆಧಾರದ ಮೇಲೆ ನಿಲ್ಲಬೇಕು; ಎರಡು – ಎಲ್ಲ ಸ್ವಾಯತ್ತ ರಾಜ್ಯಗಳು ಮತ್ತು ಪ್ರಾಂತ್ಯಗಳ ಒಕ್ಕೂಟವಿರಬೇಕು. ಮೌರ್ಯರಿಂದ ಬ್ರಿಟಿಷರವರೆಗೆ, ಭಾರತ ಪ್ರತ್ಯೇಕ ರಾಜ್ಯಗಳಾಗಿ ಉಳಿದಿದೆ ಎಂಬುದನ್ನು ಇತಿಹಾಸ ಕಲಿಸಿಕೊಡುತ್ತದೆ. ಪ್ರತ್ಯೇಕ ಸಂಸ್ಥಾನಗಳು ಪ್ರತ್ಯೇಕ ಪ್ರಾಂತ್ಯಗಳಿದ್ದು ಅವುಗಳಿಗೆ ಪ್ರತ್ಯೇಕ ರಾಷ್ಟ್ರೀಯ ಅಂಕಿತಗಳು, ಪ್ರತ್ಯೇಕ ರಾಷ್ಟ್ರೀಯ ಸಂಸ್ಕೃತಿಗಳು ಇದ್ದು, ಅವು ಯಾವಾಗಲೂ ಸ್ಥಳೀಯವಾಗಿ ದೇಶಾಭಿಮಾನವನ್ನು ಬೆಳೆಯಗೊಟ್ಟಿವೆ; ಕೊಡುತ್ತಿವೆ. ಈಗ ಕಾಣುತ್ತಿರುವ ಕೋಮು ಭಿನ್ನಾಭಿಪ್ರಾಯಗಳಲ್ಲ, ಆದರೆ ಈ ಸ್ಥಳೀಯ ದೇಶಾಭಿಮಾನವೇ, ಭಾರತದ ರಾಜಕೀಯ ವಿಕಸನಕ್ಕೆ ಕಾರಣಭೂತವಾಗಿವೆ. ಇದನ್ನು ನಾವು ಬಲ್ಲೆವು. ಒಂದು ಬಲಿಷ್ಠ ಏಕೀಕೃತ ಸರ್ಕಾರ, ಒಂದು ನಿಶ್ಚಿತ ಕೇಂದ್ರೀಕರಣ ನೀತಿ ಯಾವುದು ಬ್ರಿಟಿಷ್ ಆಳ್ವಿಕೆಯನ್ನು ಪ್ರಾರಂಭದಲ್ಲಿ ವಿಶಿಷ್ಟಗೊಳಿಸಿತೋ, ಅದೇ ಆಳ್ವಿಕೆ, ದುರ್ಬಲಗೊಂಡು, ಈ ನಿಷ್ಠುರವಾದ, ಕಠಿಣವಾದ ಶಕ್ತಿಗಳಿಗೆ ಮಣಿದು ವಿಕೇಂದ್ರೀಕರಣಕ್ಕೆ ಒಡಂಬಡಿಸಬೇಕಾಯಿತು. ಪ್ರಾಂತ್ಯಗಳಿಗೆ ಅಧಿಕಾರದ ಹಸ್ತಾಂತರ ಹೆಚ್ಚುತ್ತ ಬಂತು; ಮತ್ತು ಪ್ರಾಂತೀಯ ಆಡಳಿತಕ್ಕೆ ತಲೆಬಾಗಬೇಕಾಯಿತು. ಪ್ರಾಂತೀಯ ಸ್ವಾಯತ್ತತೆ ನಮಗೆ ಪ್ರಾಪ್ತವಾದುದು, ಬಾಹ್ಯ ಮೂಲದ ಪ್ರಸ್ತಾವದಿಂದಲ್ಲ. ರಾಷ್ಟ್ರದ ಅನಿವಾರ್ಯ ಅಗತ್ಯತೆಯಿಂದ. ಇದರ ಹಿಂದೆ ವಿವಿಧ ರಾಜ್ಯಗಳು ಮತ್ತು ಪ್ರಾಂತ್ಯಗಳ ಸಂಘಟನೆ ಇತ್ತು; ಅವುಗಳ ವಿವಿಧ ಜನಾಂಗಗಳ ಬೆಂಬಲವಿತ್ತು. ಆ ಜನರ ಸಮಗ್ರ ಸಂಸ್ಕೃತಿ, ಆರ್ಥಿಕ ಮತ್ತು ರಾಜಕೀಯ ಅಗತ್ಯಗಳು ಕೇವಲ ಸ್ವಾಯತ್ತ ಆಳ್ವಿಕೆಯಿಂದಲೆ ಪೂರೈಕೆಯಾಗುವುದು ಸಾಧ್ಯವಿತ್ತು. ನಿಲುವಳಿಯಲ್ಲಿ ಉದ್ದೇಶಿಸಲಾದ, ಪ್ರಾಂತ್ಯಗಳ ಸ್ವಾಯತ್ತತೆ ಮತ್ತು ಉಳಿಕೆ ಅಧಿಕಾರಗಳ ಹಸ್ತಾಂತರ ಈ ಅಗತ್ಯವನ್ನು ಅದು ಪೂರೈಸುತ್ತದೆ. ನೂತನ ಸಂವಿಧಾನದ ಕಟ್ಟೋಣಕ್ಕೆ ಪ್ರಾಂತೀಯ ಸ್ವಾಯತ್ತತೆಯಷ್ಟೆ ಬುನಾದಿ ಎಂದು ಚರಿತ್ರೆ ನಮಗೆ ಕಲಿಸುವುದಾದರೆ, ಅಂತಹ ಪ್ರಾಂತೀಯ ಸ್ವಾಯತ್ತ ಒಕ್ಕೂಟವನ್ನು ಹೊಂದಿರುವ ರಾಜ್ಯವೊಂದಿರಲೇಬೇಕು ಮತ್ತು ಅದು ಒಂದು ಏಕಮೇವ ಕೇಂದ್ರೀಯ ಆಡಳಿತಕ್ಕೆ ಒಳಪಟ್ಟಿರಬೇಕೆಂಬುದನ್ನೂ ಅದು ನಿರೂಪಿಸುತ್ತಿದೆ. ವಿವಿಧ ಪ್ರಾಂತ್ಯಗಳ ಸಮತೋಲವನ್ನು ಕಾಯ್ದುಕೊಳ್ಳಲು ಒಂದು ಪರಮೋಚ್ಚ ಅಧಿಕಾರವಿಲ್ಲದಾಗೆಲ್ಲ, ಘರ್ಷಣೆ ಮತ್ತು ಕಾದಾಟ ನಡೆದೇ ಇದೆ. ಅದರಿಂದ ಇಡೀ ರಾಷ್ಟ್ರದ ಮೇಲೆ ವಿನಾಶಕಾರಿ ಪರಿಣಾಮ ಉಂಟಾಗಿದೆ. ನಿಲುವಳಿಯಲ್ಲಿ ಆಲೋಚಿಸಿದಂತೆ, ಅಂತಹ ಒಕ್ಕೂಟದಿಂದಲೆ ನಾವು ಪರಸ್ಪರ ನೆಮ್ಮದಿಯಿಂದಿರಲು ಸಾಧ್ಯ. ರಾಷ್ಟ್ರದ ಸಮಸ್ತ ಪ್ರಜೆಗಳ ಸಾಮಾನ್ಯ ಶ್ರೇಯೋಭಿವೃದ್ಧಿಯೂ ಅದರಿಂದಲೇ ಸಾಧ್ಯ. ಅಂತಹ ಒಕ್ಕೂಟದಿಂದಲೆ, ವಿದೇಶಿ ಆಕ್ರಮಣದಿಂದ, ನಮ್ಮ ಜನತೆಯ ಘನತೆಯನ್ನು ಪಾರು ಮಾಡಬಹುದು. ಅಂತಹ ಒಕ್ಕೂಟದಿಂದಲೆ ಭಾರತದ ಜನತೆ ಒಂದು ಸಂಘಟನೆಯಾಗಿ ಬೆಳೆದು, ವಿಶ್ವದ ರಾಜಕೀಯದಲ್ಲೊಂದು ಪ್ರಭಾವಿ ಶಕ್ತಿಯಾಗಿ ಮೆರೆಯಬಹುದು. ಒಕ್ಕೂಟದ ವಿರುದ್ಧ ಏನೇ ವಾದಗಳಿರಲಿ, ಅದು ಸ್ಥಾಪಿತಗೊಳ್ಳುವುದು ಖಂಡಿತ. ಅದರ ಹುಟ್ಟು ಮತ್ತದರ ಬುನಾದಿ ವಾಸ್ತವ ಇವೆರಡೆ. ಅದು ಗಾಢವಾದ ಮಾನವ ಅಗತ್ಯಗಳನ್ನು ಆಧರಿಸಿದೆ. ಇದು ಕೇವಲ ಭೌಗೋಳಿಕವಾಗಿ ಒಕ್ಕೂಟವೆಂದು ಕರೆಯಲ್ಪಡದೆ, ಜನತೆಯ ಬುದ್ಧಿ, ಮನಸ್ಸು ಮತ್ತು ಹೃದಯಕ್ಕೆ ಆಪ್ತವಾದ ಒಕ್ಕೂಟವಾಗಬೇಕಿದ್ದರೆ, ಅದು ನಿಲ್ಲಬೇಕಾದುದು ಸಂಶಯದ ಮೇಲಲ್ಲ. ಒಂದು ಪಕ್ಷದ ರಾಜಕೀಯ ಲಾಭದ ಮೇಲಲ್ಲ; ಆದರೆ ಅದು ಸ್ಥಾಪನೆಯಾಗಬೇಕಾಗಿರುವುದು– ಸಹಾನುಭೂತಿ, ಸಹಮತ, ಮತ್ತು ಹೊಂದಾಣಿಕೆಯ ಮೇಲೆ. ಅದು ನಿಜವಾದ ರಾಜನೈತಿಕತೆಯ ಜೀವ ಜೀವಾಳ.

ಈ ವಿಷಯ ಅಲ್ಪಸಂಖ್ಯಾತರ ಕಡೆ ನನ್ನ ಗಮನ ಸೆಳೆಯುತ್ತದೆ. ನಿಲುವಳಿ, ರಾಷ್ಟ್ರದ ಪ್ರತಿಯೊಬ್ಬ ನಾಗರಿಕನ ಮೂಲ ಹಕ್ಕನ್ನು ಪ್ರತಿಪಾದಿಸುತ್ತದೆ. ಅಲ್ಪಸಂಖ್ಯಾತರ ಸಂಪೂರ್ಣ ಹಿತಾಸಕ್ತಿಯ ರಕ್ಷಣೆಯನ್ನು ಪ್ರತಿಪಾದಿಸುತ್ತದೆ. ಇದು ಕೇವಲ ಸಣ್ಣ ಪುಟ್ಟ ಅಲ್ಪಸಂಖ್ಯಾತರನ್ನು ಮಾತ್ರವಲ್ಲದೆ, ಜನಸಂಖ್ಯೆ ದೊಡ್ಡ ದೊಡ್ಡ ಕೋಮುಗಳನ್ನೂ ತಟ್ಟುತ್ತದೆ. ಹಿಂದೂಗಳು ಮತ್ತು ಮುಸ್ಲಿಮರು ಅವರೂ ಕೂಡ ರಾಷ್ಟ್ರದ ವಿವಿಧ ಭಾಗಗಳಲ್ಲಿ

ಅಲ್ಪಸಂಖ್ಯಾತರ ಸ್ತರಕ್ಕಿಳಿಯಬಹುದು. ಆ ಕಾರಣ, ಸಂವಿಧಾನದ ರಚನೆಯಲ್ಲಿ ಅಲ್ಪ ಸಂಖ್ಯಾತರ ಹಿತರಕ್ಷಣೆ ಬಹು ಮುಖ್ಯ ಅಂಶವಾಗಿ ಪರಿಣಮಿಸುತ್ತದೆ. ಏಕೆಂದರೆ ನಾವು ಏಕತೆಯನ್ನು ಸಾಧಿಸಬೇಕಿದ್ದರೆ, ಅಂತಹ ಐಕಮತ್ಯ, ನಾವು ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಕೈಗೊಳ್ಳುವ ಕ್ರಮಗಳಿಂದ ಲಭಿಸುತ್ತದೆ. ಪ್ರಾಂತ್ಯಗಳು ಮತ್ತು ಪ್ರಾಂತ್ಯಗಳ ಸಮೂಹಕ್ಕೆ ಸೇರಿದ ಅಲ್ಪಸಂಖ್ಯಾತರಿಗೆ, ಸಾಮಾಜಿಕ, ಆರ್ಥಿಕ, ಮತೀಯ ಮತ್ತು ಸಾಂಸ್ಕೃತಿಕ ಅಗತ್ಯಗಳ ಸಂಪೂರ್ಣ ರಕ್ಷಣೆಯಿಂದಲೆ ಅಂತಹ ಐಕಮತ್ಯ ಸಾಧ್ಯ. ತತ್‌ಪರಿಣಾಮವಾಗಿ, ಅದು ಸಭೆಯ ಸದ್ಭಾವನೆ, ಸಹಾನುಭೂತಿ, ಸದಭಿಪ್ರಾಯವನ್ನು ಅವಲಂಬಿಸುತ್ತದೆ. ನಾವು ಸರ್ವತಂತ್ರ ಸ್ವತಂತ್ರವನ್ನು ನಾವು ನಮ್ಮ ಕರ್ತವ್ಯದೊಡನೆ ಮುಖಾಮುಖಿಯಾಗಬೇಕಾದುದು, ಭಾವೋದ್ವೇಗರಹಿತರಾದ ಶಾಸಕರಂತಲ್ಲ, ಬಹು ಸಂಖ್ಯೆಯಲ್ಲಿ ನೀಡುವ ಮತದಾನದ ಮೂಲಕ, (ನಿಲುವಳಿಯನ್ನು ಅಂಗೀಕರಿಸಿ ಜಾರಿ ಮಾಡುವುದರಿಂದ) ಸಂಧಾನಶೀಲ ಮನೋಭಾವದಿಂದ ನಮ್ಮ ಕರ್ತವ್ಯವನ್ನು ನಿರ್ವಹಿಸೋಣ. ನಾವು ಕೈಗೊಳ್ಳುವ ಪ್ರತಿ ನಿರ್ಧಾರವೂ ಯಾರ ಮೇಲೆ ಪರಿಣಾಮ ಬೀರುತ್ತದೆಯೋ ಅವರ ಸಮ್ಮತಿಯನ್ನು ಪಡೆಯುವುದು ಸಂಧಾನಶೀಲರ ಗುಣ. ಒಮ್ಮೆ ಆ ಪರಿಪಾಠ ರೂಢಿಗತವಾದರೆ, ಮುಂದಿನ ಕೆಲಸ ಸುಲಭ. ಈ ರಾಷ್ಟ್ರದ ಎಲ್ಲ ವರ್ಗದ ಜನರ ಸಾಮಾನ್ಯ ಸಮ್ಮತವನ್ನು ಪಡೆಯಲು, ನಮ್ಮಲ್ಲಿ ವಿಧಾನಗಳಿವೆ. ಸಾಮಾನ್ಯ ಪ್ರಯತ್ನ ನೈಜ ಒಡಂಬಡಿಕೆಯ ಮನೋಭಾವ ಸರ್ವಸಮ್ಮತವಾದ ಒಳಿತನ್ನು ಸಾಧಿಸೋಣ. (ಹರ್ಷಘೋಷ)

**ಮಾನ್ಯ ಅಧ್ಯಕ್ಷರು :** ರೈಟ್ ಆನರಬಲ್ ಡಾ. ಜಯಕರ್ ಅವರು ತಮ್ಮ ತಿದ್ದುಪಡಿಯ ಬಗ್ಗೆ ಮಾತನಾಡಲು ಬಯಸುತ್ತಾರೆಂದು ತಿಳಿಯಿತು. ಅವರು ಈಗ ಮಾತನಾಡಬಹುದು.

**ರೈಟ್ ಆನರಬಲ್ ಡಾ. ಎಂ.ಆರ್. ಜಯಕರ್** (ಬಾಂಬೆ : ಸಾಮಾನ್ಯ) :

ಮಾನ್ಯರೆ, ಈ ಚರ್ಚೆಯಲ್ಲಿ, ಪ್ರಾರಂಭಕ್ಕೆ ನಾನೊಂದು ತಿದ್ದುಪಡಿಯನ್ನು ಪ್ರಸ್ತಾವಿಸಿದ್ದೆ. ಅದಕ್ಕೆ ಸಂಬಂಧಿಸಿದಂತೆ, ಒಂದು ಪುಟ್ಟ ಹೇಳಿಕೆ ನೀಡಲು ಕೆಲ ನಿಮಿಷಗಳ ಕಾಲಾವಕಾಶ ಮಾಡಿಕೊಟ್ಟ ತಮಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ತಿದ್ದುಪಡಿ ಉಕ್ತವಾದದ್ದು ಕೆಲ ಕಾರಣಗಳಿಂದ ಎಂಬುದು ಈ ಸಭೆಗೆ ನೆನಪಿದೆ. ಮುಖ್ಯವಾಗಿ, ಮುಸ್ಲಿಮ್ ಲೀಗ್ ಮತ್ತು ಭಾರತೀಯ ರಾಜ್ಯಗಳು, ನಮ್ಮ ಕಾರ್ಯಕಲಾಪಗಳಲ್ಲಿ ತೊಡಗಲು ಅನುವಾಗಲೆಂಬ ಕಾರಣಕ್ಕಾಗಿ ಮಾಡಲಾಯಿತು. ಮುಸ್ಲಿಮ್ ಲೀಗ್‌ಗೆ ಸಂಬಂಧಿಸಿದಂತೆ, ನನ್ನ ತಿದ್ದುಪಡಿಯಲ್ಲಿ ಉಕ್ತವಾದುದನ್ನು ಈ ಸಭೆ ಕಾರ್ಯಸಾಧ್ಯವಾಗುವಂತೆ ಒಪ್ಪಿಕೊಂಡಿತು. ಸಭೆ ತನ್ನ ಕಾರ್ಯಕಲಾಪಗಳನ್ನು ಜನವರಿ ೨೦ಕ್ಕೆ ಮುಂದೂಡಿತು. ಮುಂದುವರೆದು ಮಹಾಪ್ರಭುಗಳ ಸರ್ಕಾರ ಡಿಸೆಂಬರ್ ೬ರಂದು ನೀಡಿದ ಹೇಳಿಕೆಗೆ ಅಂಗೀಕಾರ ಇವೆಲ್ಲ ಮಾಡಿದರೂ, ಮುಸ್ಲಿಮ್‌ಲೀಗ್ ಇನ್ನೂ ಇಲ್ಲಿಗೆ ಬಂದಿಲ್ಲ. ಅವರು ಬರುತ್ತಾರೋ ಇಲ್ಲವೋ ಯಾರಿಗೂ ಗೊತ್ತಿಲ್ಲ. ಅವರು ಜನವರಿ ೨೯ರ ವರೆಗೂ ತಮ್ಮ ಇರಾದೆಯನ್ನು ಹಿಡಿದಿಟ್ಟುಕೊಂಡಿದ್ದಾರೆ. ಅದಕ್ಕೆ ೯ ದಿನಗಳ ಮುಂಚೆ ನಾವಿಲ್ಲಿ ಸಭೆ ಸೇರುತ್ತಿದ್ದೇವೆಂಬುದು ಅವರಿಗೆ ಚೆನ್ನಾಗಿ ಗೊತ್ತು. ನನ್ನ ಭಾಷಣದಲ್ಲಿ ಒಂದು ಹೊಂದಾಣಿಕೆಯ ಸೂತ್ರವನ್ನು ಸಲಹೆ ಮಾಡಿದೆ. ಅದೆಂದರೆ ಕ್ಯಾಬಿನೆಟ್ ಮಿಷನ್‌ನ ಹೇಳಿಕೆಯ ೧೯ನೇ ಖಂಡಿಕೆಯ ೬ನೇ ವಾಕ್ಯಖಂಡದಂತೆ, ವಿವಿಧ ವರ್ಗಗಳು ಸೇರಿ, ತಮ್ಮ ಸಂವಿಧಾನವನ್ನು ರಚಿಸಿದ ನಂತರ, ಒಂದು ಹಂತಕ್ಕೆ ತಲುಪಿ ಈ ಸಭೆ ಇನ್ನು ಕಾಯಲು ಬಯಸದಿದ್ದಲ್ಲಿ, ಕೊನೆಯ ಪಕ್ಷ ನಮ್ಮ ಮುಂದಿನ ಅಧಿವೇಶನದ ದಿನ ಎಂದರೆ ಜನವರಿ ೨೦ರ ವರೆಗಾದರೂ ಕಾಯಬಹುದು. ಏಕೆಂದರೆ, ಆ ಹಂತದ ವ್ಯವಹಾರಗಳಿಗೆ ಪ್ರತಿಕ್ರಿಯಿಸಲು ತಡವಾಗಿ, ಇನ್ನೊಂದು ಹಂತ ತಲುಪಬೇಕಾಗುತ್ತದೆ. ಅಲ್ಲಿಯವರೆಗೆ ಮುಸ್ಲಿಮ್‌ಲೀಗ್ ಪಕ್ಷಕ್ಕೆ ಯೋಚಿಸಿ ನಿರ್ಧಾರ ತೆಗೆದುಕೊಳ್ಳಲು ಸಾಕಷ್ಟು ಕಾಲಾವಕಾಶ ಸಿಗುತ್ತೆ. ಅದನ್ನೂ ಈ ಸಭೆ ಒಪ್ಪಿಕೊಂಡಿದೆ. ಇನ್ನು ಕಾಲಾವಕಾಶ ಕೋರಿ, ಒತ್ತಾಯಿಸುವುದು, ಗೌರವಯುತವಲ್ಲ ಎಂದು ಮನಗಂಡು ನಾನು ನನ್ನ ತಿದ್ದುಪಡಿಗೆ ಒತ್ತಡ ಹೇರಲಾರೆ. (ಘೋಷಾನುಮೋದನೆ). ಹೀಗೆಂದಾಗ ನನ್ನ ತಿದ್ದುಪಡಿ ಕಾರಣವಾದ ಆಲೋಚನೆಗಳಿಂದ

ಹಿಂಸರಿಯುತ್ತಿದ್ದೇನೆಂದಲ್ಲ. ನಾನು ಖಡಾಖಂಡಿತವಾಗಿ ಮುಂದಿಟ್ಟ ತಿದ್ದುಪಡಿಯನ್ನು ಸಭೆ ಒಪ್ಪಿತು. ಅಲ್ಲಿಗೆ ಕರಾರು ಪೂರ್ಣಗೊಂಡಂತೆ. ಆದುದರಿಂದ ನಾನು ನನ್ನ ತಿದ್ದುಪಡಿಯ ಮೇಲೆ ಒತ್ತಡ ಹೇರಲಾರೆ. ಹಾಗೆ ಮಾಡುವಾಗ, ಸದನದ ಮುಂದೆ ನನ್ನ ಕೆಲ ಆಲೋಚನೆಗಳನ್ನು ನಿವೇದಿಸಲು ಸಭೆಯ ಅನುಮತಿ ಬೇಡುತ್ತೇನೆ. ಇದು ಸಭೆಗೆ ಒಪ್ಪಿಗೆಯಾದಲ್ಲಿ, ಸಭೆ ತನಗೆ ಯುಕ್ತವೆನಿಸಿದ ಕ್ರಮವನ್ನು ತನ್ನ ಸ್ವನಿರ್ಧಾರದ ಮೇಲೆ ತೆಗೆದುಕೊಳ್ಳಬಹುದು. ಈ ಆಲೋಚನೆಗಳು ಕೆಲವೇ ಕೆಲವು. ತಮ್ಮ ಅವಗಾಹನೆಗೆ ತರಲು ಕಿಂಚಿತ್ ಕಾಲಾವಕಾಶ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು** : ರೈಟ್ ಆನರಬಲ್ ಸದಸ್ಯರು, ಈಗ ಮಂಡಿಸುತ್ತಿರುವುದು ಹೊಸ ಪ್ರಸ್ತಾವವೇ?

**ರೈಟ್ ಆನರಬಲ್ ಡಾ. ಎಂ.ಬಿ. ಜಯಕರ್** : ಮಾನ್ಯರೆ, ನಾನು ಹೊಸ ಪ್ರಸ್ತಾವವನ್ನೇನೂ ಮುಂದಿಡುತ್ತಿಲ್ಲ. ಈ ಸಭೆಯ ಮುಂದಿರುವ ನಿಲುವಳಿಯನ್ನು ಪರ್ಯಾಲೋಚಿಸುವಾಗ, ನಡುವೆ ಈ ಆಲೋಚನೆಗಳನ್ನೂ......

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) :

ಮಾನ್ಯರೆ, ಡಾ. ಜಯಕರ್ ಅವರು, ತಮ್ಮ ತಿದ್ದುಪಡಿಯನ್ನು ವಾಪಸು ಪಡೆದಿರುವರೆಂದು ನಾನು ಭಾವಿಸಿದ್ದೇನೆ. ತಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡ ನಂತರ, ಮತ್ತೆ ಹೊಸದಾಗಿ, ಭಾಷಣ ಮಾಡುವುದು ಸೂಕ್ತವಲ್ಲ. ಕ್ರಮಬದ್ಧವೂ ಅಲ್ಲ. ಅವರು ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ಪಡೆದಾಗಿದೆ. ಕಳೆದ ಅಧಿವೇಶನದಲ್ಲಿ ಇಡೀ ದಿನ ಮಾತನಾಡಲು ಅವರಿಗೆ ಅವಕಾಶ ಸಿಕ್ಕಿತ್ತು. ಈಗ ಅವರು ತಮ್ಮ ತಿದ್ದುಪಡಿಯನ್ನು ಹಿಂಪಡೆದ ನಂತರ (ಧ್ವನಿಗಳು : ದಯವಿಟ್ಟು ಧ್ವನಿವರ್ಧಕದ ಕಡೆ ಹೋಗಿ).... ಡಾ. ಜಯಕರ್ ಅವರು ತಮ್ಮ ತಿದ್ದುಪಡಿಯನ್ನು ಮರಳಿ ಪಡೆದಿದ್ದಾರೆಂದು ನಾನು ಹೇಳುತ್ತಿದ್ದೆ. ತಿದ್ದುಪಡಿಯನ್ನು ಮಂಡಿಸಿದ ಒಬ್ಬ ವ್ಯಕ್ತಿ ಅದನ್ನು ಹಿಂಪಡೆಯಲು ಬಯಸಿದಲ್ಲಿ ಅದನ್ನು ತಿಳಿಸಬೇಕಿದ್ದಲ್ಲಿ ಅವರಿಗೆ ಮಾತನಾಡಲು ಅನುಮತಿ ನೀಡಬಹುದು; ವಾಪಸ್ಸು ಪಡೆದ ನಂತರ, ಅವರು ಇನ್ನಷ್ಟು ಗೋಜಲಿಗೆ ಎಡೆಗೊಡಬಾರದು. ಈ ಹಂತದಲ್ಲಿ ಯಾವುದೋ ಹೊಸ ಪ್ರಸ್ತಾವವನ್ನು ಅಥವಾ ಬೇರಾವ ರೀತಿಯ ತಿದ್ದುಪಡಿಯನ್ನೋ ಪ್ರಸ್ತಾವಿಸಬಾರದು. ಅವರು ಒಂದು ತಿದ್ದುಪಡಿಯನ್ನು ಸೂಕ್ತ ರೀತಿಯಲ್ಲಿ ಪ್ರಸ್ತಾವಿಸುವರೋ ಅಲ್ಲವೋ ಅದು ಬೇರೆ ವಿಷಯ; ಅದರಿಂದೇನೂ ವ್ಯತ್ಯಾಸವಾಗದು. ಯಾವುದೇ ಸಂದರ್ಭದಲ್ಲೂ ಅವರು ಹೊಸತೊಂದು ಸಲಹೆ ನೀಡುವಾಗ, ಅದನ್ನು ತಿದ್ದುಪಡಿ ಎಂಬ ಹೆಸರಿನಲ್ಲಿ ಮಂಡಿಸಲು ಹಿಂತೆಗೆದರೂ ಸಹ, ಪರಿಸ್ಥಿತಿ ಪರಿಹರಿಸಲು ಸಾಧ್ಯವಾಗದಂತೆ ಬಿಗಡಾಯಿಸುತ್ತದೆ. ಅದು ಯಾವುದೇ ರೂಪದಲ್ಲಿದ್ದರೂ, ಕೊನೆಗೆ ಉಳಿಯುವುದು ಅದೇ. ಆ ಘಟ್ಟವನ್ನು ನಾವು ತಲುಪಿ ಮುನ್ನಡೆದಿದ್ದೇವೆ. ಹಾಗಾಗಿ, ಟೀಕೆ ಅಥವಾ ಅನಿಸಿಕೆ, ಇಂತಹ ಯಾವುದೇ ರೂಪದಲ್ಲಾಗಲಿ, ಹೊಸ ಪ್ರಸ್ತಾವವನ್ನು ಮಂಡಿಸಲು ಅವರಿಗೆ ಅವಕಾಶವಿಲ್ಲವೆಂದು ನಾನು ನಿವೇದಿಸುತ್ತಿದ್ದೇನೆ. ಅವರು ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಂಡಿದ್ದಾಗಿದೆ; ಅವರಿಗೆ ನೀಡಿದ ವಿಶೇಷ ಅವಕಾಶವನ್ನೂ ಬಳಸಿಕೊಂಡಿದ್ದಾರೆ. ಈಗ ಅವರು ತಮ್ಮ ಸ್ವಸ್ಥಾನದಲ್ಲಿ ಆಸೀನರಾಗಬೇಕೆಂದು ಪ್ರಾರ್ಥನೆ. (ಒಂದು ಧ್ವನಿ : ಹೊಸ ಪ್ರಸ್ತಾವ ಏನಾದರೂ ಇದೆಯೇ?)

**ಮಾನ್ಯ ಅಧ್ಯಕ್ಷರು** : ಯಾವುದೇ ಹೊಸ ಆಲೋಚನೆಗೆ ಈ ಹಂತದಲ್ಲಿ ಅವಕಾಶವಿಲ್ಲ. ಡಾ. ಜಯಕರ್ ಅವರು ತಮ್ಮ ತಿದ್ದುಪಡಿಯನ್ನು ಹಿಂಪಡೆಯಲು ಮಾತ್ರ ನಾನು ಅವಕಾಶ ಕೊಟ್ಟೆ.

**ರೈಟ್ ಆನರಬಲ್ ಡಾ. ಎಂ.ಬಿ. ಜಯಕರ್** : ನನ್ನ ತಿದ್ದುಪಡಿಯನ್ನು ಹಿಂಪಡೆಯುವಾಗ, ಸಭೆಯ ಗಮನಕ್ಕೆ ಕೆಲ ಆಲೋಚನೆಗಳನ್ನು ತರಲು ನನಗೆ ಹಕ್ಕಿದೆ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಬೇರಾರ್ : ಸಾಮಾನ್ಯ) :

ಗೌರವಾನ್ವಿತ ಸದಸ್ಯರು ತಮ್ಮ ಹೇಳಿಕೆಯನ್ನು ಪೂರ್ಣಗೊಳಿಸಲು ಅವಕಾಶ ನೀಡಬೇಕೆಂದು ನಾನು ಸೂಚಿಸಲು ಬಯಸುತ್ತೇನೆ (ಘೋಷಾನುಮೋದನೆ). ಕೇವಲ ತಮ್ಮ ತಿದ್ದುಪಡಿಯನ್ನು ವಾಪಸು ಪಡೆದಿರುವುದಾಗಿ ಅವರು ಹೇಳಿದ ಮಾತ್ರಕ್ಕೆ, ಅವರು ಬೇರೇನೂ ಹೇಳಲಾಗದೆಂದು ತಡೆಯಲಾಗದು. ಅಧ್ಯಕ್ಷರು ಅವರಿಗೆ

ಅವಕಾಶ ನೀಡಿದ್ದು, ತಮ್ಮ ಹೇಳಿಕೆಯನ್ನು ಪ್ರಸ್ತುತಪಡಿಸಲೆಂದು. ಅವರು ಹೊಸ ಪ್ರಸ್ತಾವವೇನನ್ನೂ ಮಂಡಿಸುತ್ತಿಲ್ಲ. ಅವರು ತಮ್ಮ ಹೇಳಿಕೆಯನ್ನು ಪೂರ್ಣಗೊಳಿಸಲು ಅವರಿಗೆ ಹಕ್ಕಿದೆ. ಒಂದು ವೇಳೆ, ಅವರು, ತಿದ್ದುಪಡಿಯ ವಿಷಯಕ್ಕೆ ಮೊದಲೆ ಹೊಸ ಆಲೋಚನೆಗಳನ್ನು ಪ್ರಸ್ತಾಪಿಸಿದ್ದರೆ ತಿದ್ದುಪಡಿಯನ್ನು ಕೊನೆಗೆ ಹಿಂಪಡೆದಿದ್ದರೆ ಈಗಷ್ಟೆ ಅವರನ್ನು ವಿರೋಧಿಸಿದ ಗೌರವಾನ್ವಿತ ಸದಸ್ಯರಿಗೆ ಅದು ಕ್ರಮಬದ್ಧ ಎನಿಸುತ್ತಿತ್ತೆ? ಆದುದರಿಂದ, ಡಾ. ಜಯಕರ್ ಅವರು ತಿದ್ದುಪಡಿಯನ್ನು ವಾಪಸ್ಸು ಪಡೆಯುತ್ತಿರುವುದಾಗಿ ಹೇಳಿದ ಮಾತ್ರಕ್ಕೆ ಅವರನ್ನು ಹೇಳಿಕೆ ಪೂರ್ಣಗೊಳಿಸದಂತೆ ತಡೆಯಲಾಗದು. ಅವರು ತಮ್ಮ ಅನಿಸಿಕೆಗಳನ್ನು ನಿವೇದಿಸದಂತೆ ತಡೆಯೊಡ್ಡಲಾಗದು. ನಾವು ಅವರನ್ನು ಕೇಳಲು ಸಿದ್ಧರಿದ್ದೇವೆ. ಹಾಗಾಗಿ ಅವರಿಗೆ ಮಾತನಾಡುವ ಸ್ವಾತಂತ್ರ್ಯವಿದೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಬೆರಾರ್ : ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ, ನನಗೆ ಮೊದಲು ಮಾತನಾಡಿದ ಭಾಷಣಕಾರರು ತಿಳಿಸಿದುದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿದೆ. ತಾವು ಎರಡು ಸಲಹೆಗಳನ್ನು ಸೂಚಿಸುವುದಾಗಿ, ಡಾ. ಜಯಕರ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಸ್ವಾಮಿ, ತಾವು ಅವರಿಗೆ ಅವಕಾಶ ನೀಡಿದರೆ, ಆ ಸಲಹೆಗಳಿಗೆ ಪ್ರತಿಕ್ರಿಯಿಸಲು, ಮತ್ತು ಅವುಗಳ ಯೋಗ್ಯತೆಯ ಬಗ್ಗೆ ಮಾತನಾಡಲು, ಇತರ ಸದಸ್ಯರಿಗೆ ತಾವು ಅವಕಾಶ ಕೊಡಲೆಬೇಕಾಗುತ್ತದೆ. ಮಾನ್ಯ ಪಂತ್ ಅವರು, ಸ್ಪಷ್ಟವಾಗಿ ಹೇಳಿದಂತೆ, ಅದು ಈ ಸದನಕ್ಕೆ ಇರಿಸುಮುರಿಸು ತರುತ್ತದೆ. ಡಾ. ಜಯಕರ್ ಅವರು ಪ್ರತ್ಯೇಕವಾಗಿ, ಎರಡು ಸಲಹೆಗಳನ್ನು ಸೂಚಿಸುವುದಾಗಿ ತಿಳಿಸಿದ್ದಾರೆ. ಅವು ಏನೆಂಬುದು ನನಗೆ ಗೊತ್ತಿಲ್ಲ. ಅವು ಒಳ್ಳೆಯದಿರಬಹುದು, ಕೆಟ್ಟವೂ ಇರಬಹುದು. ಆ ವಿಷಯದ ಬಗ್ಗೆ ಇತರ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡದೆ, ಆ ಸಲಹೆ ಸೂಚನೆಗಳನ್ನು ದಾಖಲಿಸಬಾರದು. ಹಾಗಾಗಿ, ನಾನು ಮಾನ್ಯ ಪಂತ್ ಅವರ ಸಲಹೆಯನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಈ ವಿಷಯದ ಬಗ್ಗೆ, ಚರ್ಚೆ ಮುಂದುವರೆಸುವ ಅಗತ್ಯವಿಲ್ಲವೆನಿಸುತ್ತದೆ. ಡಾ. ಜಯಕರ್ ಅವರು ತಮಗೆ ನೀಡಿದ ಅವಕಾಶವನ್ನು, ಸಂಪೂರ್ಣ ಬಳಸಿಕೊಂಡಿದ್ದಾರೆನಿಸುತ್ತದೆ. ಹಾಗಾಗಿ ತಮ್ಮ ತಿದ್ದುಪಡಿಯ ಬಗ್ಗೆ ಹೇಳಿಕೆ ನೀಡುವ ಹಕ್ಕನ್ನು ಸಂಪೂರ್ಣ ಬಳಸಿಕೊಂಡಿದ್ದಾರೆ.

ಈಗ, ತಿದ್ದುಪಡಿಯ ವಾಪಸಾತಿಯ ವಿಷಯವನ್ನು ಸದನದ ತೀರ್ಮಾನಕ್ಕೆ ಬಿಡುತ್ತೇವೆ.

ಸಭೆಯ ಅನುಮತಿಯ ಮೇರೆಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಶ್ರೀ ಸಿ.ಎಂ. ಪೂಣಚ್ಚ : (ಕೊಡಗು)** :

ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾಪಿಸಿದ ನಿಲುವಳಿಗೆ, ನನ್ನ ಹೃತ್ಪೂರ್ವಕ ಬೆಂಬಲವನ್ನು ವ್ಯಕ್ತ ಪಡಿಸಲು ಬಯಸುತ್ತೇನೆ. ಹಾಗೆ ಬೆಂಬಲ ವ್ಯಕ್ತ ಪಡಿಸುವಾಗ, ಸಭೆಯ ಹೊರಗೆ ನಡೆದ ಚರ್ಚೆಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ನಮ್ಮ ಮುಂದಿರುವ ಕರ್ತವ್ಯಗಳನ್ನು ನಿಭಾಯಿಸುವ ಮೊದಲೆ, ಈ ತೆರನಾದ ನಿಲುವಳಿಯನ್ನು ಅಂಗೀಕರಿಸುವ ಸಭೆಯ ಕ್ಷಮತೆಯನ್ನು ಪ್ರಶ್ನಿಸಲಾಗುತ್ತಿದೆ. ನಾವಿಲ್ಲಿ ಸಭೆ ಸೇರಿರುವುದು ಯಾವ ಧ್ಯೇಯೋದ್ದೇಶಗಳಿಗಾಗಿ ಎಂಬುದನ್ನು ನಿರೂಪಿಸುವ, ಒಂದು ನಿಲುವಳಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾದುದು ಅಗತ್ಯವೆನಿಸುತ್ತದೆ. ರಾಜ್ಯಪತ್ರದಲ್ಲಿ ತಿಳಿಸಿರುವುದಕ್ಕಿಂತ ಭಿನ್ನವಾಗಿ ನಮ್ಮ ಈ ಕ್ರಮ ಭಿನ್ನವಾಗಿಲ್ಲ ಎಂದುಕೊಳ್ಳುತ್ತೇನೆ. ನಾವು ನಿಲುವಳಿಯನ್ನು ಅಂಗೀಕರಿಸುವುದರ ಮುಖೇನ, ೧೯೪೬ರ ಮೇ ೧೬ರ ರಾಜ್ಯಪತ್ರದ ನೀತಿ ನಿಯಮಗಳನ್ನು ಅಂತೆಯೆ ಪಾಲಿಸುತ್ತಿದ್ದೇವೆ. ಅದಕ್ಕಿಂತ ಅತೀತವಾಗಿ ನಾವೇನೂ ಮಾಡುತ್ತಿಲ್ಲ.

ಮಿಕ್ಕ ಅಂಶಗಳ ಬಗ್ಗೆ ಮಾತನಾಡುವುದಾದರೆ, ಭಾರತೀಯರಿಗೆ ವಹಿಸಿಕೊಡಲಿರುವ ಸಾರ್ವಭೌಮ ಹಕ್ಕುಗಳನ್ನು, ಸದನದ ಗಮನಕ್ಕೆ ತರಲು ಬಯಸುತ್ತೇನೆ. ಈ ವಿಷಯದಲ್ಲಿ ಒಂದಿಷ್ಟು ಭಿನ್ನಾಭಿಪ್ರಾಯಗಳಿವೆ. ವಿಶೇಷತಃ, ಭಾರತೀಯ ರಾಜ್ಯಗಳಿಗೆ ಸಾರ್ವಭೌಮ ಹಕ್ಕುಗಳ ಪ್ರದಾನ ಮಾಡುವ ಬಗ್ಗೆ ತಾಕಲಾಟವಿದೆ. ಬ್ರಿಟಿಷರ ಕಾಲದಲ್ಲಿ, ಬ್ರಿಟಿಷ್ ಇಂಡಿಯಾದ ಜನತೆಗೆ ಸಾರ್ವಭೌಮ ಹಕ್ಕುಗಳನ್ನು ವಹಿಸಿಕೊಟ್ಟಿರುವುದನ್ನು

ಅವರು ಆಕ್ಷೇಪಿಸಿಲ್ಲ. ಹೀಗಿರುವಾಗ, ಭಾರತೀಯ ರಾಜ್ಯಗಳಿಗೆ ಸಾರ್ವಭೌಮ ಹಕ್ಕುಗಳನ್ನು ನೀಡುವ ಬಗ್ಗೆ ವಾದಕ್ಕೆ ಆಸ್ಪದವಿಲ್ಲ.

ಮಾನ್ಯರೆ, ಈ ರಾಷ್ಟ್ರದಲ್ಲಿ ಮಹಾರಾಜರು ಆಳುತ್ತಿರುವ ರಾಜ್ಯಗಳಿವೆ. ರಾಜರೇ ಇಲ್ಲದೆ ನಿಯಮಗಳನ್ನು ಜಾರಿಗೊಳಿಸುತ್ತಿರುವ ರಾಜ್ಯಗಳೂ ಇವೆ. ಇದೆಲ್ಲ ಐತಿಹಾಸಿಕ ಸ್ಪಷ್ಟೋಕ್ತಿ, ಆದರೆ ಜನರೇ ಇಲ್ಲದೆ ಅರಸರು ಆಳಲಾಗದು. ಆದುದರಿಂದ ಜನರ ಸಾರ್ವಭೌಮತ್ವ ಎಂಬುದು, ಮಾನವ ಜನಾಂಗದಲ್ಲಿ ಅಂಗೀಕೃತ ವಾಸ್ತವವೇ ಹೊರತಾಗಿ, ಈ ತೆರನಾದ ನಿಲುವಳಿಯಿಂದಲೆ ಅದು ನಿರೂಪಿತವಾಗುವುದಿಲ್ಲ. ಇತಿಹಾಸ ಅದನ್ನು ಈಗಾಗಲೇ ನಿರೂಪಿಸಿದೆ. ಜನರೇ ರಾಜ್ಯದ ಒಡೆಯರು. ಅವರೇ ರಾಜರಿಗೂ, ಆಳುವವರಿಗೆ ಸಾರ್ವಭೌಮತ್ವವನ್ನು ಕೊಡಮಾಡುವವರು.

ಅಲ್ಪಸಂಖ್ಯಾತರ ಬಗ್ಗೆ ಬಹಳಷ್ಟು ಮಾತನಾಡಿಯಾಗಿದೆ. ನಾವು ಲಕ್ಷೋಪಲಕ್ಷ ಜನರಲ್ಲಿ ಅಲ್ಪಸಂಖ್ಯಾತರು ಕೇಂದ್ರದಲ್ಲೊಂದು ಬಿಂದುವಿನಂತೆ ಎಂದು ಹಕ್ಕು ಸ್ಥಾಪಿಸುವ ಬದಲು, ಮುಂದೆ ಕೋಟ್ಯಂತರ ಅಲ್ಪಸಂಖ್ಯಾತ ಜೀವಿಗಳು ಇನ್ನೂ ಹುಟ್ಟಲಿವೆ ಎಂಬುದನ್ನು ಪರಿಶೀಲಿಸೋಣ. ನಾವಿಲ್ಲಿರುವುದು ಕೇವಲ ವರ್ತಮಾನದ ಪೀಳಿಗೆಗಾಗಿ ಸಂವಿಧಾನ ರಚಿಸಲೆಂದಲ್ಲ. ಭಾವೀ ಪೀಳಿಗೆಗಾಗಿಯೂ ಸಂವಿಧಾನ ರಚಿಸಲಿದ್ದೇವೆ. ಆದುದರಿಂದ ನಮಗೂ, ನಮ್ಮ ಮುಂದಿನ ಪೀಳಿಗೆಗೂ, ಸಂವಿಧಾನವನ್ನು ರಚಿಸುವ ಕರ್ತವ್ಯ ನಮ್ಮ ಮೇಲೆ ಹೆಚ್ಚಿನ ಹೊಣೆ ವಹಿಸುತ್ತದೆ. ನಮ್ಮ ಉದ್ದೇಶಗಳು ನಿರ್ದಿಷ್ಟವಾಗಿರಬೇಕೆಂಬ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸುತ್ತದೆ. ಆದುದರಿಂದ ನಮ್ಮ ಇತಿಮಿತಿಗಳ ಒಳಗೆ, ಕ್ಷಮತೆಯೊಳಗೆ, ನಮ್ಮ ವ್ಯಾಪ್ತಿಯೊಳಗೆ, ಅಧಿಕಾರದ ಗಡಿಯೊಳಗೆ, ನಾವು ಕಾರ್ಯಗತಗೊಳಿಸಬೇಕಿರುವ ಧ್ಯೇಯೋದ್ದೇಶವನ್ನು ವಿಶದಪಡಿಸಬೇಕು. ಇದು ಕೇವಲ ನಮಗೆ ಮತ್ತು ನಮ್ಮ ಲಕ್ಷಾಂತರ ಬಡಜನತೆಗಲ್ಲ, ಇಡೀ ವಿಶ್ವಕ್ಕಾಗಿ ನಡೆಯಬೇಕಾದ ಕರ್ತವ್ಯ. ನಾವಿಲ್ಲಿ ಕಲೆತಿರುವುದೇಕೆ, ನಮ್ಮ ಗುರಿಯೇನೆಂಬುದು ಜಗತ್ತಿಗೆ ತಿಳಿಯಬೇಕು. ಈ ನಿಲುವಳಿಯು ನಮ್ಮ ಹಂಬಲವನ್ನು ಬಿಂಬಿಸುತ್ತದೆ. ಹಾಗಾಗಿ, ಮಾನ್ಯರೆ, ನಾನು ಹೃತ್ಪೂರ್ವಕವಾಗಿ ನಿಲುವಳಿಯನ್ನು ಬೆಂಬಲಿಸುತ್ತೇನೆ.

**ಶ್ರೀ ವಿಶ್ವಂಭರ ಧಯಾಳ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) :

*ಮಾನ್ಯ ಅಧ್ಯಕ್ಷರೆ ಮತ್ತು ಸ್ನೇಹಿತರೆ,

ನಾವು ಸಂವಿಧಾನವನ್ನು ರಚಿಸುವಾಗ, ಅದು ಯಾವ ಮೂಲತತ್ತ್ವಗಳನ್ನು ಆಧರಿಸಿರಬೇಕೆಂಬುದರ ಬಗ್ಗೆ ಚರ್ಚಿಸುವುದು ಸಹಜವಷ್ಟೆ. ಸ್ವತಂತ್ರವಾದ, ಮುಕ್ತರಾಷ್ಟ್ರದ ಸಂವಿಧಾನದ ತಳಹದಿ ಯಾವುದೆಂಬುದನ್ನು ಚರ್ಚಿಸುವುದು ಸ್ವಾಭಾವಿಕ. ಆದುದರಿಂದ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಪ್ರಸ್ತಾವಿಸಿದ ಈ ನಿಲುವಳಿಯನ್ನು, ಅದರ ಮೂಲತತ್ತ್ವಗಳಿಗಾಗಿ ಬೆಂಬಲಿಸುತ್ತೇನೆ. ನಿಲುವಳಿಯ ಕೆಲ ಮುಖ್ಯ ವಾಕ್ಯಖಂಡಗಳತ್ತ ತಮ್ಮ ಗಮನ ಸೆಳೆಯಲು ಬಯಸುತ್ತೇನೆ. ಮಿಕ್ಕ ವಿಷಯಗಳಲ್ಲದೆ, ನಿಲುವಳಿಯ ೪ ಮತ್ತು ೫ನೇ ಖಂಡಿಕೆಗಳು, ಮೂಲತತ್ತ್ವಗಳನ್ನು ಒಳಗೊಂಡಿವೆ. ಅವುಗಳಿಗೆ ಸಂಬಂಧಿಸಿದಂತೆ, ನನ್ನ ಸಂಪೂರ್ಣ ಸಹಮತವಿದೆ. ಆದರೆ, ಇವು ಕೇವಲ ನಮ್ಮ ಸಂವಿಧಾನಗಳಲ್ಲಿ ಮಾತ್ರವಲ್ಲದೆ, ಬಹುತೇಕ ಎಲ್ಲ ರಾಷ್ಟ್ರಗಳ ಸಂವಿಧಾನಗಳಲ್ಲೂ ವ್ಯಕ್ತವಾಗಿವೆ; ಮತ್ತು ಅಂಗೀಕೃತವಾಗಿವೆ. ವಿವಿಧ ರಾಷ್ಟ್ರಗಳ ಸಂವಿಧಾನಗಳು ಈ ಮೂಲತತ್ತ್ವಗಳನ್ನು ಒಳಗೊಂಡಿದ್ದರೂ, ಅವರವರ ಸಂವಿಧಾನಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ, ಆಯಾ ರಾಷ್ಟ್ರಗಳ ರಾಜಕಾರಣಿಗಳು ಘೋಷಿಸುತ್ತಿದ್ದರೂ ಸಹ, ನಾವು ಕಂಡಂತೆ ನಿಯಮಗಳ ಪಾಲನೆಯಾಗುತ್ತಲೆ ಇಲ್ಲ. ಇಂಗ್ಲೆಂಡ್, ಫ್ರಾನ್ಸ್, ಅಮೆರಿಕ ಮತ್ತು ನೆದರ್‌ಲೆಂಡ್ಸ್‌ನ ಸಂವಿಧಾನಗಳನ್ನು ನೋಡಿದಾಗ ಅಥವಾ ಅವುಗಳ ರಾಜಕಾರಣಿಗಳು ಮತ್ತು ಆಡಳಿತಗಾರರ ಘೋಷಣೆಗಳನ್ನು ಪರಾಮರ್ಶಿಸಿದಾಗ, ನಿಯಮಗಳು ಒಂದಲ್ಲೊಂದು ಬಗೆಯಲ್ಲಿ ಸ್ವೀಕೃತವಾಗಿವೆಯೆಂಬುದು ತಿಳಿದುಬರುತ್ತದೆ. ಇಡೀ ಏಷ್ಯಾ, ಇಂಡೋ ಚೈನಾ, ಜಾವಾ, ಬರ್ಮಾ ಮತ್ತು ಭಾರತದಲ್ಲಿ, ಐರೋಪ್ಯ ಸಾಮ್ರಾಜ್ಯಶಾಹಿ ಆಡಳಿತದಲ್ಲಿ ನಿಯಮ ಪಾಲನೆಯನ್ನು ಲಕ್ಷ್ಯದಲ್ಲೆ ಇಟ್ಟಿಲ್ಲ.

ಅವೆಲ್ಲ ಸಂವಿಧಾನಗಳು ಆಯಾ ಪ್ರಾಂತ್ಯಗಳಿಗೆ ಸಲ್ಲುತ್ತವೆಯಾದರೂ ಅವನ್ನು ಪಾಲಿಸುತ್ತಿಲ್ಲ. ಆದುದರಿಂದ ಅವುಗಳನ್ನು ಅನುಷ್ಠಾನಕ್ಕೆ ತರುವುದು ಹೇಗೆಂಬುದನ್ನು ನಾವು ಪರಿಶೀಲಿಸಬೇಕು. ಇದು ನಮಗೆ ಬಹು ಮುಖ್ಯವಾದ ನಿಲುವಳಿಯಾಗುತ್ತದೆ.

ನಾನು ಹಿಂದೆ ಹೇಳಿದಂತೆ, ಮೂರು ಕಂಡಿಕೆಗಳ ಕಡೆ ತಮ್ಮ ವಿಶೇಷ ಗಮನವನ್ನು ಸೆಳೆಯಲು ಬಯಸುತ್ತೇನೆ. ನಾಲ್ಕನೆ ಕಂಡಿಕೆಯಲ್ಲಿ, ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಭಾರತ ರಾಷ್ಟ್ರಕ್ಕಾಗಿ, ಸಂವಿಧಾನವನ್ನು ರಚಿಸುತ್ತೇವೆಂದು ತಿಳಿಸಲಾಗಿದೆ. ಅದರ ಎಲ್ಲ ಅಧಿಕಾರಗಳೂ ಜನರಿಂದ ಲಭ್ಯವಾಗುವುದು ಎಂದು ಹೇಳಲಾಗಿದೆ. ಈ ತತ್ತ್ವಕ್ಕೆ ಸಂಬಂಧಿಸಿದಂತೆ, ಅದು ಬಹಳ ಯುಕ್ತವಾದುದು. ಪ್ರತಿಯೊಬ್ಬರೂ ಅದನ್ನು ಸ್ವಾಗತಿಸುತ್ತಾರೆ. ಆದರೆ ರಾಜಕೀಯಶಾಸ್ತ್ರದ ವಿದ್ಯಾರ್ಥಿಗಳು, ಈ ನಿಯಮಗಳನ್ನು ಹೇಗೆ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಬಲ್ಲರು. ನಮ್ಮ ಗೆಳೆಯರಲ್ಲೊಬ್ಬರು, ಇಂಗ್ಲೆಂಡ್‌ನ ಸಂವಿಧಾನವನ್ನು ಉದ್ಧರಿಸುತ್ತ, ಅಲ್ಲಿ ತತ್ತ್ವಗಳ ದುರ್ಬಳಕೆ ಹೇಗಾಗುತ್ತಿದೆ ಎಂಬುದನ್ನು ತಿಳಿಸಿದರು. ಹಲವು ಶತಮಾನಗಳ ಹಿಂದೆ ಇಂಗ್ಲೆಂಡ್‌ನ ಖ್ಯಾತ ರಾಜಕಾರಣಿ ಮಿ| ಹಾಬ್ಸ್, ರಾಜ್ಯದ ಎಲ್ಲ ಅಧಿಕಾರಗಳು ಜನರಿಂದಲೇ ಲಭ್ಯವಾಗಬೇಕೆಂಬ ತತ್ತ್ವವನ್ನು ಸ್ಥಾಪನೆಗೊಳಿಸಿದ್ದರು. ಆದರೆ ಅಲ್ಲಿನ ಚಕ್ರವರ್ತಿಗಳು ತತ್ತ್ವವನ್ನು ದುರುಪಯೋಗ ಮಾಡಿಕೊಂಡರು. ವಾಸ್ತವವಾಗಿ ಎಲ್ಲ ಅಧಿಕಾರಗಳೂ ಜನರಿಂದಲೇ ದೊರೆಯಬೇಕೆಂಬ ತತ್ತ್ವವನ್ನು ದೊರೆಗಳು ಒಪ್ಪಿಕೊಂಡಿದ್ದರು. ಅದೇ ವೇಳೆ, ಒಮ್ಮೆ ತಮ್ಮೆಲ್ಲ ಅಧಿಕಾರಗಳನ್ನು ಆಳುವ ಅರಸರಿಗೆ ಒಪ್ಪಿಸಿದ ಮೇಲೆ, ಅವು ಜನರಲ್ಲಿ ಉಳಿಯಲಾರವು ಎಂದು ಇಡೀ ವಿಶ್ವಕ್ಕೆ ಸಾರಿದರು. ಇದರ ದುಷ್ಪರಿಣಾಮವಾಗಿ ಹುಟ್ಟಿಕೊಂಡ 'ಪ್ರಭುಗಳ ದೈವದತ್ತ ಹಕ್ಕು' ಎಂಬ ಸಿದ್ಧಾಂತವನ್ನು ಚರಿತ್ರೆಯಲ್ಲಿ ಕಂಡಿದ್ದೇವೆ. ಆದುದರಿಂದ "ಎಲ್ಲ ಶಕ್ತಿ ಮತ್ತು ಅಧಿಕಾರಗಳೂ ಜನರಿಂದಲೆ ಪ್ರಾಪ್ತವಾಗುವುವು" ಎಂದಾಗ "ಎಲ್ಲ ಶಕ್ತಿ ಅಧಿಕಾರಗಳೂ ಜನತೆಯಲ್ಲಿ ಎಲ್ಲ ಕಾಲಕ್ಕೂ ನೆಲೆಗೊಳ್ಳುವುವು" ಎಂದು ಸ್ಪಷ್ಟ ಪಡಿಸಬೇಕಾದ ಅಗತ್ಯವಿದೆ. ಈ ಕಾರಣಕ್ಕಾಗಿಯೇ ಒಂದು ತಿದ್ದುಪಡಿಯನ್ನು ಪ್ರಸ್ತಾವಿಸುವ ಪ್ರಯತ್ನ ಮಾಡಿದೆ. ಆದರೆ ಅದು ಸಫಲವಾಗಲಿಲ್ಲ. ಆದುದರಿಂದ ನಾವು ಸಂವಿಧಾನದ ಕರಡು ಸಿದ್ಧ ಪಡಿಸುವಾಗ, ನಂತರದಲ್ಲಿ, ಈ ಅಂಶವನ್ನು ಪರ್ಯಾಲೋಚಿಸಿ, ಸಂವಿಧಾನದಲ್ಲಿ ನಿಗಮಿತಗೊಳಿಸಬೇಕು.

ಐದು ಮತ್ತು ಆರನೆಯ ಖಂಡಿಕೆಗಳಿಗೆ ಸಂಬಂಧಿಸಿದಂತೆ, ಅವುಗಳಲ್ಲಿ ಮೂಲತತ್ತ್ವಗಳು, ಆಕರ್ಷಕವಾಗಿಯೂ, ಅಪೇಕ್ಷಣೀಯವಾಗಿಯೂ ಅಡಕವಾಗಿವೆ. ಒಂದಲ್ಲೊಂದು ರೀತಿಯಲ್ಲಿ ಅವು ಎಲ್ಲ ರಾಷ್ಟ್ರಗಳ ಸಂವಿಧಾನಗಳಲ್ಲೂ ಅಡಕವಾಗಿವೆ. ಆದರೆ ಅವು ಅನುಷ್ಠಿತವಾಗುತ್ತಿಲ್ಲ. ಆದುದರಿಂದ ಇವುಗಳನ್ನು ಸಾಕಾರಗೊಳಿಸುವ ವಿಧಾನವನ್ನು ಕುರಿತು ನಾವು ಆಲೋಚಿಸುವುದಲ್ಲದೆ, ಸಂವಿಧಾನದ ಕರಡು ಸಿದ್ಧ ಪಡಿಸುವಾಗ, ಈ ವಿಷಯದ ಕಡೆ ವಿಶೇಷ ಗಮನ ಕೊಡಬೇಕು. ಸಂವಿಧಾನದ ತಯಾರಿಕೆಯ ಸಂದರ್ಭದಲ್ಲಿ, ಅದರ ಅನುಸಾರ ರಾಜ್ಯಗಳ ಸ್ಥಾಪನೆಯಾಗುವಾಗ ಎಲ್ಲ ಜನರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೊದಗಿಸಲಾಗುವುದೆಂದು ತಿಳಿಸಲಾಗಿದೆ. ಅದು ಒಳ್ಳೆಯದೆ. ಆದರೆ ಆ ಶಕ್ತಿ ಮತ್ತು ಅಧಿಕಾರವನ್ನು ಯಾರಿಗೆ ವಹಿಸಿಕೊಡಲಾಗುತ್ತದೋ ಅವರು 'ನ್ಯಾಯ' ಎಂಬ ಶಬ್ದಕ್ಕೆ ತಮ್ಮದೇ ವ್ಯಾಖ್ಯೆ ನೀಡಬಹುದು. ನಮ್ಮ ರಾಷ್ಟ್ರದಲ್ಲಿ ಶಕ್ತಿ ಮತ್ತು ಅಧಿಕಾರ ಎಲ್ಲವೂ ಬಂಡವಾಳಶಾಹಿಗಳ ಕೈಗೆ ಸಿಕ್ಕರೆ, ಅವರು 'ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ'ವನ್ನು ತಮ್ಮ ರೀತಿಯಲ್ಲೆ ವ್ಯಾಖ್ಯಾನಿಸಬಹುದು. ಆದರೆ ವಾಸ್ತವವಾಗಿ ಶಕ್ತಿ ಮತ್ತು ಅಧಿಕಾರವನ್ನು ಜನರ ಕೈಗೊಪ್ಪಿಸಿದರೆ, ಅವರ ಪ್ರತಿನಿಧಿಗಳು ಅವುಗಳಿಗೆ ಉಚಿತವಾದ ವ್ಯಾಖ್ಯಾನ ನೀಡಬಲ್ಲರು. ಆದುದರಿಂದ ನಮ್ಮ ಸಂವಿಧಾನದಲ್ಲಿ ಇಂತಹ ಮಂಡಳಿಗಳು ಸಂಸ್ಥೆಗಳು ಶಕ್ತಿ ಮತ್ತು ಅಧಿಕಾರಗಳು ವಹಿಸಿಕೊಂಡ ನಂತರ, ಮನಸೋ ಇಚ್ಛೆ, ನ್ಯಾಯ ಶಬ್ದಕ್ಕೆ ವ್ಯಾಖ್ಯಾನಿಸಿದಂತೆ ರಕ್ಷಣಾ ಕ್ರಮಗಳನ್ನು ಸಂವಿಧಾನದಲ್ಲಿ ಅಳವಡಿಸುವುದು ಅಗತ್ಯ. ಈ ಗುರಿ ಸಾಧಿಸಲು ಇರುವ ಮಾರ್ಗವೊಂದೆ. ಅದೆಂದರೆ – ನಾವು ಸಂವಿಧಾನವನ್ನು ರಚಿಸುವಾಗ ಮತ್ತು ಅದರಡಿಯಲ್ಲಿ ರಾಜ್ಯಗಳ ಸ್ಥಾಪನೆಯಾಗುವಾಗ,

ಬಂಡವಾಳಶಾಹಿ ತತ್ತ್ವದ ಮೇಲೆ ಆಗಲಾರದೆಂಬುದನ್ನು ಮೊದಲೆ ಘೋಷಿಸಬೇಕು. ಈಗ ಆ ಕ್ರಮ ಕೈಗೊಳ್ಳದಿದ್ದಲ್ಲಿ, ಮುಂದೆ, ಆಡಳಿತಗಾರರು ತಮ್ಮ ಮನಸ್ಸಿಗೆ ಬಂದಂತೆ ಅರ್ಥ ಕಲ್ಪಿಸಿ, ಜನರ ಹಿತಾಸಕ್ತಿಗೆ ಧಕ್ಕೆ ತರಬಹುದು.

ತಮ್ಮ ಸಮಕ್ಷಮದಲ್ಲಿ ಮುಸ್ಲಿಮ್ ಲೀಗ್, ಶ್ರೀ ಜಿನ್ನಾ ಬಗ್ಗೆ ಬಹಳಷ್ಟು ಹೇಳಿಯಾಗಿದೆ. ಅವುಗಳಲ್ಲಿ ಬಹುಅಂಶ ಸತ್ಯ. ಆದರೆ ನಾನು ತಿಳಿಸಲು ಇಷ್ಟ ಪಡುವುದೇನೆಂದರೆ, ಸಂವಿಧಾನದ ರಚನೆಗೆ ಮುನ್ನ ಅದು ಸಮಾಜವಾದಿ ನೆಲೆಗಟ್ಟಿನ ಮೇಲೆ ರಚಿಸಲ್ಪಡುವುದೆಂದು ನೀವು ಘೋಷಿಸಿದರೆ, ನಿಸ್ಸಂದೇಹವಾಗಿ ನಮ್ಮ ಮುಸ್ಲಿಮ್ ಸಹೋದರರೂ ಸೇರಿದಂತೆ, ಈ ಕಾರ್ಯದಲ್ಲಿ ಸಹಕಾರ ನೀಡಲು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ.

ಸಂವಿಧಾನದ ರಚನೆಯಾದ ನಂತರ, ಅದರ ನಿಯಮಗಳು, ನಮ್ಮ ಆಡಳಿತಗಾರರಿಂದ ಅರ್ಥೈಸಲ್ಪಡುತ್ತದೆ ಎಂಬುದರ ಬಗ್ಗೆ ಎಲ್ಲ ಅಲ್ಪಸಂಖ್ಯಾತರು–ಮುಸ್ಲಿಮ್‌ರಾಗಲಿ ಹರಿಜನರಾಗಲಿ–ತಮ್ಮ ಎದೆಯೊಳಗೆ ಒಂದು ಭೀತಿಯನ್ನು ಹುದುಗಿಸಿಟ್ಟುಕೊಂಡಿರುತ್ತಾರೆ. ಆದುದರಿಂದ ಅವರ ಸಂದೇಹ ನಿವಾರಣೆಗಾಗಿ, ನಮ್ಮ ಸಂವಿಧಾನ ಮತ್ತು ತನ್ನಿಮಿತ್ತ ಸರ್ಕಾರವು ರೂಪುಗೊಳ್ಳುವುದು, ಸಾಮಾಜಿಕ ನೆಲೆಗಟ್ಟಿನ ಮೇಲೆ ಎಂಬುದಾಗಿಯೂ, ಬಂಡವಾಳಶಾಹಿ ಬುನಾದಿಯ ಮೇಲೆ ಅಲ್ಲವೇ ಅಲ್ಲ ಎಂಬುದಾಗಿಯೂ, ನಾವು ಈಗಲೆ ಘೋಷಿಸಬೇಕು. ಈ ಅಂಶವನ್ನು ನಾವು ಸ್ಪಷ್ಟ ಪಡಿಸಬೇಕು. ಆ ಕಾರಣದಿಂದಲೆ ನಾನೊಂದು ತಿದ್ದುಪಡಿಯನ್ನು ಪ್ರಸ್ತಾವಿಸಿ, 'ಭಾರತ' ಎಂಬ ಹೆಸರಿನ ಹಿಂದೆ 'ಸಮಾಜವಾದಿ' ಎಂಬ ಪದವನ್ನು ಸೇರಿಸಬೇಕೆಂದು ಸೂಚಿಸಿದ್ದೆ. ನಾನದನ್ನು ಪುನರುಚ್ಚರಿಸುತ್ತಿದ್ದೇನೆ. ಸಂವಿಧಾನದ ತತ್ತ್ವವನ್ನು ಕಾರ್ಯರೂಪಕ್ಕೆ ತರಬೇಕಿದ್ದರೆ, ಅದು ಸಾಧ್ಯವಾಗುವುದು ಸಮಾಜವಾದಿ ತತ್ತ್ವದ ಮೇಲೆ ಸಂವಿಧಾನ ರಚನೆಯಾದಾಗ ಮಾತ್ರ. ಅಂತಹ ಸಂವಿಧಾನದ ರಚನೆಯಾಗಬೇಕಾದುದು ಅಗತ್ಯ. ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು ಅವರು, ಪ್ರಾರಂಭದಲ್ಲಿ ಭಾಷಣ ಮಾಡುತ್ತ, ನನ್ನ ತಿದ್ದುಪಡಿಯನ್ನು ಉದ್ಧರಿಸಿ ಒಂದು ಮಾತು ಹೇಳಿದರು: ಸ್ಪಷ್ಟವಾಗಿ, ತಾವು ಸಂವಿಧಾನವನ್ನು ಸಮಾಜವಾದಿ ತತ್ತ್ವದ ತಳಹದಿಯ ಮೇಲೆ ರಚಿಸುವುದಾಗಿಯೂ, ಅದರಲ್ಲಿ ಭಿನ್ನಾಭಿಪ್ರಾಯದ ಪ್ರಶ್ನೆಯೇ ಯಾರೂ ಎತ್ತಬಾರದೆಂದು ಹೇಳಿದರು. ನಾವು ನಿಜವಾಗಿ ಜನತೆಗೆ ಒಳಿತನ್ನು ಮಾಡುವುದಾದರೆ, ಬ್ರಿಟಿಷ್ ಆಳ್ವಿಕೆಯನ್ನು ರದ್ದುಗೊಳಿಸುವುದಷ್ಟೆ ಅಲ್ಲದೆ ಜನರ ಅಭಿವೃದ್ಧಿಗೆ ಸಂಪೂರ್ಣ ಅವಕಾಶ ದೊರೆಯಬೇಕೆಂಬುವುದಾದರೆ, ಆ ನಿಟ್ಟಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯಾಗುವುದೇ ಆಗಿದ್ದರೆ, ನಾವು ಸಮಾಜವಾದಿ ತತ್ತ್ವದ ಆಧಾರದ ಮೇಲೆಯೇ ಸಂವಿಧಾನವನ್ನು ರಚಿಸುವುದು ಅತ್ಯಗತ್ಯ. ಮುಸ್ಲಿಮರು, ಹರಿಜನರು, ಯಾರೇ ಆಗಲಿ ಅವರೆಲ್ಲರ ಈಗಿನ ಸಮಸ್ಯೆಗಳು ಇದರಿಂದ ನಿವಾರಣೆಯಾಗುವುದೆಂದು ಕೊಳ್ಳುತ್ತೇನೆ. ನಮ್ಮಲ್ಲಿ ಅನೇಕರಿಗೆ ಸಮಾಜವಾದಿ ತತ್ತ್ವಗಳು ಅಪಥ್ಯ. ಹಾಗಾಗಿ ಅವರು ಅವುಗಳ ಪರವಾಗಿಲ್ಲ. ಆದರೆ ಕಾಂಗ್ರೆಸ್ ಮಟ್ಟಿಗೆ ಹೇಳುವುದಾದರೆ, ಅದು ಈ ತತ್ತ್ವವನ್ನು ಒಪ್ಪಿಕೊಂಡಿದೆ. ಅದು ತನ್ನ ಚುನಾವಣಾ ಪ್ರಣಾಳಿಕೆಯನ್ನು ಜಮೀನ್ದಾರಿ ಪದ್ಧತಿಯ ನಿರ್ಮೂಲನ ಬದ್ಧವಾಗಿರುವುದಾಗಿ ಘೋಷಿಸಿದೆ. ಪ್ರಮುಖ ಕೈಗಾರಿಕೆಗಳ ರಾಷ್ಟ್ರೀಕರಣದ ಪರವಾಗಿಯೂ ಘೋಷಿಸಿದೆ. ಆದುದರಿಂದ ಈ ತತ್ತ್ವಗಳನ್ನು ಆಗಲೆ ಅದು ಒಪ್ಪಿರುವಾಗ, ಅವುಗಳ ಆಧಾರದ ಮೇಲೆಯೇ ಸಂವಿಧಾನವನ್ನು ರಚಿಸುವುದು ನಮ್ಮ ಕರ್ತವ್ಯ. ಕೆಲವರಿಗೆ ಅದರ ಬಗ್ಗೆ ಆಕ್ಷೇಪಣೆ ಇರಬಹುದು. ಆದರೆ ೯೯ ಪ್ರತಿಶತ ಅಥವಾ ೯೮ ಪ್ರತಿಶತ ಜನರು ಆಕ್ಷೇಪಿಸಲಾರರೆಂದು ಹೇಳುತ್ತೇವೆ. ಸಾರ್ವಜನಿಕರು, ನಾವು ಸಮ್ಮತಿಸಿದ ಸಮಾಜವಾದಿ ತತ್ತ್ವಗಳ ಅಡಿಪಾಯದ ಮೇಲೆ ಸಂವಿಧಾನವನ್ನು ರಚಿಸುವುದಾದರೆ, ಸಂಪೂರ್ಣ ಪ್ರಯೋಜನ ಪಡೆಯುತ್ತಾರೆ.

ತಮ್ಮ ಗಮನವನ್ನು ಮತ್ತೊಂದು ಮೂಲತತ್ತ್ವದ ಕಡೆಗೆ ಸೆಳೆಯಬಯಸುತ್ತೇನೆ. ನಾವು ಒಂದು ಸರ್ವತಂತ್ರಸ್ವತಂತ್ರ ಸಾರ್ವಭೌಮ ರಾಷ್ಟ್ರವನ್ನು ಸ್ಥಾಪಿಸುವ ಸಂಕಲ್ಪ ಹೊತ್ತಿರುವಾಗ, ಈ ಸಂವಿಧಾನ ರಚನಾಸಭೆಯ ಸಾರ್ವಭೌಮತ್ವವನ್ನೂ ನಾವು ನಿರ್ಣಯಿಸಬೇಕು. ಅದಕ್ಕೆ ಸಾರ್ವಭೌಮ ಹಕ್ಕುಗಳಿಲ್ಲವಾದರೆ, ಆ ಸಭೆ ಸಾರ್ವಭೌಮತ್ವ ಹಕ್ಕುಗಳನ್ನು ಸ್ಥಾಪಿಸುವ ಸಂವಿಧಾನವನ್ನೂ ಸಹ ರಚಿಸಲಾಗದು. ಈ ನಿಲುವಳಿಯಲ್ಲಿ,

ಸಂವಿಧಾನ ರಚನಾಸಭೆ ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯವನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಅಂತಹ ಸನ್ನಿವೇಶದಲ್ಲಿ, ನಾವು ಈ ಸಭೆಯನ್ನೂ ಸಾರ್ವಭೌಮ ಸಭೆ (ಮಂಡಳಿ) ಎಂದು ಘೋಷಿಸಬೇಕು. ನಮ್ಮ ಪ್ರಕಾರ್ಯಗಳ ಮೇಲೆ ರಾಜ್ಯಪತ್ರ (ಮೇ.೧೬) ಹಲವಾರು ಇತಿಮಿತಿಗಳನ್ನು ನಿರ್ಬಂಧಗಳನ್ನು ಹೇರಿದೆ. ಅದರ ವಿವರಕ್ಕೆ ನಾನು ಹೋಗಲಾರೆ; ಅದರ ಅಗತ್ಯವೂ ಇಲ್ಲ. ಅದು ನಿಮ್ಮೆಲ್ಲರಿಗೂ ಗೊತ್ತಿದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ನಾನು ತಮಗೊಂದು ವಿಷಯವನ್ನು ತಿಳಿಸಲು ಇಷ್ಟ ಪಡುತ್ತೇನೆ. ನಾವಿಲ್ಲಿ ಸಭೆ ಸೇರಿರುವುದು ರಾಜ್ಯಪತ್ರದ ಅನುಜ್ಞೆ ಪಡೆದು, ಸಭೆ ಹುಟ್ಟಿದೆ ಎಂಬ ಕಾರಣಕ್ಕಾಗಿ ಅಲ್ಲ; ಕಳೆದ ೫೦–೬೦ ವರುಷಗಳಿಂದ ನಮ್ಮ ಜನತೆ ಅನುಭವಿಸುತ್ತ ಬಂದಿರುವ ಕಷ್ಟಕಾರ್ಪಣ್ಯಗಳ ಫಲವಾಗಿ ಸಭೆ ಅಸ್ತಿತ್ವಕ್ಕೆ ಬಂದಿದೆ. ವಿಶೇಷವಾಗಿ ಕಳೆದ ಐದಾರು ವರುಷಗಳ ತ್ಯಾಗದಿಂದ ದೇಶ ಅನುಭವಿಸಿದ ಯಾತನೆ ಹಾಗೂ ಮಾಡಿದ ತ್ಯಾಗವೇ ಈ ಸಭೆಯನ್ನು ಹುಟ್ಟುಹಾಕಲು ಬ್ರಿಟಿಷರನ್ನ ಒತ್ತಾಯ ಪಡಿಸಿರುವುದು ಮತ್ತು ಇದರ ಉದ್ದೇಶ ಅಧಿಕಾರ ಹಸ್ತಾಂತರ. ನಾನಿದನ್ನು ಮತ್ತೊಮ್ಮೆ ಸ್ಪಷ್ಟ ಪಡಿಸುತ್ತಿದ್ದೇನೆ. ನಾವಿಲ್ಲಿ ಸಮಾವೇಶಗೊಂಡಿರುವುದು ರಾಜ್ಯಪತ್ರದ ಔದಾರ್ಯದಿಂದಲ್ಲ. ರಾಷ್ಟ್ರದಲ್ಲಿ ಕಳೆದ ಐದಾರು ವರುಷಗಳಿಂದ ನಡೆಯುತ್ತ ಬಂದಿರುವ ಚಳವಳಿಯಿಂದ.

ಸಂವಿಧಾನ ರಚನಾಸಭೆ, ೧೯೪೨ರಲ್ಲಿ ಕಾಂಗ್ರೆಸ್ ಜಾರಿಗೊಳಿಸಿದ 'ಭಾರತ ಬಿಟ್ಟು ತೊಲಗಿ' ನಿಲುವಳಿಯ ಫಲಶ್ರುತಿ. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸಾಹಸಕ್ಕೆ ಸಿಕ್ಕ ಫಲ. ಅದರ ಪ್ರಯೋಜನಗಳು ನಮ್ಮ ಮುಂದಿವೆ. ಬೃಹತ್ ಶಕ್ತಿಗಳ ವಿರುದ್ಧ ಹೋರಾಡಿ, ನಮ್ಮ ರಾಷ್ಟ್ರದ ಬಿಡುಗಡೆ ಪಡೆಯಲು ಸಂಘಟಿತರಾಗುವುದು ಹೇಗೆಂದು ಮಾರ್ಗದರ್ಶನ ನೀಡಿದವರು ನಮ್ಮ ಗೌರವಾನ್ವಿತ ಮಹಾನ್ ಕ್ರಾಂತಿಕಾರಿ ಮುಖಂಡ ಶ್ರೀ ಸುಭಾಷ್‌ಚಂದ್ರ ಬೋಸ್ ಅವರು. ಅವರ ಸಾಹಸ ಕೃತ್ಯದ ಫಲವಾಗಿ ನಮಗೆ ಈ ಸಭೆ, ಸಂವಿಧಾನ ಮತ್ತದರ ಪ್ರಯೋಜನಗಳೆಲ್ಲವೂ ಲಭ್ಯವಾಗಿವೆ. ಆದುದರಿಂದ, ಸಭೆಯ ಅಸ್ತಿತ್ವಕ್ಕೆ ರಾಜ್ಯಪತ್ರ ಕಾರಣವೆಂದು ಅದಕ್ಕೆ ಮಾನ್ಯತೆ ನೀಡುವುದು ಸಂಪೂರ್ಣವಾಗಿ ತಪ್ಪಾಗುತ್ತದೆ. ಸಭೆ ರಾಷ್ಟ್ರದ ಒಳಗೂ ಹೊರಗೂ, ಕಳೆದ ಐದಾರು ವರುಷಗಳಿಂದ ನಡೆದು ಬಂದಿರುವ ಸ್ವಾತಂತ್ರ್ಯ ಚಳವಳಿಯ ಕೂಸು. ಒಂದಂಶ ಸ್ಪಷ್ಟ ಪಡಿಸಲಿಚ್ಛಿಸುತ್ತೇನೆ. ಸಭೆಗೆ ಪ್ರಾಪ್ತವಾಗಿರುವ ಶಕ್ತಿ ಮತ್ತು ಅಧಿಕಾರ ಜನತೆಯಿಂದ ಲಭಿಸಿದ್ದು, ಬ್ರಿಟಿಷ್ ಸಂಸತ್ ಸಭೆಯಿಂದಲ್ಲ. ಆದುದರಿಂದ ಈ ಸಭೆಯನ್ನು ಸಾರ್ವಭೌಮ ಸಭೆಯೆಂದು ನಾವು ಘೋಷಿಸಬೇಕು. ಅಸಂವಿಧಾನಿಕ ನಿರ್ಬಂಧಗಳೇನೇ ಇರಲಿ, ಅವುಗಳನ್ನು ಬ್ರಿಟಿಷ್ ಸಂಸತ್ತು ಸಭೆಯ ಮೇಲೆ ಹೇರಲಾಗದು ಮತ್ತು ನಾವದನ್ನು ಒಪ್ಪಿಕೊಳ್ಳಲೂ ಸಿದ್ಧರಿಲ್ಲ. ನಿಲುವಳಿಯ ತತ್ತ್ವಗಳ ಸಾಕಾರಕ್ಕಾಗಿ, ನಮ್ಮ ರಾಷ್ಟ್ರದಲ್ಲೊಂದು ಸ್ವತಂತ್ರ ಸರ್ಕಾರವನ್ನು ಸ್ಥಾಪಿಸಲು ಏನೆಲ್ಲ ಕ್ರಮಗಳನ್ನು ಪ್ರಸ್ತಾವಿಸಲಾಗಿದೆಯೋ ಎಲ್ಲವನ್ನೂ ಅಳವಡಿಸಬೇಕು. ಇದರಿಂದ ಒಂದಂಶ ಸ್ಫಟಿಕಸದೃಶವಾಗಿ ಸ್ಪಷ್ಟವಾಗುತ್ತದೆ. ನಮ್ಮ ಸ್ವತಂತ್ರ ಸರ್ಕಾರ ಸಮಾಜವಾದಿ ತತ್ತ್ವಗಳನ್ನು ಆಧರಿಸಿರುತ್ತದೆ. ಅದರಿಂದ ಈ ನಾಡಿನ ಬಡಜನತೆಗೆ ಸಂಪೂರ್ಣ ಲಾಭ ದೊರೆಯುತ್ತದೆ.

ನಾನು ತಮ್ಮ ವೇಳೆಯನ್ನು ಇನ್ನಷ್ಟು ತೆಗೆದುಕೊಳ್ಳಬಯಸದೆ ಈ ಮಾತುಗಳನ್ನಾಡಿ, ನಿಲುವಳಿಗೆ ಬೆಂಬಲ ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು**

ಕಳೆದ ಹಲವಾರು ದಿನಗಳಿಂದ ಈ ನಿಲುವಳಿಯ ಮೇಲೆ ಚರ್ಚೆ ನಡೆಸಿದ್ದೇವೆ. ನನ್ನ ತೀರ್ಮಾನದಂತೆ, ಈ ಚರ್ಚೆಯನ್ನು ಪರಿಸಮಾಪ್ತಿಗೊಳಿಸಲು ಸದಸ್ಯರು ಬಯಸುತ್ತಾರೆಂದುಕೊಳ್ಳುತ್ತೇನೆ. ಆದುದರಿಂದ ನಾಳೆ ಬೆಳಗ್ಗೆ, ಚರ್ಚೆಗಳನ್ನು ಸಂಪನ್ನಗೊಳಿಸಿ, ಈ ನಿಲುವಳಿಯನ್ನು ಮುಕ್ತಾಯಗೊಳಿಸಬಹುದೆಂದು ನಂಬುತ್ತೇನೆ.

ಸಭೆಯ ಕಾರ್ಯಕಲಾಪಗಳನ್ನು ನಾಳೆ ಬೆಳಗ್ಗೆ ಹನ್ನೊಂದು ಘಂಟೆಗೆ ಮುಂದೂಡಲಾಗಿದೆ.

ನಾಳೆ, ಇನ್ನೊಂದು ನಿಲುವಳಿಯನ್ನು ಚರ್ಚೆಗೆ ತೆಗೆದುಕೊಳ್ಳೋಣ. ಪಂಡಿತ್ ಜವಾಹರ್‌ಲಾಲ್

ನೆಹರು ಅವರು ಆ ನಿಲುವಳಿಯ ಬಗ್ಗೆ ಅಧಿಸೂಚನೆಯನ್ನು ನೀಡಿದ್ದು, ಇಂದು ಅದನ್ನು ಚರ್ಚೆಗೆ ತೆಗೆದುಕೊಂಡಿರಲಿಲ್ಲ.

**ಮಿ. ಕೆ. ಸಂತಾನಂ :** (ಮದರಾಸು : ಸಾಮಾನ್ಯ) : ನಾಳೆ ಆಯವ್ಯಯ ಪತ್ರ ಚರ್ಚೆಗೆ ಬರಲಿದೆಯೇ?

ಸನ್ಮಾನ್ಯ ಅಧ್ಯಕ್ಷರು,

ನಾಳೆ ಬರಬಹುದು. ಅದು ಕಾರ್ಯಸೂಚಿಯಲ್ಲಿದೆ.

ನಂತರ ಸಭೆಯು, ೧೯೪೭ರ ಜನವರಿ ೨೨ನೇ ತಾರೀಖು ಬುಧವಾರ ಬೆಳಗ್ಗೆ ೧೧ ಘಂಟೆಗೆ ಮುಂದೂಡಲ್ಪಟ್ಟಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಭಾಷಾಂತರ]